ನೋಂದಣಿ ಸಂಖ್ಯೆ : ಡಿ.ವೈ.ಆರ್.270
ದಿನಾಂಕ : 16–09–1963

ಬ್ಯಾಂಕಿಂಗ್ ವ್ಯವಹಾರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ನಂ.
UBD KA 912 P, Dt. 11-11-1987

ಆಡಳಿತ ಕಚೇರಿ ಸ್ಥಳಾಂತರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ನಂ.
UBD BG BL AO 394, Dt. 22-06-2000

**TGMC BANK**

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು – 572 103.
☎ : 0816–4021102/03
✉ : tgmc.ho@tgmc.bank.in
🌐 : https://tgmc.bank.in

## 2025–26ನೇ ಸಾಲಿನ

## ಲೆಕ್ಕ ಪರಿಶೋಧಕರ ವರದಿ
## ಹಾಗೂ
## ಆಡಳಿತ ಮಂಡಳಿಯವರ ಸಮಾಧಾನಗಳು

**ರಮೇಶ ಎಂ ವೈ & ಕೋ., ಸನ್ನದು ಲೆಕ್ಕ ಪರಿಶೋಧಕರು,**

**ನಂ. 271, "ಆಶ್ರಯ", ಲಕ್ಷ್ಮೀ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–570024.**

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.,ನ 2025-26ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

## ಭಾಗ–1

### ಬ್ಯಾಂಕಿನ ಪರಿಚಯಾತ್ಮಕ ವಿವರಗಳು

**1) ಬ್ಯಾಂಕಿನ ವಿವರಗಳು:**

| | |
|---|---|
| **1) ಬ್ಯಾಂಕಿನ ಹೆಸರು :** | ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., (ಟಿ.ಜಿ.ಎಂ.ಸಿ ಬ್ಯಾಂಕ್ ಲಿ.,) |
| **2) ಬ್ಯಾಂಕಿನ ವಿಳಾಸ :** | ಆಡಳಿತ ಕಚೇರಿ, ಬಿ.ಹೆಚ್.ರಸ್ತೆ, ತುಮಕೂರು – 572103 |
| **3) ಬ್ಯಾಂಕಿನ ನೋಂದಣಿ ಸಂಖ್ಯೆ :**<br>**ದಿನಾಂಕ** | ಸಹಕಾರ ಸಂಘಗಳ ಉಪ ನಿಬಂಧಕರು, ತುಮಕೂರು, ಇವರ ಪತ್ರದ ಸಂಖ್ಯೆ : DYR/270<br>16-09-1963 |
| **4) ರಿಜ಼ರ್ವ್ ಬ್ಯಾಂಕಿನಿಂದ ಪಡೆದ ಬ್ಯಾಂಕಿಂಗ್ ಲೈಸೆನ್ಸ್ : ಕ್ರಮಾಂಕ ಹಾಗೂ ದಿನಾಂಕ** | ಭಾರತೀಯ ರಿಜ಼ರ್ವ್ ಬ್ಯಾಂಕ್ ಲೈಸೆನ್ಸ್ ಸಂಖ್ಯೆ: UBD KA 912 P ದಿನಾಂಕ 11-11-1987 |
| **5) ಬ್ಯಾಂಕಿನ ಕಾರ್ಯಕ್ಷೇತ್ರ(ಬ್ಯಾಂಕಿನ ಉಪ ವಿಧಿ ಸಂಖ್ಯೆಯೊಂದಿಗೆ ವಿವರಿಸಿ) :** | ಬೈಲಾ ಸಂಖ್ಯೆ 3ರ ಪ್ರಕಾರ ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ಇಡೀ ಕರ್ನಾಟಕ ರಾಜ್ಯದ ವ್ಯಾಪ್ತಿಗೆ ಸೀಮಿತವಾಗಿದೆ. |

**2) ಬ್ಯಾಂಕಿನ ಮುಖ್ಯ ಉದ್ದೇಶಗಳು/ಚಟುವಟಿಕೆಗಳು (ಬ್ಯಾಂಕಿನ ಉಪವಿಧಿ ಸಂಖ್ಯೆಯೊಂದಿಗೆ ವಿವರಿಸಿ):**

| |
|---|
| 1) ಬೈಲಾ ಸಂಖ್ಯೆ 5.1ರ ಪ್ರಕಾರ ಬ್ಯಾಂಕಿನ ಸದಸ್ಯರು, ಸಹ ಸದಸ್ಯರು, ನಾಮಮಾತ್ರ ಸದಸ್ಯರು ಮತ್ತು ಬ್ಯಾಂಕಿನ ಠೇವಣಿದಾರರಲ್ಲಿ ಮಿತವ್ಯಯ, ಸ್ವಸಹಾಯ ಮತ್ತು ಸಹಕಾರ ಭಾವನೆಗಳನ್ನು ಪ್ರೋತ್ಸಾಹಿಸುವುದು. |
| 2) ಬೈಲಾ ಸಂಖ್ಯೆ 5.2ರ ಪ್ರಕಾರ 1949ರ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ (ಸಹಕಾರ ಸಂಘಗಳಿಗೆ ಅನ್ವಯವಾಗುವ) ಕಲಂ 5(ಬಿ)ನಲ್ಲಿ ವಿವರಿಸಿರುವಂತೆ, ಬ್ಯಾಂಕಿಂಗ್ ವ್ಯವಹಾರಗಳನ್ನು ಕೈಗೊಳ್ಳುವುದು ಮತ್ತು ಸದರಿ ಕಾಯ್ದೆಯ ಕಲಂ 6ರ ಪ್ರಕಾರ ಇತರೆ ಬ್ಯಾಂಕಿಂಗ್ ವ್ಯವಹಾರಗಳನ್ನು ಕೈಗೊಳ್ಳುವುದು. |
| 3) ಬೈಲಾ ಸಂಖ್ಯೆ 5.3ರ ಪ್ರಕಾರ ಹಣವನ್ನು ಸಂಗ್ರಹಿಸುವುದು ಅಥವಾ ಸಾಲವಾಗಿ ಪಡೆಯುವುದು. |
| 4) ಬೈಲಾ ಸಂಖ್ಯೆ 5.4ರ ಪ್ರಕಾರ ಸದಸ್ಯರ ಮತ್ತು ಸಮಾಜದಲ್ಲಿನ ಆರ್ಥಿಕವಾಗಿ ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಯೋಜನೆಗಳನ್ನು ತಯಾರಿಸುವುದು ಮತ್ತು ಹಣಕಾಸಿನ ಸಹಾಯ ಮಾಡುವುದು. |
| 5) ಬೈಲಾ ಸಂಖ್ಯೆ 5.5ರ ಪ್ರಕಾರ ಕಂತು ಖರೀದಿಯ (ಹೈರ್ ಪರ್ಚೇಸ್) ಅಥವಾ ತೋರಾಧಾರ (ಹೈಪಾತಿಕೇಷನ್)ದ ಆಧಾರದ ಮೇಲೆ ಮೋಟಾರು ವಾಹನಗಳ ಕಾಯ್ದೆಯಲ್ಲಿ ವಿವರಿಸಿರುವಂತೆ ಮೋಟಾರು ವಾಹನಗಳನ್ನು ಕೊಳ್ಳಲು ಅಥವಾ ಯಂತ್ರೋಪಕರಣಗಳನ್ನು ಮತ್ತು ಇತರೆ ಯಂತ್ರಗಳನ್ನು ಕೊಳ್ಳಲು ಸದಸ್ಯರಿಗೆ ಸಾಲ ಒದಗಿಸುವುದು. |

| |
|---|
| 6) ಬೈಲಾ ಸಂಖ್ಯೆ 5.6ರ ಪ್ರಕಾರ ಬ್ಯಾಂಕಿನ ವ್ಯವಹಾರಗಳ ಅವಶ್ಯಕತೆಗಾಗಿ ಮತ್ತು ಅನುಕೂಲಕ್ಕಾಗಿ ನಿವೇಶನ, ಕಟ್ಟಡಗಳನ್ನು ಹೊಂದುವುದು, ಸ್ವಾಧೀನಪಡಿಸಿಕೊಳ್ಳುವುದು, ಕಟ್ಟಡ ನಿರ್ಮಿಸುವುದು, ಬದಲಾವಣೆ ಮಾಡುವುದು ಮತ್ತು ಇತರೆ ಕಾರ್ಯಗಳನ್ನು ಕೈಗೊಳ್ಳುವುದು. |
| 7) ಬೈಲಾ ಸಂಖ್ಯೆ 5.7ರ ಪ್ರಕಾರ ಭಾರತೀಯ ರಿಜರ್ವ್ ಬ್ಯಾಂಕಿನ ಪೂರ್ವಾನುಮತಿ ಪಡೆದು ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಶಾಖೆಗಳನ್ನು, ಉಪ ಶಾಖೆಗಳನ್ನು, ಪಾವತಿ ಕಚೇರಿ ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡಬಹುದಾದ ಕಚೇರಿ ಮುಂತಾದವುಗಳನ್ನು ತೆರೆಯುವುದು. |
| 8) ಬೈಲಾ ಸಂಖ್ಯೆ 5.8ರ ಪ್ರಕಾರ ಗ್ರಾಹಕರ ಪರವಾಗಿ ಎಲ್ಲಾ ವಿಧವಾದ ಮುಚ್ಚಳಿಕೆಗಳು, ಹುಂಡಿಗಳು, ಪ್ರಮಾಣ ಪತ್ರಗಳು, ಡ್ರಾಫ್ಟ್‌ಗಳು, ವಾರೆಂಟ್‌ಗಳು, ಷೇರು ಪ್ರಮಾಣ ಪತ್ರಗಳು ಮತ್ತಿತರ ಆಧಾರ ಪತ್ರಗಳನ್ನು ಹೊರಡಿಸುವುದು, ಅಂಗೀಕರಿಸುವುದು, ಖರೀದಿಸುವುದು ಅಥವಾ ಮಾರಾಟ ಮಾಡುವುದು. |
| 9)ಬೈಲಾ ಸಂಖ್ಯೆ 5.9ರ ಪ್ರಕಾರ ಬ್ಯಾಂಕಿನ ಹೆಚ್ಚುವರಿ ಸಂಪನ್ಮೂಲಗಳನ್ನು ಸರಕಾರದ ಪ್ರಾಮಿಸರಿ ನೋಟುಗಳಲ್ಲಿ, ಋಣ ಪತ್ರಗಳಲ್ಲಿ, ಷೇರುಗಳಲ್ಲಿ ಮತ್ತು ಸರಕಾರ ಖಾತರಿ ಹೊಂದಿದ ಸಹಕಾರ ಸಂಘಗಳ ಸಾಲ ಪತ್ರಗಳಲ್ಲಿ ಮತ್ತು ಕಾಯ್ದೆಯ ಕಲಂ 58ರನ್ವಯ ಇತರೆ ಸಂಸ್ಥೆಗಳಲ್ಲಿ ತೊಡಗಿಸುವುದು |
| 10)ಬೈಲಾ ಸಂಖ್ಯೆ 5.10ರ ಪ್ರಕಾರ ಸಹಕಾರ ಶಿಕ್ಷಣವನ್ನು ಪ್ರೋತ್ಸಾಹಿಸಲು ನಿಧಿಗಳನ್ನು ಸ್ಥಾಪಿಸುವುದು. |
| 11)ಬೈಲಾ ಸಂಖ್ಯೆ 5.11ರ ಪ್ರಕಾರ ನಿರ್ದೇಶಕ ಮಂಡಳಿಯಿಂದ ರೂಪಿತವಾದ ನಿಯಮಗಳಿಗನುಸಾರವಾಗಿ ಸಿಬ್ಬಂದಿಯವರ ಅಥವಾ ಸದಸ್ಯರ ಹಾಗೂ ಸಿಬ್ಬಂದಿಯವರ ಆಶ್ರಿತರ ಅನುಕೂಲಕ್ಕಾಗಿ ನಿವ್ವಳ ಲಾಭದಿಂದ ನಿಧಿಯನ್ನು ಸ್ಥಾಪಿಸುವುದು ಅಥವಾ ನೆರವು ನೀಡುವುದು. |
| 12) ಬೈಲಾ ಸಂಖ್ಯೆ 5.12ರ ಪ್ರಕಾರ ನಿರ್ದೇಶಕ ಮಂಡಳಿಯು ರೂಪಿಸುವ ನಿಯಮಗಳ ಮಿತಿಯಲ್ಲಿ ಬ್ಯಾಂಕಿನ ಸದಸ್ಯರ ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಲು ನಿಧಿಯನ್ನು ರೂಪಿಸಿಕೊಳ್ಳುವುದು. |
| 13) ಬೈಲಾ ಸಂಖ್ಯೆ 5.13ರ ಪ್ರಕಾರ ನಿರ್ದೇಶಕ ಮಂಡಳಿಯಿಂದ ರೂಪಿತವಾದ ನಿಯಮಗಳಿಗೆ ಅನುಸಾರವಾಗಿ ಬ್ಯಾಂಕಿನ ಸದಸ್ಯರ ಅಲ್ಪಾವಧಿ ಹುಂಡಿಗಳನ್ನು ಮತ್ತು ವಹಿವಾಟಿನ ಬಿಲ್ಲುಗಳನ್ನು ವಟ್ಟಾವಣೆ (ಡಿಸ್ಕೌಂಟ್) ಮಾಡುವುದು. |
| 14) ಬೈಲಾ ಸಂಖ್ಯೆ 5.14ರ ಪ್ರಕಾರ ಸದಸ್ಯರ ಹಾಗೂ ಗ್ರಾಹಕರ ಪರವಾಗಿ ಖಾತರಿಗಾರನಾಗಿ (ಗ್ಯಾರಂಟರ್) ವರ್ತಿಸುವುದು ಮತ್ತು ಸರಕಾರ ಅಥವಾ ಅರೆ ಸರಕಾರಿ ಸಂಸ್ಥೆಗಳಿಗೆ ಖಾತರಿ ನೀಡುವುದು. |
| 15) ಬೈಲಾ ಸಂಖ್ಯೆ 5.15ರ ಪ್ರಕಾರ ನಿರುದ್ಯೋಗಸ್ಥರಿಗೆ ಸ್ವಂತ ಉದ್ಯಮ/ ಉದ್ಯೋಗ ಸ್ಥಾಪಿಸಲು ಆರ್ಥಿಕ ಮತ್ತು ತಾಂತ್ರಿಕ ನೆರವನ್ನೊದಗಿಸುವುದು. |
| 16) ಬೈಲಾ ಸಂಖ್ಯೆ 5.16ರ ಪ್ರಕಾರ ಸಾಲ ಮತ್ತು ಮುಂಗಡಗಳನ್ನು ಕೊಡಲು ಮತ್ತು ಪ್ರವಾಸಿ ಚೆಕ್ಕುಗಳನ್ನು ನೀಡಲು ವ್ಯವಸ್ಥೆ ಮಾಡುವುದು. |
| 17) ಬೈಲಾ ಸಂಖ್ಯೆ 5.17ರ ಪ್ರಕಾರ ಸಣ್ಣ ಕೈಗಾರಿಕೆಗಳಿಗೆ, ಗೃಹ ಕೈಗಾರಿಕೆಗಳಿಗೆ, ವಾಹನ ಸೌಕರ್ಯ ಒದಗಿಸುವ ಉದ್ದಿಮೆದಾರರಿಗೆ ಮತ್ತು ಸ್ವಯಂ ಉದ್ಯೋಗದಲ್ಲಿ ತೊಡಗಿರುವವರಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಅಥವಾ ವ್ಯಾಪಾರ ವ್ಯವಹಾರಗಳನ್ನು ಪ್ರಾರಂಭಿಸಲು ಆರ್ಥಿಕ ಮತ್ತು ತಾಂತ್ರಿಕ ಸಹಾಯ ಒದಗಿಸುವುದು. |
| 18)ಬೈಲಾ ಸಂಖ್ಯೆ 5.18ರ ಪ್ರಕಾರ ಸಾಲ ಮತ್ತು ಮುಂಗಡಗಳನ್ನು ಒದಗಿಸುವ ಸಲುವಾಗಿ ಬ್ಯಾಂಕುಗಳೊಡನೆ ಮತ್ತುಇತರ ಆರ್ಥಿಕ ನೆರವು ನೀಡುವ ಸಂಸ್ಥೆಗಳೊಂದಿಗೆ ಒಪ್ಪಂದ ಏರ್ಪಡಿಸುವುದು. |
| 19) ಬೈಲಾ ಸಂಖ್ಯೆ 5.19ರ ಪ್ರಕಾರ ಧಾರ್ಮಿಕ ಸಂಸ್ಥೆ, ವಿಶ್ವಸ್ಥ ಮಂಡಳಿ ಮತ್ತು ಇತರೆ ಸಾರ್ವಜನಿಕ ಸಂಘ ಸಂಸ್ಥೆಗಳಿಂದ ಠೇವಣಿಗಳನ್ನು ಸ್ವೀಕರಿಸುವುದು. |

| |
|---|
| 20) ಬೈಲಾ ಸಂಖ್ಯೆ 5.20ರ ಪ್ರಕಾರ ಭಾರತೀಯ ರಿಜರ್ವ್ ಬ್ಯಾಂಕಿನ ಅನುಮತಿ ಪಡೆದು ವಿದೇಶಿ ಬ್ಯಾಂಕುಗಳ ನೋಟುಗಳನ್ನೊಳಗೊಂಡಂತೆ ವಿದೇಶಿ ವಿನಿಮಯ, ಖರೀದಿಸುವುದು ಮತ್ತು ಮಾರಾಟ ಮಾಡುವುದು. |
| 21) ಬೈಲಾ ಸಂಖ್ಯೆ 5.21ರ ಪ್ರಕಾರ ಸೋಡಿಯನ್ನು ಒಪ್ಪಿಕೊಳ್ಳುವುದು, ಭದ್ರತಾ ಕಪಾಟು (ಲಾಕರ್) ಇತರೆ ಸಂಬಂಧಿತ ಸೇವೆಗಳನ್ನು ಒದಗಿಸುವುದು. |
| 22) ಬೈಲಾ ಸಂಖ್ಯೆ 5.22ರ ಪ್ರಕಾರ ಭಾಗಶ: ಅಥವಾ ಸಂಪೂರ್ಣ ಬಾಕಿ ವಸೂಲಿಗೆ ಬ್ಯಾಂಕು ತನ್ನ ಸ್ವಾಧೀನಕ್ಕೆ ಬಂದಿರುವ ಯಾವುದೇ ಆಸ್ತಿ–ಪಾಸ್ತಿಗಳ ನಿರ್ವಹಣೆ ಹಾಗೂ ವಿಲೇವಾರಿ ಮಾಡುವುದು. |
| 23) ಬೈಲಾ ಸಂಖ್ಯೆ 5.23ರ ಪ್ರಕಾರ ಸದಸ್ಯರ ಅನುಕೂಲಕ್ಕಾಗಿ ಮರಣೋತ್ತರ ಸಹಾಯ ನಿಧಿ ಸಂಗ್ರಹಣೆ ಮಾಡುವುದು ಮತ್ತು ಸದಸ್ಯರ ಕುಟುಂಬಕ್ಕೆ ಮರಣೋತ್ತರ ಸಹಾಯ ಧನ ನೀಡುವುದು. |
| 24) ಬೈಲಾ ಸಂಖ್ಯೆ 5.24ರ ಪ್ರಕಾರ ಗ್ರಾಹಕರ ಪರವಾಗಿ ಸ್ಟಾಕ್ ಅಥವಾ ಷೇರುಗಳನ್ನು, ಡಿಬೆಂಚರುಗಳನ್ನು ಮತ್ತು ನಿಧಿಗಳನ್ನು ಹಾಗೂ ಇನ್ನಿತರೆ ಆಧಾರ ಪತ್ರಗಳನ್ನು ಸಂಗ್ರಹಿಸುವುದು, ಧಾರಣೆ ಮಾಡುವುದು ಅಥವಾ ಕಮೀಷನ್ ಮೇಲೆ ನೀಡುವುದು, ಕೊಳ್ಳುವುದು ಅಥವಾ ಮಾರುವುದು. |
| 25) ಬೈಲಾ ಸಂಖ್ಯೆ 5.25ರ ಪ್ರಕಾರ ಸದಸ್ಯರ ಪರವಾಗಿ ಹಣ ಮತ್ತು ಆಧಾರ ಪತ್ರಗಳನ್ನು ಸಂಗ್ರಹಿಸುವುದು ಮತ್ತು ರವಾನಿಸುವುದು. |
| 26) ಬೈಲಾ ಸಂಖ್ಯೆ 5.26ರ ಪ್ರಕಾರ ಸದಸ್ಯರ ಮತ್ತು ಪ್ರಾಸಂಗಿಕವಾಗಿ ಸಾರ್ವಜನಿಕ ಆರ್ಥಿಕ ಕಲ್ಯಾಣವನ್ನು ಪ್ರವರ್ತಿಸಲೆಂದು ಉದ್ದೇಶಿಸಲಾದ ಇತರೆ ಕಾರ್ಯಕಲಾಪಗಳನ್ನು ನಿರ್ವಹಿಸುವುದು. |
| 27) ಬೈಲಾ ಸಂಖ್ಯೆ 5.27ರ ಪ್ರಕಾರ ವ್ಯಾಪಾರ ಮತ್ತು ಕೈಗಾರಿಕೋದ್ಯಮಗಳನ್ನು ಸ್ಥಾಪಿಸಲು ಸದಸ್ಯರನ್ನು ಪ್ರೋತ್ಸಾಹಿಸುವುದು ಹಾಗೂ ಈ ಉದ್ದೇಶಗಳನ್ನು ಸಾಧಿಸಲು ಮತ್ತು ಬ್ಯಾಂಕಿನ ವ್ಯವಹಾರವನ್ನು ಅಭಿವೃದ್ಧಿಪಡಿಸಲು ಸಂಭವನೀಯ ನೆರವಾಗುವ ಪ್ರೋತ್ಸಾಹ ನೀಡುವುದು. |
| 28) ಬೈಲಾ ಸಂಖ್ಯೆ 5.28ರ ಪ್ರಕಾರ ಬ್ಯಾಂಕಿನ ವ್ಯವಹಾರ ವೃದ್ಧಿಯಾಗುವುದಕ್ಕೆ ಮತ್ತು ಬಲಗೊಳ್ಳುವುದಕ್ಕೆ ಅವಶ್ಯಕವಾದ ಎಲ್ಲಾ ಬಗೆಯ ಕೆಲಸಗಳನ್ನು ಮಾಡುವುದು. |
| 29) ಬೈಲಾ ಸಂಖ್ಯೆ 5.29ರ ಪ್ರಕಾರ ಭಾರತೀಯ ರಿಜರ್ವ್ ಬ್ಯಾಂಕಿನ ಅನುಮತಿಯೊಂದಿಗೆ ಕ್ರೆಡಿಟ್/ಡೆಬಿಟ್ ಕಾರ್ಡುಗಳ ವ್ಯವಹಾರದಲ್ಲಿ ತೊಡಗುವುದು. |

ಮೇಲ್ಕಂಡ ಉದ್ದೇಶಗಳ ಪೈಕಿ ಕೆಲವೊಂದು ಉದ್ದೇಶಗಳನ್ನು ಅನುಷ್ಠಾನಕ್ಕೆ ತಂದಿರುವುದಿಲ್ಲ, ಅನುಷ್ಠಾನಕ್ಕೆ ತಾರದಿರುವ ಉದ್ದೇಶಗಳ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕದ್ದು.

**3) ಬ್ಯಾಂಕಿನ ಪದಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ: (ದಿನಾಂಕ 31-03-2026ರಲ್ಲಿದ್ದಂತೆ)**

2025-26 ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿದ ಪದಾಧಿಕಾರಿಗಳ ಹೆಸರು ಮತ್ತು ಹುದ್ದೆ ವಿವರ ಈ ಕೆಳಕಂಡಂತಿರುತ್ತದೆ:–

| | | |
|---|---|---|
| 1 | ಅಧ್ಯಕ್ಷರು | ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿ |
| 2 | ಉಪಾಧ್ಯಕ್ಷರು | ಶ್ರೀ ಸಿ ಆರ್ ನಟರಾಜ್ |
| 3 | ಮುಖ್ಯ ಕಾರ್ಯನಿರ್ವಾಹಕರು | ಶ್ರೀ ಜೆ ಸುರೇಶ್ |

**4) ಶಾಖೆಗಳು ಮತ್ತು ಅವುಗಳ ವಿಳಾಸ:–**

| ಕ್ರ ಸಂ | ಶಾಖೆಯ ಹೆಸರು | ಶಾಖೆಯ ವಿಳಾಸ | ಶಾಖಾ ವ್ಯವಸ್ಥಾಪಕರು ಶ್ರೀ/ಶ್ರೀಮತಿ |
|---|---|---|---|
| 1 | ಜೆ.ಸಿ.ರಸ್ತೆ ಶಾಖೆ | 2ನೇ ಅಡ್ಡ ರಸ್ತೆ, ವಿನಾಯಕ ನಗರ, ತುಮಕೂರು–572101 | ಪುಷ್ಪಲತ ಡಿ ಜಿ |
| 2 | ಎಸ್.ಎಸ್. ಪುರಂ ಶಾಖೆ | ಬಿ.ಹೆಚ್ ರಸ್ತೆ, ತುಮಕೂರು–572103 | ಸುನೀತ ಎಚ್ |
| 3 | ರಾಘವೇಂದ್ರನಗರ ಶಾಖೆ | 22ನೇ ಅಡ್ಡ ರಸ್ತೆ, ಎಸ್.ಐ.ಟಿ ಬಡಾವಣೆ, ತುಮಕೂರು–572102. | ಶ್ವೇತ ಜಿ ಆರ್ |
| 4 | ಸದಾಶಿವನಗರ ಶಾಖೆ | ಶಿರಾ ರಸ್ತೆ, ಎಸ್.ಬಿ.ಐ ಎದುರು, ತುಮಕೂರು-572106 | ಲತಾ ಎಚ್ ಜಿ |
| 5 | ತಿಪಟೂರು ಶಾಖೆ | ಕಾಮಧೇನು ಲಾಡ್ಜ್ ಕಟ್ಟಡ, ಮಖಾನ್ ರಸ್ತೆ, ತಿಪಟೂರು–572201 | ದಾಕ್ಷಾಯಿಣಿ ಆರ್ |
| 6 | ಶಿರಾ ಶಾಖೆ | ಮಂಜುಶ್ರೀ ಕಾಂಪ್ಲೆಕ್ಸ್, ಡಾ॥ ಬಿ ಆರ್ ಅಂಬೇಡ್ಕರ್ ರಸ್ತೆ, ಶಿರಾ–572137 | ಸುಧಾ ಪಿ ಎಂ |
| 7 | ಎ.ಪಿ.ಎಂ.ಸಿ.ಯಾರ್ಡ್ ಶಾಖೆ | 1ನೇ ಕ್ರಾಸ್, ಎ.ಪಿ.ಎಂ.ಸಿ ಯಾರ್ಡ್, ಬಟವಾಡಿ, ತುಮಕೂರು–572104 | ಮಹದೇವಮ್ಮ |
| 8 | ರಾಜಾಜಿನಗರ ಶಾಖೆ | 2ನೇ ಅಡ್ಡರಸ್ತೆ, 4ನೇ ಬ್ಲಾಕ್, ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು–560010 | ಅನಿತ ಟಿ ಪಿ |
| 9 | ಕೆ.ಆರ್. ಮೊಹಲ್ಲಾ ಶಾಖೆ | ನಂ.344, ಕೃಷ್ಣ ವಿಲಾಸ್ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–570024 | ನಮಿತ ಎಸ್ |
| 10 | ಬಸವೇಶ್ವರನಗರ ಶಾಖೆ | ನಂ.43/A, 1ನೇ ಮುಖ್ಯರಸ್ತೆ, 3ನೇ ಹಂತ, 3ನೇ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು–560079 | ಆನಂದ್ ಪಿ |
| 11 | ಜಯನಗರ ಶಾಖೆ | ನಂ.22, 9ನೇ ಮುಖ್ಯರಸ್ತೆ, 3ನೇ ಬ್ಲಾಕ್ ಜಯನಗರ, ಬೆಂಗಳೂರು-560011 | ವಿದ್ಯಾಶ್ರೀ ಎಂ ಆರ್ |
| 12 | ಇಂದಿರಾನಗರ ಶಾಖೆ | ನಂ.421/N, ಶ್ರೀ ಕೃಷ್ಣ ದೇವಸ್ಥಾನದ ರಸ್ತೆ, 1ನೇ ಹಂತ, ಇಂದಿರಾನಗರ, ಬೆಂಗಳೂರು–560038 | ಬಾಲಮುರಳಿ ವಿ |
| 13 | ಆರ್.ಟಿ. ನಗರ ಶಾಖೆ | ನಂ.544, 3ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 2ನೇ ಬ್ಲಾಕ್, ಆರ್.ಟಿ ನಗರ, ಬೆಂಗಳೂರು–560032 | ಮಂಜುಳ ಜೆ |
| 14 | ಚಿತ್ರದುರ್ಗ ಶಾಖೆ | ಸ್ವಂತಾಲ್ ಸೆಂಟರ್, 1ನೇ ಮಹಡಿ, ಬಿ ಡಿ ರಸ್ತೆ, ಚಿತ್ರದುರ್ಗ-577501 | ಹೇಮಂತ್ ಕುಮಾರ್ ಪಿ ತೀರ್ಥ |

| | | | |
|---|---|---|---|
| 15 | ಕುವೆಂಪುನಗರ ಶಾಖೆ | ಮುದ್ರ ಆರ್ಕೇಡ್, ಎಂ.ಐ.ಜಿ–27, ನೃಪತುಂಗ ರಸ್ತೆ, ‘‘M’’ ಬ್ಲಾಕ್, ಕುವೆಂಪುನಗರ, ಮೈಸೂರು–570023 | ಸವಿತ ಎಂ ಎಸ್ |
| 16 | ಹಾಸನ ಶಾಖೆ | ನಂ.805 & 806, ಕೆ ಜಿ ಟವರ್ಸ್, ಬಿ.ಎಂ ರಸ್ತೆ, ಹಾಸನ–573201 | ಮೀನಾ ಟಿ ಜೆ |
| 17 | ಹೆಚ್.ಎಸ್.ಆರ್. ಲೇಔಟ್ ಶಾಖೆ | ನಂ.671, 7ನೇ ಸೆಕ್ಟರ್, 9ನೇ ಮೈನ್, ಹೆಚ್.ಎಸ್.ಆರ್ ಲೇಔಟ್, ಬೆಂಗಳೂರು-560102 | ಉಮೇಶ್ ಟಿ ಸಿ |
| 18 | ಮಾರತಹಳ್ಳಿ ಶಾಖೆ | ನಂ.17, ಕೃಷ್ಣಾ ಗ್ರಾಂಡ್, ಔಟರ್ ರಿಂಗ್ ರಸ್ತೆ, ಮಾರತಹಳ್ಳಿ, ಬೆಂಗಳೂರು-560037 | ಯಶೋಧ ಎನ್ ಹೆಚ್ |
| 19 | ಜೆ.ಪಿ. ನಗರ ಶಾಖೆ | ನಂ.726/A, 24ನೇ ಮೈನ್, 6ನೇ ಫೇಸ್, ಜೆ.ಪಿ ನಗರ, ಬೆಂಗಳೂರು-560078 | ಗಿರೀಶ್ ಬಿ ಎನ್ |
| 20 | ಯಲಹಂಕ ಶಾಖೆ | ನಂ.685, ಎ–ಸೆಕ್ಟರ್, ಶೇಷಾದ್ರಿಪುರಂ ಪಿ.ಯು ಕಾಲೇಜಿನ ಎದುರು, ಯಲಹಂಕ ನ್ಯೂ ಟೌನ್, ಬೆಂಗಳೂರು-560064 | ಪ್ರಶಾಂತ್ ಟಿ ಸಿ |
| 21 | ಹೆಸರಘಟ್ಟ ಮುಖ್ಯರಸ್ತೆ ಶಾಖೆ | ನಂ.40, ವಾರ್ಡ್ ನಂ.15, ಹೆಸರಘಟ್ಟ ಮುಖ್ಯರಸ್ತೆ, ಭುವನೇಶ್ವರಿನಗರ, ಟಿ.ದಾಸರಹಳ್ಳಿ, ಬೆಂಗಳೂರು-560057 | ರಶ್ಮಿ ಸಿ |
| 22 | ವಿಜಯನಗರ ಶಾಖೆ | ನಂ.441, ವಾರ್ಡ್ ನಂ.24, 6ನೇ ಮುಖ್ಯ ರಸ್ತೆ, 1ನೇ ಹಂತ, ವಿಜಯನಗರ, ಮೈಸೂರು-570017 | ಗಂಗಾದೇವಿ ಹೆಚ್ ಎನ್ |
| 23 | ಮಂಡ್ಯ ಶಾಖೆ | ನಂ.1202/2, 2ನೇ ಅಡ್ಡರಸ್ತೆ, ವಾರ್ಡ್ ನಂ.19, ಅಶೋಕ ನಗರ, ಮಂಡ್ಯ-571401 | ಪ್ರಭು ಶಂಕರ್ ಎಂ |
| 24 | ಮತ್ತೀಕೆರೆ ಶಾಖೆ | ನಂ.33, ವಾರ್ಡ್ ನಂ.36, ಹೆಚ್.ಎಂ.ಟಿ ಮುಖ್ಯ ರಸ್ತೆ, ಗೋಕುಲ 1ನೇ ಹಂತ, 2ನೇ ಫೇಸ್, ಮತ್ತೀಕೆರೆ, ಬೆಂಗಳೂರು-560054 | ಲೀಲಾ ಶಿವಪ್ರಕಾಶ್ |
| 25 | ಸಹಕಾರನಗರ ಶಾಖೆ | ನಂ.788, ವಾರ್ಡ್ ನಂ.7, ಗಣೇಶ ದೇವಸ್ಥಾನದ ರಸ್ತೆ, ‘‘ಎ’’ ಬ್ಲಾಕ್, ಸಹಕಾರನಗರ, ಬೆಂಗಳೂರು–560092 | ಅನಿತಾ ಎ ಇಜಾರಿ |
| 26 | ರಾಜರಾಜೇಶ್ವರಿನಗರ ಶಾಖೆ | ನಂ.1147, ಜೆ.ಎಸ್ ರಸ್ತೆ, 3ನೇ ಹಂತ, ಬಿ.ಇ.ಎಂ.ಎಲ್ ಲೇಔಟ್, ರಾಜರಾಜೇಶ್ವರಿನಗರ, ಬೆಂಗಳೂರು–560098 | ಚಂದ್ರಕಲಾ ಕೆ ಪಿ |

| | | | |
|---|---|---|---|
| 27 | ಶಿವಮೊಗ್ಗ ಶಾಖೆ | ನಂ.1, ಆರ್ಕಿಸ್ ಆರ್ಕೇಡ್, ತಿಲಕ್‌ನಗರ ಮುಖ್ಯರಸ್ತೆ, ಶಿವಮೊಗ್ಗ–577202 | ವಿಕಾಸ್ ಜೆ |
| 28 | ಹೆಚ್ ಆರ್ ಬಿ ಆರ್ ಲೇಔಟ್ ಶಾಖೆ | ನಂ.403, ಬಾಣಸವಾಡಿ, "ಸಾಯಿ ಕೃಪ", 5ಎ ಮೈನ್, ಹೆಚ್.ಆರ್.ಬಿ.ಆರ್ ಲೇಔಟ್, 2ನೇ ಬ್ಲಾಕ್, ಕಲ್ಯಾಣ ನಗರ, ಬೆಂಗಳೂರು – 560043 | ಚಂದ್ರಶೇಖರ್ ಕೆ ಪಿ |

ವರದಿ ಸಾಲಿನಲ್ಲಿ ಠೇವಣಿ ಸಂಗ್ರಹಣೆ ಮತ್ತು ಸಾಲ ನೀಡುವಿಕೆಯಲ್ಲಿ ಪ್ರಗತಿ ಇಲ್ಲದ ಬೆಂಗಳೂರಿನ ಬಿ.ವಿ.ಕೆ ಐಯ್ಯಂಗಾರ್ ರಸ್ತೆ ಶಾಖೆಯನ್ನು ದಿನಾಂಕ 11-12-2024ರ ಕಾರ್ಯಕಾರಿ ಮಂಡಳಿ ಸಮಿತಿ ಸಭೆಯ ತೀರ್ಮಾನದಂತೆ ದಿನಾಂಕ 01-04-2025ರಿಂದ ಮುಚ್ಚಲಾಗಿರುತ್ತದೆ. ಈ ಬಗ್ಗೆ ಆರ್ ಬಿ ಐ ಸುತ್ತೋಲೆಯನ್ವಯ ಮುಂಚಿತವಾಗಿಯೇ ಶಾಖೆಯ ಠೇವಣಿದಾರರಿಗೆ ಮತ್ತು ಖಾತೆದಾರರಿಗೆ ನೋಟೀಸನ್ನು ನೀಡಿ, ಪತ್ರಿಕಾ ಪ್ರಕಟಣೆಯನ್ನು ಕೂಡ ನೀಡಲಾಗಿದ್ದು ಸದರಿ ಮಾಹಿತಿಯನ್ನು ಆರ್ ಬಿ ಐ ಮತ್ತು ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸಲಾಗಿದ್ದು ಶಾಖೆಯ ಪರವಾನಗಿಯನ್ನು ಪ್ರಸಕ್ತ ಸಾಲಿನಲ್ಲಿ ಆರ್ ಬಿ ಐಗೆ ಹಿಂದಿರುಗಿಸಿರುತ್ತಾರೆ. 2025-26ನೇ ಸಾಲಿಗೆ ಬ್ಯಾಂಕು ಒಟ್ಟು 28 ಶಾಖೆಗಳನ್ನು ಹೊಂದಿರುತ್ತದೆ.

## ಲೆಕ್ಕ ಪರಿಶೋಧನೆ ಮತ್ತು ಆಂತರಿಕ ಪರಿಶೋಧನೆ ವಿವರಗಳು

### 5) ಲೆಕ್ಕ ಪರಿಶೋಧನೆಗೆ ದಾಖಲೆಗಳನ್ನು ಒದಗಿಸಿದವರ ಹೆಸರು ಮತ್ತು ಹುದ್ದೆ:

2025-26 ನೇ ಸಾಲಿನ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಲೆಕ್ಕ ಪತ್ರಗಳ ದಾಖಲೆಗಳನ್ನು ಒದಗಿಸಿದವರ ಹೆಸರು ಹಾಗೂ ಹುದ್ದೆಯ ವಿವರ ಈ ಕೆಳಕಂಡಂತಿರುತ್ತದೆ:–

| ಕ್ರ.ಸಂ | ಹೆಸರು | ಹುದ್ದೆ | ಕಚೇರಿ |
|---|---|---|---|
| 1 | ಶ್ರೀ ಸುರೇಶ್ ಜೆ | ಮುಖ್ಯ ಕಾರ್ಯನಿರ್ವಾಹಕರು | ಕೇಂದ್ರ ಕಚೇರಿ, ತುಮಕೂರು |
| 2 | ಕಂಡಿಕೆ 4ರಲ್ಲಿರುವಂತೆ ಶಾಖೆಗಳ ವ್ಯವಸ್ಥಾಪಕರು | ವ್ಯವಸ್ಥಾಪಕರು | ಶಾಖಾ ಕಚೇರಿಗಳು ಕಂಡಿಕೆ 4ರಲ್ಲಿರುವಂತೆ |

### 6) ಹಿಂದಿನ ಸಾಲಿನ ಲೆಕ್ಕ ಪರಿಶೋಧಕರ ಹೆಸರು ಮತ್ತು ವಿಳಾಸ:

| | |
|---|---|
| ಲೆಕ್ಕ ಪರಿಶೋಧಕರ ಹೆಸರು | ರಮೇಶ ಎಂ ವೈ & ಕೋ., |
| ಹುದ್ದೆ ಹಾಗೂ ವಿಳಾಸ | ನಂ.271, ಆಶ್ರಯ, ಲಕ್ಷ್ಮೀವಿಲಾಸ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–570024 |
| ಎಂಪಾನಲ್‌ಮೆಂಟ್ ನಂಬರ್ | ಎಫ್–03-03-2013 –13:29 ನಂ:1134 |
| ಲೆಕ್ಕ ಪರಿಶೋಧನಾ ಅವಧಿ | 01-04-2024 ರಿಂದ 31-03-2025 ರವರೆಗೆ |

### 7) ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ವಿವರ:

| | |
|---|---|
| ಲೆಕ್ಕ ಪರಿಶೋಧಕರ ಹೆಸರು | ರಮೇಶ ಎಂ ವೈ & ಕೋ., |
| ಹುದ್ದೆ ಹಾಗೂ ವಿಳಾಸ | ನಂ.271, ಆಶ್ರಯ, ಲಕ್ಷ್ಮೀವಿಲಾಸ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು–570024. |
| ಎಂಪಾನಲ್‌ಮೆಂಟ್ ನಂಬರ್ | ಎಫ್–03-03-2013 –13:29 ನಂ:1134 |

| | |
|---|---|
| ನೇಮಕಾತಿ ಉಲ್ಲೇಖ / ವಂಟನೆ ಆದೇಶ ಸಂಖ್ಯೆ ಮತ್ತು ದಿನಾಂಕ | ಟಿಜಿಎಂಸಿಬಿ/ಎಚ್ಓ/ಆಡಿಟ್/278/2025-26 ದಿನಾಂಕ 02-09-2025 |
| ಲೆಕ್ಕ ಪರಿಶೋಧನೆಯ ಆರಂಭದ ದಿನಾಂಕ | 04-05-2026 |
| ಲೆಕ್ಕ ಪರಿಶೋಧನೆಯ ಮುಕ್ತಾಯದ ದಿನಾಂಕ | 25-06-2026 |
| ಲೆಕ್ಕ ಪರಿಶೋಧನೆಗೆ ತೆಗೆದುಕೊಂಡ (ಮಾನವ) ದಿನಗಳು | 130 ದಿನಗಳು |

**8) ಲೆಕ್ಕ ಪರಿಶೋಧನಾ ವರ್ಗೀಕರಣ:**
**(ನಿರ್ದೇಶಕರ ಲೆಕ್ಕ ಪರಿಶೋಧನಾ ಮಾರ್ಗಸೂಚಿ (Audit Instruction) ಕ್ರಮ ಸಂಖ್ಯೆಯೊಂದಿಗೆ ವಿಮರ್ಶಿಸಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು):**

| | |
|---|---|
| ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನಾ **ವರ್ಗೀಕರಣ** | "ಎ" |
| ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ **ವರ್ಗೀಕರಣ** | "ಎ" |

**9) ಆಂತರಿಕ/ಸಮವರ್ತಿತ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಶೆ:**

**1) ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿತ ಲೆಕ್ಕ ಪರಿಶೋಧನೆಗೆ ಕ್ರಮವಿಡಲಾಗಿದೆಯೇ?**

ಬ್ಯಾಂಕಿನಲ್ಲಿ ಸಮವರ್ತಿತ ಲೆಕ್ಕ ಪರಿಶೋಧನೆಗೆ ಕ್ರಮವಿಡಲಾಗಿದೆ. 2025-26ನೇ ಸಾಲಿನಲ್ಲಿ ಬ್ಯಾಂಕಿನ ಬೆಂಗಳೂರಿನ 14 ಶಾಖೆಗಳ ಸಮವರ್ತಿತ ಲೆಕ್ಕ ಪರಿಶೋಧನೆಯನ್ನು ಸನ್ನದು ಲೆಕ್ಕ ಪರಿಶೋಧಕರಾದ ಮೆ|| ಬಸವರಾಜು ಮತ್ತು ದಿಲೀಪ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರಿಗೆ, ಉಳಿದ 14 ಶಾಖೆಗಳು ಮತ್ತು ಕೇಂದ್ರ ಕಚೇರಿಯ ಸಮವರ್ತಿತ ಲೆಕ್ಕ ಪರಿಶೋಧನೆಯನ್ನು ಸನ್ನದು ಲೆಕ್ಕ ಪರಿಶೋಧಕರಾದ ಮೆ|| ಟೀನ ಜನ್ನು ಅಂಡ್ ಕೋ., ಚಾರ್ಟರ್ಡ್ ಅಕೌಂಟೆಂಟ್, ತುಮಕೂರು ಇವರಿಗೆ ವಹಿಸಲಾಗಿರುತ್ತದೆ. ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧನೆಯನ್ನು ಬ್ಯಾಂಕಿನ ಸಿಬ್ಬಂದಿಗಳಿಂದ ನಡೆಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಬಹುತೇಕ ಶಾಖೆಗಳಿಗೆ ಭೇಟಿ ನೀಡಿ ಆಂತರಿಕ ಲೆಕ್ಕ ಪರಿಶೋಧನೆ ನೆಡೆಸಿರುವ ಬಗ್ಗೆ ದಾಖಲೆಗಳನ್ನು ಇಡಲಾಗಿದೆ.

**2) ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆಯೇ?**

ಲೆಕ್ಕ ಪರಿಶೋಧನೆ ನಿಯಮಿತವಾಗಿ ನೆಡೆಯುತ್ತಿದ್ದು, ಸನ್ನದು ಲೆಕ್ಕ ಪರಿಶೋಧಕರು ಎಲ್ಲಾ ಶಾಖೆಗಳ ಲೆಕ್ಕ ಪರಿಶೋಧನಾ ವರದಿಗಳನ್ನು ಸಲ್ಲಿಸಿದ್ದು ಬ್ಯಾಂಕಿನವರು ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕ್ರಮವಿಟ್ಟಿರುತ್ತಾರೆ.

ಶಾಖೆಗಳ ಆಂತರಿಕ ಲೆಕ್ಕ ಪರಿಶೋಧನೆಯನ್ನು 12 ತಿಂಗಳ ಅವಧಿಯಲ್ಲಿ ಒಮ್ಮೆ ನೆಡೆಸಲು ಕ್ರಮವಿಡಲಾಗಿದೆ. ಕೇಂದ್ರ ಕಚೇರಿಯ ಸಮವರ್ತಿತ ಲೆಕ್ಕ ಪರಿಶೋಧನೆಯನ್ನು ಪ್ರತಿ ಆರು ತಿಂಗಳಿಗೊಮ್ಮೆ ಮಾಡಲಾಗುತ್ತಿದೆ.

**3) ಲೆಕ್ಕ ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ನ್ಯೂನತೆಗಳು:**

ಸಮವರ್ತಿತ ಮತ್ತು ಆಂತರಿಕ ಲೆಕ್ಕ ಪರಿಶೋಧಕರು ಅವರ ವರದಿಯಲ್ಲಿ ನಮೂದಿಸಿರುವ ಕೆಲವೊಂದು

ನ್ಯೂನತೆಗಳ ವಿವರಗಳು ಈ ಕೆಳಕಂಡತಿರುತ್ತದೆ:–

**(ಅ) ಸಮವರ್ತಿತ ಲೆಕ್ಕ ಪರಿಶೋಧನೆಯಲ್ಲಿ ವರದಿಯಾದ ಕೆಲವು ನ್ಯೂನತೆಗಳು: –**

1. ಕೆಲವೊಂದು ಶಾಖೆಗಳಲ್ಲಿ ತ್ರೈಮಾಸಿಕ ಗ್ರಾಹಕರ ಸಭೆಗಳನ್ನು ಮಾಡಿರುವುದಿಲ್ಲ.
2. ಅನುತ್ಪಾದಕ ಸಾಲಗಳ ಪ್ರಕರಣಗಳನ್ನು ಕಡಿಮೆ ಮಾಡಿಕೊಳ್ಳಲು ಸೂಕ್ತ ಕ್ರಮವಿಡುವುದು.
3. ಕೆಲವೊಂದು ಶಾಖೆಗಳಲ್ಲಿ ಲಾಕರ್‌ಗಳ ಬಾಡಿಗೆಯು ಬರಲು ಬಾಕಿ ಇರುತ್ತದೆ ಮತ್ತು ಕೆಲವೊಂದು ಲಾಕರ್‌ಗಳ ಖಾತೆಗಳಲ್ಲಿ ವ್ಯವಹಾರ ನೆಡೆಯದೆ ಸ್ಥಗಿತಗೊಂಡಿದ್ದರೂ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.
4. ಅನೇಕ ಶಾಖೆಗಳಲ್ಲಿ ಲಾಕರ್‌ಗಳು ಖಾಲಿ ಇದ್ದು ಅದನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಂಡಿರುವುದಿಲ್ಲ.
5. ಕೆಲವೊಂದು ಶಾಖೆಗಳಲ್ಲಿ ಗ್ರಾಹಕರು ಪಡೆದುಕೊಂಡಿರುವ ಪೇ–ಆರ್ಡರ್‌ಗಳು ನಗದೀಕರಿಸಲ್ಪಟ್ಟಿರುವುದಿಲ್ಲ, ಈ ಬಗ್ಗೆ ಗಮನ ಹರಿಸಲು ಸೂಚಿಸಿದೆ.

**(ಆ) ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ವರದಿಯಾದ ಕೆಲವು ನ್ಯೂನತೆಗಳು:–**

1. ಸಾಲಗಳ ಮಂಜೂರಾತಿಯ ವೇಳೆಯಲ್ಲಿ ಮಾತ್ರ ತೆರಿಗೆ ಪಾವತಿ ರಶೀದಿಗಳನ್ನು ಪಡೆಯುತ್ತಿದ್ದು ಪ್ರತಿ ವರ್ಷ ಪಡೆದು ಪರಿಶೀಲಿಸಿ ಸಾಲದ ಕಡತಗಳಲ್ಲಿರಿಸಲು ಕ್ರಮವಿಡುವುದು.
2. ಕೆಲವೊಂದು ಶಾಖೆಗಳಲ್ಲಿ ಸಿಬಿಎಸ್ ಅಪ್ಲಿಕೇಶನ್‌ನಲ್ಲಿ ಲಾಕರ್ ಖಾತೆಗಳನ್ನು ತೆರೆದಿರುವುದಿಲ್ಲ.
3. ಅನುತ್ಪಾದಕ ಸಾಲಗಳ ಪ್ರಕರಣಗಳನ್ನು ಕಡಿಮೆ ಮಾಡಿಕೊಳ್ಳಲು ಸೂಕ್ತ ಕ್ರಮವಿಡುವುದು.
4. ಕೆಲವೊಂದು ಶಾಖೆಗಳಲ್ಲಿ ಗ್ರಾಹಕರಿಗೆ ವಿಲೇವಾರಿಯಾಗದ ಚೆಕ್‌ಪುಸ್ತಕಗಳು ಮತ್ತು ಠೇವಣಿ ರಶೀದಿಗಳು ಕಂಡು ಬಂದಿರುತ್ತದೆ, ಅದನ್ನು ಗ್ರಾಹಕರಿಗೆ ವಿಲೇವಾರಿ ಮಾಡಲು ಸೂಕ್ತ ಕ್ರಮವಿಡುವುದು.
5. ಕೆಲವೊಂದು ಶಾಖೆಗಳಲ್ಲಿ ಶೇಕಡ 25ಕ್ಕಿಂತ ಹೆಚ್ಚು ನಿಷ್ಕ್ರಿಯ (In-operative) ಉಳಿತಾಯ ಖಾತೆಗಳಿದ್ದು, ಅವುಗಳ ಸಂಖ್ಯೆಯನ್ನು ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.

**ಸಮಾಧಾನ :– ಮೇಲ್ಕಂಡ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿರುತ್ತದೆ.**

**4) ಅವುಗಳಿಗೆ ಬ್ಯಾಂಕು ನೀಡಿದ ಅನುಪಾಲನಾ ವರದಿಯ ವಿವರ:**

ವರದಿಯಲ್ಲಿನ ಹಲವಾರು ನ್ಯೂನತೆಗಳನ್ನು ಸರಿಪಡಿಸಿಕೊಂಡಿದ್ದು, ಉಳಿದ ನ್ಯೂನತೆಗಳನ್ನು ಹಂತ ಹಂತವಾಗಿ ಸರಿಪಡಿಸಿಕೊಳ್ಳಲಾಗುತ್ತಿದೆ ಎಂದು ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕರು ದೃಢೀಕರಿಸಿರುತ್ತಾರೆ.

**5) ಅಂತಹ ನ್ಯೂನತೆಗಳು ಮುಂದುವರೆದಿದೆಯೇ? ಅವುಗಳ ನಿವಾರಣೆಗೆ ಕೈಗೊಂಡ ಕ್ರಮಗಳೇನು? ಮೈತ್ರೀಕರಣಗೊಳ್ಳದೇ ಮುಂದುವರೆದ ನ್ಯೂನತೆಗಳು:**

ನ್ಯೂನತೆಗಳನ್ನು ಹಂತ ಹಂತವಾಗಿ ಸರಿಪಡಿಸಿಕೊಳ್ಳಲಾಗುತ್ತಿದೆ ಎಂದು ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕರು ದೃಢೀಕರಿಸಿರುತ್ತಾರೆ.

**ಆಂತರಿಕ ಹತೋಟಿ:**

| |
|---|
| **ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗಸೂಚಿಗಳು/ ಆದೇಶ/ ಕೈಪಿಡಿಗಳ ಬಗ್ಗೆ:**<br>ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗಸೂಚಿಗಳು/ ಆದೇಶ/ ಕೈಪಿಡಿಗಳಂತೆ ಕ್ರಮ ಇಡಲಾಗಿದೆ. ಬ್ಯಾಂಕಿನಲ್ಲಿ ಠೇವಣಿ ಮತ್ತು ಸಾಲಗಳ ಕೈಪಿಡಿಗಳನ್ನು ಆಗಾಗ್ಗೆ ಪರಿಷ್ಕರಿಸಿರುವುದನ್ನು ಗಮನಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕಿನಿಂದ ಆಗಿಂದಾಗ್ಗೆ ಹೊರಡಿಸುತ್ತಿರುವ ಸುತ್ತೋಲೆಗಳ ಕಡತವನ್ನು ಪ್ರತ್ಯೇಕವಾಗಿ ನಿರ್ವಹಿಸಿದೆ ಹಾಗೂ ಆರ್.ಬಿ.ಐನಿಂದ ಹೊರಡಿಸಿರುವ ಸುತ್ತೋಲೆಗಳನ್ನು ವಿಳಂಬವಿಲ್ಲದೆ ಶಾಖೆಗಳಿಗೆ ರವಾನಿಸಲಾಗುತ್ತಿದೆ. |
| **ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing) / ಸಮನ್ವಯ ಉಪ ಪುಸ್ತಕಗಳ ಮೇಲೆ ಹತೋಟಿ:**<br>ಬ್ಯಾಂಕಿನ ಎಲ್ಲಾ ಖಾತೆಗಳ ದೈನಂದಿನ ನಿರ್ವಹಣೆಯನ್ನು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿಯಲ್ಲಿ C-Edge ಮುಂಬೈ ಕಚೇರಿಯಲ್ಲಿ ಕ್ರೋಢೀಕರಿಸುತ್ತಿದ್ದಾರೆ, ದೈನಂದಿನ ವ್ಯವಹಾರ ಮುಗಿದ ತಕ್ಷಣ ಏನೇ ಬದಲಾವಣೆಗಳಾದರೂ ಮೇಲ್ಕಂಡ C-Edge ಸಂಸ್ಥೆಯವರೇ ಮಾಡಬೇಕಾಗಿದ್ದು, ಬ್ಯಾಂಕಿನ ಕೇಂದ್ರ ಕಚೇರಿಯಲ್ಲಾಗಲೀ ಅಥವಾ ಶಾಖಾ ಹಂತದಲ್ಲಾಗಲೀ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ. ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಇರುವುದರಿಂದ ಎಲ್ಲಾ ಮಾಹಿತಿಗಳನ್ನು ಕೇಂದ್ರ ಕಚೇರಿಯಲ್ಲಿ ಪಡೆಯಬಹುದಾಗಿದೆ. ಕೇಂದ್ರ ಕಚೇರಿಯು ಬ್ಯಾಂಕಿನಲ್ಲಿ ನಿರ್ವಹಿಸುತ್ತಿರುವ ಉಪ ಪುಸ್ತಕಗಳ ಮೇಲೆ ಸಂಪೂರ್ಣ ಹತೋಟಿ ಹೊಂದಿರುತ್ತದೆ.<br><br>ಬ್ಯಾಂಕಿನ ಕೋರ್ ಬ್ಯಾಂಕಿಂಗ್ ತಂತ್ರಜ್ಞಾನವನ್ನು ಉನ್ನತೀಕರಿಸುವ ಸಲುವಾಗಿ ಮೆ॥ C-Edge Technologies ರವರೊಂದಿಗೆ ಪ್ರಸಕ್ತ ಸಾಲಿನಲ್ಲಿ ಒಡಂಬಡಿಕೆ ಮಾಡಿಕೊಂಡಿದ್ದು, ಹೊಸ ತಂತ್ರಾಂಶವಾದ Global Banking Platform (GBP) ಅಳವಡಿಸಲು ಕ್ರಮ ಕೈಗೊಂಡಿರುತ್ತಾರೆ. |
| **ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ/ಹತೋಟಿಗಳು, ಸಮನ್ವಯ ಮತ್ತು ಉಪ ಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ:**<br>ಎಲ್ಲಾ ಖಾತೆಗಳನ್ನು ಗಣಕಯಂತ್ರದಲ್ಲಿ ನಿರ್ವಹಿಸಿರುವುದರಿಂದ ಉಪ–ಪುಸ್ತಕ ಹಾಗೂ ಖಾತೆಗಳ ಸಮನ್ವಯದ ಮೇಲೆ ಹತೋಟಿ ಇಟ್ಟಿರುತ್ತಾರೆ. |
| **ಇವುಗಳ ಅನುಷ್ಠಾನದ ಕ್ರಮದ ಬಗ್ಗೆ ಹಿಂಬಾಲಿಕೆ ಕ್ರಮ:**<br>ಶಾಖೆಗಳು ಸಲ್ಲಿಸಿರುವ ಮಾಹಿತಿಗಳಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದಲ್ಲಿ ಆಂತರಿಕ ಹತೋಟಿ ವಿಭಾಗವು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಮುಂದಿನ ಕ್ರಮವಿಡುವ ಪದ್ಧತಿ ಅನುಸರಿಸಿರುವುದು ಕಂಡುಬಂದಿರುತ್ತದೆ. |
| **<u>ಜಾಗರೂಕತೆ:</u>** |
| **ವರದಿ ಸಾಲಿನಲ್ಲಿ ಲೆಕ್ಕ ಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ:**<br>ವರದಿ ಸಾಲಿನ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಯಾವುದೇ ಗುರುತರ ವಂಚನೆ ಪ್ರಕರಣಗಳು ಕಂಡು ಬಂದಿರುವುದಿಲ್ಲ.<br><br>ಪ್ರಸ್ತುತ ಬ್ಯಾಂಕಿನಲ್ಲಿ ಐದು ವಂಚನೆ ಪ್ರಕರಣಗಳಿದ್ದು ಅವುಗಳ ವಿವರ ಈ ಕೆಳಕಂಡಂತಿದೆ:–<br>1. **ಜಯನಗರ ಶಾಖೆ, ಬೆಂಗಳೂರು :–** 2011-12ನೇ ಸಾಲಿನಲ್ಲಿ ಸಾಲದ ಖಾತೆ ಸಂಖ್ಯೆ 30301151263 ಶ್ರೀ ಎಸ್ ಹೇಮಂತ್ ಕುಮಾರ್ ಎಂಬುವವರು ವಾಹನ ಸಾಲದ ರೂ. 7.50 ಲಕ್ಷ ಸುಳ್ಳು ದಾಖಲೆಯನ್ನು ನೀಡಿ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ. ಈ |

ಬಗ್ಗೆ ಜಯನಗರ ಬೆಂಗಳೂರು ಪೊಲೀಸ್ ಠಾಣೆಯಲ್ಲಿ ದಿನಾಂಕ 07-06-2012ರಲ್ಲಿ ದೂರು ದಾಖಲಿಸಿರುತ್ತಾರೆ.

2. **ಜಯನಗರ ಶಾಖೆ, ಬೆಂಗಳೂರು :–** 2010-11ನೇ ಸಾಲಿನಲ್ಲಿ ಸಾಲದ ಖಾತೆ ಸಂಖ್ಯೆ 30301025352 ಶ್ರೀ ಎಂ ಎಸ್ ಲಿಂಗರಾಜುರವರು ವಾಹನ ಸಾಲದ ರೂ. 7.50 ಲಕ್ಷ ಸುಳ್ಳು ದಾಖಲೆ ನೀಡಿ ದುರುಪಯೋಗಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಜಯನಗರ ಬೆಂಗಳೂರು ಪೊಲೀಸ್ ಠಾಣೆಯಲ್ಲಿ ದಿನಾಂಕ 21-06-2012 ರಲ್ಲಿ ದೂರು ದಾಖಲಿಸಿರುತ್ತಾರೆ.

3. **ರಾಜಾಜಿನಗರ ಶಾಖೆ, ಬೆಂಗಳೂರು :–** ಸಾಲಗಾರರಾದ ಶ್ರೀ ಎಸ್ .ಜೆ. ಇಂಜಿನಿಯರಿಂಗ್ ಮಾಲೀಕರು ಶ್ರೀ ಬಿ. ಹೆಚ್. ಮಲ್ಲಪ್ಪರವರು ಖಾತೆ ಸಂಖ್ಯೆ 30302646277 ದಿನಾಂಕ 14-05-2014ರಂದು ಸ್ವತ್ತಿನ ನಕಲಿ ದಾಖಲಾತಿ ನೀಡಿ ರೂ. 1,50,00,000.00 ಗಳ ಆಸ್ತಿ ಅಡಮಾನ ಸಾಲವನ್ನು ಪಡೆದು ಉದ್ದೇಶಪೂರ್ವಕವಾಗಿ ಬ್ಯಾಂಕಿಗೆ ವಂಚನೆ ಮಾಡಿರುತ್ತಾರೆ. ಸದರಿ ವಂಚನೆ ಬಗ್ಗೆ ಕಾರ್ಯಕಾರಿ ಮಂಡಳಿ ಸಭೆಯ ಅನುಮತಿ ಮೇರೆಗೆ ಎಫ್.ಐ.ಆರ್ ದಾಖಲಿಸಿ, ದಿನಾಂಕ 17-10-2022 ರಂದು FMR-1 ಮುಖಾಂತರ ಆರ್ ಬಿ ಐ ಗೆ ವರದಿ ಸಲ್ಲಿಸಿರುತ್ತಾರೆ ಹಾಗೂ ಸಾಲದ ಬಾಕಿಯ ಸಂಪೂರ್ಣ ಮೊತ್ತಕ್ಕೆ ಅವಕಾಶ ಕಲ್ಪಿಸಲಾಗಿದೆ.

4. **ಕೆ ಆರ್ ಮೊಹಲ್ಲಾ ಶಾಖೆ, ಮೈಸೂರು :-** ಸಾಲಗಾರರಾದ ಶ್ರೀ ಹರೀಶ್ ಎಲ್ ಬಿ ಮತ್ತು ಜ್ಯೋತಿರವರು 2017-18ನೇ ಸಾಲಿನಲ್ಲಿ ಸಾಲದ ಖಾತೆ ಸಂಖ್ಯೆ 30303904953 ದಿನಾಂಕ 16-05-2017 ರಂದು ಸ್ವತ್ತಿನ ನಕಲಿ ದಾಖಲಾತಿ ನೀಡಿ ರೂ. 4,00,00,000.00ಗಳ ಆಸ್ತಿ ಅಡಮಾನ ಸಾಲವನ್ನು ಪಡೆದು ಉದ್ದೇಶಪೂರ್ವಕವಾಗಿ ಬ್ಯಾಂಕಿಗೆ ವಂಚನೆ ಮಾಡಿರುತ್ತಾರೆ. ಸದರಿ ವಂಚನೆ ಪ್ರಕರಣದ ಬಗ್ಗೆ ಕಾರ್ಯಕಾರಿ ಮಂಡಳಿ ಸಭೆಯ ಅನುಮತಿ ಮೇರೆಗೆ ಎಫ್.ಐ.ಆರ್ ದಾಖಲಿಸಿ, ದಿನಾಂಕ 17-10-2022 ರಂದು FMR-1 ಮುಖಾಂತರ ಆರ್ ಬಿ ಐ ಗೆ ವರದಿ ಸಲ್ಲಿಸಿರುತ್ತಾರೆ ಹಾಗೂ ಸಾಲದ ಬಾಕಿಯ ಸಂಪೂರ್ಣ ಮೊತ್ತಕ್ಕೆ ಅವಕಾಶ ಕಲ್ಪಿಸಲಾಗಿದೆ.

5. **ಜಯನಗರ ಶಾಖೆ, ಬೆಂಗಳೂರು :–** ಸಾಲಗಾರರಾದ ಶ್ರೀ ಕೆ ಎಸ್ ನಾಗೇಶ್, ಮಾಲೀಕರು ಶ್ರೀನಿಧಿ ಮ್ಯಾನುಫ್ಯಾಕ್ಚರರ್‌ರವರು ದಿನಾಂಕ 17-02-2016 ರಂದು ಖಾತೆ ಸಂಖ್ಯೆ 30303389840ಕ್ಕೆ ಆಸ್ತಿ ಅಡಮಾನ ಸಾಲ ರೂ. 70,00,000.00 ಮತ್ತು ಖಾತೆ ಸಂಖ್ಯೆ 30303389997ಕ್ಕೆ ಯಂತ್ರೋಪಕರಣ ಸಾಲ ರೂ. 60,00,000.00 ಒಟ್ಟು ರೂ. 1,30,00,000.00 ಸಾಲ ಪಡೆದಿರುತ್ತಾರೆ. ಈ ಸ್ವತ್ತು ಅನೇಕ ಬ್ಯಾಂಕುಗಳಿಗೆ ಹಾಗೂ ಹಲವಾರು ಹಣಕಾಸು ಸಂಸ್ಥೆಗಳಿಗೆ ಈಡಾಗಿದ್ದು ತಿಳಿದು ಬಂದಿದ್ದು, ಸದರಿ ಸ್ಥಿರಾಸ್ತಿಯನ್ನು ಅಲಹಬಾದ್ ಬ್ಯಾಂಕಿನವರು SARFAESI ಕಾಯಿದೆಯಡಿ ಮಾರಾಟ ಮಾಡಿದ್ದು, ಸ್ವತ್ತಿನ ಸರ್ಚ್ ರಿಪೋರ್ಟ್ ಪಡೆದು ದಾಖಲಾತಿಗಳನ್ನು ಪರಿಶೀಲಿಸಿದಾಗ ದಾಖಲಾತಿಗಳು ನಕಲಿ ಎಂದು ತಿಳಿದು ಬಂದಿದ್ದು ಸಾಲಗಾರರು ಉದ್ದೇಶಪೂರ್ವಕವಾಗಿ ಬ್ಯಾಂಕಿಗೆ ವಂಚನೆ ಮಾಡಿದ್ದಾರೆಂದು ತಿಳಿದು ಈ ಬಗ್ಗೆ ಕಾರ್ಯಕಾರಿ ಮಂಡಳಿ ಸಭೆಯ ಅನುಮತಿ ಮೇರೆಗೆ ಎಫ್.ಐ.ಆರ್ ದಾಖಲಿಸಿ, ದಿನಾಂಕ 17-10-2022 ರಂದು FMR-1 ಮುಖಾಂತರ ಆರ್ ಬಿ ಐ ಗೆ ವರದಿ ಸಲ್ಲಿಸಿರುತ್ತಾರೆ ಹಾಗೂ ಸಾಲದ ಬಾಕಿಯ ಸಂಪೂರ್ಣ ಮೊತ್ತಕ್ಕೆ ಅವಕಾಶ ಕಲ್ಪಿಸಲಾಗಿದೆ.

ಸದರಿ ಮೇಲ್ಕಂಡ 5 ಪ್ರಕರಣಗಳ ಮಾಹಿತಿಯನ್ನು ನಿಯಮಿತವಾಗಿ ರಿಜ಼ರ್ವ್ ಬ್ಯಾಂಕಿಗೆ ಸಲ್ಲಿಸಿರುತ್ತಾರೆ.

**ಸಮಾಧಾನ :– ಮೇಲ್ಕಂಡ ಎಲ್ಲಾ ಪ್ರಕರಣಗಳಲ್ಲಿ ಕಾನೂನು ಕ್ರಮ ಜಾರಿಯಲ್ಲಿರುತ್ತದೆ.**

**ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ :**

1. ದಿನಾಂಕ 07-06-2012 ರಲ್ಲಿ ಜಯನಗರ ಪೊಲೀಸ್ ಠಾಣೆಯಲ್ಲಿ ಶ್ರೀ ಎಸ್ ಹೇಮಂತ್ ಕುಮಾರ್‌ರವರ ವಿರುದ್ಧ ದೂರು ದಾಖಲು ಮಾಡಲಾಗಿದೆ. ದಿನಾಂಕ 24-06-2014 ರಂದು KSCUBF, ಬೆಂಗಳೂರಿನಲ್ಲಿ ದಾವಾ ಹಾಕಿದ್ದು ಈಗ ಅಮಲ್ಜಾರಿ ಕ್ರಮ ಜಾರಿಯಲ್ಲಿದೆ. 2023-24ನೇ ಸಾಲಿನಲ್ಲಿ ಟೆಕ್ನಿಕಲ್ ರೈಟ್‌ಆಫ್ ಮಾಡಿ, ಸಾಲದ ಖಾತೆಯನ್ನು ಚುಕ್ತಾ ಗೊಳಿಸಿ, ಪ್ರತ್ಯೇಕ ರಿಜಿಸ್ಟರ್‌ಗೆ ವರ್ಗಾಯಿಸಿ ವಸೂಲಿ ಕ್ರಮ ಜಾರಿಯಲ್ಲಿಟ್ಟಿರುತ್ತಾರೆ.
2. ದಿನಾಂಕ 21-06-2012 ರಲ್ಲಿ ಜಯನಗರ ಪೊಲೀಸ್ ಠಾಣೆಯಲ್ಲಿ ಶ್ರೀ ಎಂ ಎಸ್ ಲಿಂಗರಾಜುರವರ ವಿರುದ್ಧ ದೂರು ದಾಖಲು ಮಾಡಲಾಗಿದೆ. ದಿನಾಂಕ 26-08-2014 ರಂದು KSCUBF, ಬೆಂಗಳೂರಿನಲ್ಲಿ ದಾವಾ ಹಾಕಿದ್ದು ಈಗ ಅಮಲ್ಜಾರಿ ಕ್ರಮ ಜಾರಿಯಲ್ಲಿದೆ. 2023-24ನೇ ಸಾಲಿನಲ್ಲಿ ಟೆಕ್ನಿಕಲ್ ರೈಟ್‌ಆಫ್ ಮಾಡಿ, ಸಾಲದ ಖಾತೆಯನ್ನು ಚುಕ್ತಾ ಗೊಳಿಸಿ, ಪ್ರತ್ಯೇಕ ರಿಜಿಸ್ಟರ್‌ಗೆ ವರ್ಗಾಯಿಸಿ ವಸೂಲಿ ಕ್ರಮ ಜಾರಿಯಲ್ಲಿಟ್ಟಿರುತ್ತಾರೆ.
3. ದಿನಾಂಕ 04-01-2023 ರಂದು ಬೆಂಗಳೂರಿನ ರಾಜಾಜಿನಗರ ಪೊಲೀಸ್ ಠಾಣೆಯಲ್ಲಿ ಶ್ರೀ ಮಲ್ಲಪ್ಪ ಬಿ ಹೆಚ್, ಮಾಲೀಕರು, ಮೆ: ಎಸ್‌ಜೆ ಇಂಜಿನಿಯರಿಂಗ್‌ರವರ ವಿರುದ್ಧ ದೂರು ದಾಖಲು ಮಾಡಲಾಗಿದೆ. ದಿನಾಂಕ 24-11-2017 ರಂದು ಸೆಕ್ಷನ್ 70ರ ಅಡಿಯಲ್ಲಿ, KSCUBF, ಬೆಂಗಳೂರಿನಲ್ಲಿ ದಾವಾ ಹಾಕಿದ್ದು, ದಿನಾಂಕ 18-09-2018 ರಂದು ಡಿಕ್ರಿ ಆದೇಶ ಪಡೆದಿದ್ದು, ವಸೂಲಿ ಕ್ರಮ ಜಾರಿಯಲ್ಲಿರುತ್ತದೆ.
4. ದಿನಾಂಕ 29-10-2022 ರಂದು ಮೈಸೂರಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಶ್ರೀ ಹರೀಶ್ ಎಲ್ ಬಿ ಮತ್ತು ಶ್ರೀಮತಿ ಜ್ಯೋತಿರವರ ವಿರುದ್ಧ ದೂರು ದಾಖಲು ಮಾಡಲಾಗಿದೆ ಹಾಗೂ ಪೊಲೀಸ್‌ರವರು ಈ ಕೇಸನ್ನು ಸಿ ಐ ಡಿ ಗೆ ವರ್ಗಾಯಿಸಿದ್ದು, ಸಿ ಐ ಡಿ ತನಿಖೆ ಜಾರಿಯಲ್ಲಿರುತ್ತದೆ. ಸಾಲ ವಸೂಲಾತಿಗಾಗಿ SARFAESI ಕಾಯಿದೆಯಡಿ ಕಾನೂನು ಕ್ರಮ ಜರುಗಿಸಲಾಗಿದೆ.
5. ದಿನಾಂಕ 14-12-2022 ರಂದು ಬೆಂಗಳೂರಿನ ಜಯನಗರ ಪೊಲೀಸ್ ಠಾಣೆಯಲ್ಲಿ ಶ್ರೀ ನಾಗೇಶ್ ಕೆ ಎಸ್, ಮಾಲೀಕರು ಮೆ: ಶ್ರೀನಿಧಿ ಮ್ಯಾನುಫ್ಯಾಕ್ಚರರ್ಸ್‌ರವರ ವಿರುದ್ಧ ದೂರು ದಾಖಲು ಮಾಡಲಾಗಿದೆ. ದಿನಾಂಕ 19-09-2019 ರಂದು KSCUBF, ಬೆಂಗಳೂರಿನಲ್ಲಿ ದಾವಾ ಹಾಕಿದ್ದು, ದಿನಾಂಕ 20-04-2021ರಂದು ಡಿಕ್ರಿ ಆದೇಶ ಪಡೆದಿದ್ದು, ವಸೂಲಿ ಕ್ರಮ ಜಾರಿಯಲ್ಲಿರುತ್ತದೆ.

**ಅಮಾನತ್ ಲೆಕ್ಕಗಳು, ಸಂಡ್ರಿ ಡಿಪಾಸಿಟ್‌ಗಳು, ಇತ್ಯಾದಿಗಳ ಬಗ್ಗೆ:**

**ಅಮಾನತ್ ಜವಾಬ್ದಾರಿ ಖಾತೆಗಳು :**

ದಿನಾಂಕ 31-03-2026ಕ್ಕೆ ಅಮಾನತ್ ಖಾತೆಯಲ್ಲಿ ರೂ. 18,000.00ಗಳಿದ್ದು ವಿವರ ಈ ಕೆಳಕಂಡಂತಿರುತ್ತದೆ:–

| ಕ್ರ.ಸಂ | ವಿವರಗಳು | ಮೊಬಲಗು (ರೂ. ಗಳಲ್ಲಿ) |
|---|---|---|
| 1 | ಜೆ. ಸಿ. ರಸ್ತೆ ಶಾಖೆ, ತುಮಕೂರು | 8,500.00 |
| 2 | ಕೆ ಆರ್ ಮೊಹಲ್ಲಾ ಶಾಖೆ, ಮೈಸೂರು | 10,000.00 |
| | **ಒಟ್ಟು** | **18,500.00** |

ಮೇಲ್ಕಂಡ ಮೊತ್ತ ಶಾಖೆಗಳಲ್ಲಿ ಹೆಚ್ಚುವರಿ ನಗದು ಬಂದಿರುವ ಬಾಬ್ತುಗಳಾಗಿದ್ದು ಮೂರು ವರ್ಷದ ನಂತರ ಸದರಿ ಬಾಬ್ತುಗಳನ್ನು ಲಾಭ–ನಷ್ಟ ಖಾತೆಗೆ ವರ್ಗಾಯಿಸಲು ಕ್ರಮವಿಡುವುದು.

| |
|---|
| **ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಾಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು:**<br>ಸದರಿ ಶೀರ್ಷಿಕೆಯಡಿಯಲ್ಲಿ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ನೆಡೆಸಿದ್ದು ಸದರಿ ಪರಿಶೀಲನೆಯಲ್ಲಿ ಯಾವುದೇ ಅಸಾಮಾನ್ಯ ನಮೂದುಗಳು ಕಂಡುಬಂದಿರುವುದಿಲ್ಲ. |
| **<u>ತನಿಖೆ / ಹಿಂದಿನ ತನಿಖೆಯ ದಿನಾಂಕ:</u>**<br>ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ಶಾಸನಬದ್ಧ ವಿಚಾರಣೆಗೆ ದಿನಾಂಕ 15-07-2023 ರಂದು ನೋಟೀಸ್ ನೀಡಿ ವಿಚಾರಣೆ ನಡೆಸಿರುತ್ತಾರೆ.<br>ಬ್ಯಾಂಕಿಂಗ್ ರೆಗ್ಯೂಲೇಷನ್ Act 1949 U/s 35 ರಂತೆ ದಿನಾಂಕ 31-03-2025ಕ್ಕೆ ಅಂತ್ಯಗೊಂಡಂತೆ ಆರ್.ಬಿ.ಐರವರು ವರದಿ ಸಾಲಿನಲ್ಲಿ ದಿನಾಂಕ 15-09-2025 ರಿಂದ 26-09-2025 ರವರೆಗೆ ಲೆಕ್ಕಪತ್ರಗಳು ಪರಿವೀಕ್ಷಣೆ ನೆಡೆಸಿ ದಿನಾಂಕ 09-01-2026 ರಂದು ಅವರ ಪತ್ರ ಸಂಖ್ಯೆ BLR.DOS.QAG.No.S1194/12-07-189/2025-2026 ರ ಪ್ರಕಾರ ಬ್ಯಾಂಕಿಗೆ ವರದಿ ನೀಡಿರುತ್ತಾರೆ. |

**(10) ದಾಖಲೆಗಳು, ಲೆಕ್ಕಪತ್ರಗಳ ನಿರ್ವಹಣೆ:**

**ಕರ್ನಾಟಕ ಸಹಕಾರ ಸಂಘಗಳ ನಿಯಮ 29ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರು ಪಡಿಸಿದ್ದಾರೆಯೇ?**

| | | | |
|---|---|---|---|
| ಎ | ಸಹಕಾರಿಯ ಕಾರ್ಯ ನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ | ಹೌದು | ~~ಇಲ್ಲ~~ |
| ಬಿ | ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಳಿ ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ | ಹೌದು | ~~ಇಲ್ಲ~~ |
| ಸಿ | ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ | ಹೌದು | ~~ಇಲ್ಲ~~ |
| ಡಿ | ಸದಸ್ಯತ್ವ ಮತ್ತು ಷೇರು ಷೆಡ್ಯೂಲು | ಹೌದು | ~~ಇಲ್ಲ~~ |
| ಇ | ಆಡಳಿತ ಮಂಡಳಿಯ ಸದಸ್ಯರ ಮತ್ತು ನೌಕರರ ಪಟ್ಟಿ | ಹೌದು | ~~ಇಲ್ಲ~~ |
| ಎಫ್ | ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು | ಹೌದು | ~~ಇಲ್ಲ~~ |
| ಜಿ | ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು | ಹೌದು | ~~ಇಲ್ಲ~~ |
| ಹೆಚ್ | ತಗಾದೆ ವಸೂಲಿ ಮತ್ತು ಉಳಿಕೆ(ಬಾಕಿ) ತಃಖ್ತೆ | ಹೌದು | ~~ಇಲ್ಲ~~ |
| ಐ | ಸುಸ್ತಿದಾರ ಸದಸ್ಯರ ಪಟ್ಟಿ | ಹೌದು | ~~ಇಲ್ಲ~~ |
| ಜೆ | ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ | ಹೌದು | ~~ಇಲ್ಲ~~ |
| ಕೆ | ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು | ಹೌದು | ~~ಇಲ್ಲ~~ |
| ಎಲ್ | ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು | ಹೌದು | ~~ಇಲ್ಲ~~ |
| ಎಂ | ಸಾಲ ದೃಢೀಕರಣ ತಃಖ್ತೆಗಳು | ಹೌದು | ~~ಇಲ್ಲ~~ |
| ಎನ್ | ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ | ಹೌದು | ~~ಇಲ್ಲ~~ |
| ಒ | ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು | ಹೌದು | ~~ಇಲ್ಲ~~ |
| ಪಿ | ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು | ಹೌದು | ~~ಇಲ್ಲ~~ |

| | | | |
|---|---|---|---|
| ಕ್ಯೂ | ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು | ಹೌದು | ಇಲ್ಲ |
| ಆರ್ | ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ | ಹೌದು | ಇಲ್ಲ |
| ಎಸ್ | ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು | ಹೌದು | ಇಲ್ಲ |
| ಟಿ | ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು | ಹೌದು | ಇಲ್ಲ |
| ಯು | ಮೀಸಲು, ಇತರೆ ನಿಧಿಗಳ ಷೆಡ್ಯೂಲು | ಹೌದು | ಇಲ್ಲ |
| ವಿ | ಠೇವಣಿದಾರರ ಷೆಡ್ಯೂಲು | ಹೌದು | ಇಲ್ಲ |
| ಡಬ್ಲ್ಯೂ | ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು | ಹೌದು | ಇಲ್ಲ |
| ಎಕ್ಸ್ | ಅಖೈರು ದಾಸ್ತಾನಿನ ಷೆಡ್ಯೂಲು | ಹೌದು | ಇಲ್ಲ |
| ವೈ | ಉಪ ವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರ ಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗಾವಾರು | ಹೌದು | ಇಲ್ಲ |
| ಝೆಡ್ | ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು | ಹೌದು | ಇಲ್ಲ |

**11) <u>ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ:</u>**
**<u>ಬ್ಯಾಂಕು ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ:</u>**

**1) ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ?**
ಸಹಕಾರ ಸಂಘಗಳ ಕಾಯ್ದೆ ಕಾನೂನು ಪ್ರಕರಣ 63(10) ರಂತೆ ಆಡಳಿತ ಮಂಡಳಿಯು ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕದಿಂದ 30 ದಿನದೊಳಗೆ ಸಹಕಾರಿ ಇಲಾಖೆಗಳಿಗೆ ಕ್ರಮ ತೆಗೆದುಕೊಂಡ ವರದಿಯನ್ನು ಸಲ್ಲಿಸಬೇಕಾಗಿದ್ದು ಬ್ಯಾಂಕು ಸಕಾಲದಲ್ಲಿ ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತದೆ.

**2) ಸಲ್ಲಿಸಿದ್ದಲ್ಲಿ ಪತ್ರ ಸಂಖ್ಯೆ:** ಟಿಜಿಎಂಸಿಬಿ/ಆಡಳಿತ/ಎಂಐಪಿಡಿ/317/2025-26 ದಿನಾಂಕ 29-09-2025.

**3) ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು:-**

| ಕ್ರ ಸಂ | ಪುಟ ಸಂಖ್ಯೆ | ಕಂಡಿಕೆ ಸಂಖ್ಯೆ | ನ್ಯೂನತೆಯ ವಿವರ | ನೀಡಿದ ಸಮಜಾಯಿಷಿ | ಪ್ರಸ್ತುತ ಸ್ಥಿತಿ |
|---|---|---|---|---|---|
| 1 | 17 | 13 | ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ)ಅಧಿನಿಯಮ 2014ರ ಕಲಂ 18(1) ರನ್ವಯ ಬ್ಯಾಂಕಿನಲ್ಲಿರುವ ಸಹ ಸದಸ್ಯರ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದರಷ್ಟನ್ನು ಮೀರತಕ್ಕದ್ದಲ್ಲ. ಈ ನಿಯಮವನ್ನು ಉಲ್ಲಂಘಿಸಲಾಗಿದೆ. | ವರದಿ ವರ್ಷದಲ್ಲಿ ಬ್ಯಾಂಕು ಹೊಸದಾಗಿ 155 ಮಂದಿಗೆ ಸದಸ್ಯತ್ವ ನೀಡಿದ್ದು, ಸಹ ಸದಸ್ಯರ ಸಂಖ್ಯೆಯನ್ನು ಕಡಿಮೆಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಬ್ಯಾಂಕು ಅಲ್ಪಾವಧಿ ಸಾಲಗಳಾದ ಚಿನ್ನಾಭರಣ ಸಾಲಗಳನ್ನು ನೀಡುತ್ತಿರುವುದರಿಂದ ಸಹ-ಸದಸ್ಯರ ಸಂಖ್ಯೆ ಹೆಚ್ಚಾಗುತ್ತಿದೆ. ಈ ವರದಿ ವರ್ಷದಲ್ಲಿ 761 ಜನ ಸಹ-ಸದಸ್ಯರನ್ನು ಸದಸ್ಯತ್ವದಿಂದ ಸಮಾಪನೆಗೊಳಿಸಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಾಗಿ ಸದಸ್ಯತ್ವವನ್ನು ನೀಡಿ ಸಹ ಸದಸ್ಯತ್ವವನ್ನು ಕಡಿಮೆಗೊಳಿಸಲು ಪ್ರಯತ್ನಿಸಲಾಗುವುದು. ಹಾಲಿ ಇರುವ 15% ಮಿತಿಯನ್ನು ಹೆಚ್ಚಿಸಲು ಸಹಕಾರ ಇಲಾಖೆಗೆ ಪತ್ರ ವ್ಯವಹಾರ ನೆಡೆಸಲಾಗಿರುತ್ತದೆ. | ಕ್ರಮ ಕೈಗೊಂಡಿಲ್ಲ. |

| | | | | | |
|---|---|---|---|---|---|
| 2 | 92 | 33.8 | ಷೇರು ಹಣದ ವ್ಯವಹಾರದ ಮಾಹಿತಿ, ಹೂಡಿಕೆಗಳ ವ್ಯವಹಾರದ ಮಾಹಿತಿ, ಆದ್ಯತಾ ವಲಯದ ವರ್ಗೀಕರಣ ಮತ್ತು ಡಿ. ಸಿ. ಬಿ ಕ್ಷೇತ್ರಗಳನ್ನು ಕೋರ್ ಬ್ಯಾಂಕಿಂಗ್‌ನಲ್ಲಿ ಅಳವಡಿಸಲು ಬಾಕಿ ಇರುತ್ತದೆ. ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಇನ್ನೂ ಸಮರ್ಪಕವಾಗಿ ಅಳವಡಿಸಿಕೊಳ್ಳುವುದು ಸೂಕ್ತ. | ಬ್ಯಾಂಕಿನಲ್ಲಿ TCSರವರ Global Banking Platform(GBP) ಕೋರ್ ಬ್ಯಾಂಕಿಂಗ್ ಸಿಸ್ಟಮ್ (CBS) ಅನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಪ್ರಸ್ತುತ ಹಣಕಾಸು ವರ್ಷದ ಅಂತ್ಯದೊಳಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ಲೆಕ್ಕಪರಿಶೋಧಕರು ಸೂಚಿಸಿರುವ ಆಕ್ಷೇಪಣೆಗಳನ್ನು ಪ್ರಸ್ತುತ ಹಣಕಾಸು ವರ್ಷದ ಅಂತ್ಯದೊಳಗೆ ಪರಿಹರಿಸಿಲಾಗುವುದು. | ಪ್ರಗತಿಯಲ್ಲಿದೆ. |

**12) ಸಹಕಾರ ಸಂಘಕ್ಕೆ/ಸಹಕಾರಿಗೆ ಅನ್ವಯಿಸುವ ಕಾನೂನುಗಳ ಪಾಲನೆ ಅಥವಾ ಉಲ್ಲಂಘನೆ ಕುರಿತು :**
**(ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗೂ ಬೈಲಾದ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ)**

| | |
|---|---|
| 1 | **ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಸಹಕಾರಿ ಸಂಘಗಳ ಕಾಯ್ದೆ, ನಿಯಮಗಳ ಪಾಲನೆ ಬಗ್ಗೆ ಟಿಪ್ಪಣಿ:** ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ಪಾಲನೆಗಳ ಬಗ್ಗೆ ವಿವರಗಳನ್ನು ಆಯಾ ಕಂಡಿಕೆಗಳಲ್ಲಿ ವಿವರಿಸಲಾಗಿದೆ. |
| 2 | **ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೇ? ಅಳವಡಿಸಿಕೊಳ್ಳಲಾಗಿದೆಯೇ? ಅನುಸರಿಸಲಾಗುತ್ತಿದೆಯೇ?** ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಿ, ಅಳವಡಿಸಿಕೊಂಡು ಅನುಸರಿಸಲಾಗುತ್ತಿದೆ. |
| 3 | **ನಬಾರ್ಡ್ ಅಥವಾ ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ:** ಆರ್.ಬಿ.ಐ ನಿರ್ದೇಶನಗಳ ಮತ್ತು ಮಾರ್ಗಸೂಚಿಗಳ ಅನುಸರಣೆ ಮಾಡಲಾಗುತ್ತಿದೆ. |
| 4 | **ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆ ಬಗ್ಗೆ ವರದಿ:** ಬೈಲಾ ಸಂಖ್ಯೆ 32.4(ಉ) ಪ್ರಕಾರ ಒಟ್ಟು ಸಹ–ಸದಸ್ಯರ ಸಂಖ್ಯೆಯು, ಬ್ಯಾಂಕಿನ ಒಟ್ಟು ಸಾಮಾನ್ಯ ಸದಸ್ಯರ ಸಂಖ್ಯೆಯ ಶೇ.15ಕ್ಕೆ ಮೀರಬಾರದೆಂದು ಇದ್ದರೂ ಪ್ರಸಕ್ತ ಸಾಲಿನಲ್ಲಿ ಒಟ್ಟು ಸಹ–ಸದಸ್ಯರ ಸಂಖ್ಯೆಯು ಪರಿಮಿತಿಗಿಂತ ಹೆಚ್ಚಾಗಿದ್ದು ಬೈಲಾ ಉಲ್ಲಂಘನೆ ಆಗಿರುತ್ತದೆ. |
| 5 | **ಸಹಕಾರ ಇಲಾಖೆ ಅಥವಾ ಆರ್.ಬಿ.ಐನಿಂದ ವಿಚಾರಣೆ/ ತಪಾಸಣೆ ಬಗ್ಗೆ ವರದಿ :** **ಅ)** ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರ ವಿಚಾರಣಾ ಸಂಬಂಧವಾಗಿ ಕಳೆದ ಸಾಲಿನಲ್ಲಿ ದಿನಾಂಕ 27-03-2025ರಂದು ಕಲಂ 64(4) ರ ಅಡಿಯಲ್ಲಿ ಅನುಪಾಲನಾ ವರದಿ ಸಲ್ಲಿಸುವಂತೆ ನಿಬಂಧಕರು ಸೂಚಿಸಿರುತ್ತಾರೆ. ಅದರಂತೆ ಬ್ಯಾಂಕಿನವರು ದಿನಾಂಕ 14-05-2025 ರಂದು ಸೂಕ್ತ ಸಮಜಾಹಿಷಿಗಳನ್ನು ನಿಬಂಧಕರ ಕಚೇರಿಗೆ ಸಲ್ಲಿಸಿರುತ್ತಾರೆ. ಮುಂದುವರೆದು, ಸಹಕಾರ ಸಂಘಗಳ ನಿಬಂಧಕರ ನಿರ್ದೇಶನದ ಮೇರೆಗೆ ಸಹಕಾರ ಸಂಘಗಳ ಜಂಟಿ ನಿಬಂಧಕರು ಅವರ ಪತ್ರ ಸಂಖ್ಯೆ ಆರ್‌ಸಿಎಸ್/ಯುಬಿಸಿ–1/200/ಕಲಂ.68/2022-23 ದಿನಾಂಕ 02-02-2026 ರಂತೆ ಬ್ಯಾಂಕಿಗೆ ಕಲಂ 64ರ ವಿಚಾರಣಾ ವರದಿಯ ಆರೋಪಗಳ ನ್ಯೂನತೆಗಳನ್ನು ಸರಿಪಡಿಸಿಕೊಂಡು 30 ದಿನಗಳ ಒಳಗಾಗಿ ಕಲಂ 68 ರಡಿಯಲ್ಲಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಸೂಚಿಸಿರುತ್ತಾರೆ.<br>ಕಲಂ 64ರ ವಿಚಾರಣಾ ವರದಿಯನ್ನು ಪ್ರಶ್ನಿಸಿ WP13087/2026 ರಡಿಯಲ್ಲಿ ಬ್ಯಾಂಕು ಗೌ|| ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ದಿನಾಂಕ 30-04-2026 ರಂದು ಘನ ನ್ಯಾಯಾಲಯವು ಕಲಂ 64 ರಡಿಯ ಎಲ್ಲ ಪ್ರಕ್ರಿಯೆಗಳಿಗೂ ತಡಯಾಜ್ಞೆಯನ್ನು ನೀಡಿರುತ್ತದೆ. |

| | |
|---|---|
| | **ಆ)** ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳು ವರದಿ ಸಾಲಿನಲ್ಲಿ ಬ್ಯಾಂಕಿನ 31-03-2025ರ ಅಂತ್ಯದ ಲೆಕ್ಕಪತ್ರ ಹಾಗು ವ್ಯವಹಾರಗಳ ಕೂಲಂಕುಷ ಪರಾಮರ್ಶೆ ನೆಡೆಸಿದ್ದು, ಬ್ಯಾಂಕಿನ ಆಡಳಿತ ಮಂಡಳಿಗೆ ಒಟ್ಟಾರೆ ವ್ಯವಹಾರ, ಸದಸ್ಯರ ಹಿತದೃಷ್ಟಿಯನ್ನು ಕಾಪಾಡುವ ನಿಟ್ಟಿನಲ್ಲಿ ಜಾರಿಗೆ ತರಬೇಕಾದ ಅನೇಕ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ. ಅವುಗಳಲ್ಲಿನ ಕೆಲವು ಅಂಶಗಳು ಈ ಕೆಳಕಂಡಂತಿರುತ್ತದೆ :–<br>**1.** ಬ್ಯಾಂಕು 1171 ವೈಯುಕ್ತಿಕ ಖಾತೆಗಳ ಹಾಗೂ 147 ಸಂಸ್ಥೆಗಳ ಖಾತೆಗಳ KYC ಮಾಹಿತಿಯನ್ನು CKYC ರಿಜಿಸ್ಟ್ರಿಯಲ್ಲಿ ನೋಂದಣಿ ಮಾಡಿರುವುದಿಲ್ಲ ಹಾಗು ಬ್ಯಾಂಕು CKYC ರಿಜಿಸ್ಟ್ರಿಯಿಂದ ಗ್ರಾಹಕರು ಮತ್ತು ಸಂಸ್ಥೆಗಳಿಗೆ ನೋಂದಣಿಯಾದ ಮಾಹಿತಿಯನ್ನು ನೀಡುವ ವ್ಯವಸ್ಥೆಯನ್ನು ಹೊಂದಿರುವುದಿಲ್ಲ.<br>**ಸಮಾಧಾನ :– ಪ್ರಸ್ತುತ 98 ವೈಯುಕ್ತಿಕ ಖಾತೆಗಳ KYC ಮಾಹಿತಿಯನ್ನು CKYC ರಿಜಿಸ್ಟ್ರಿಯಲ್ಲಿ ನೋಂದಣಿ ಮಾಡಲು ಬಾಕಿಯಿದ್ದು, ಉಳಿದ ಖಾತೆಗಳಿಗೆ ನೋಂದಣಿ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಸಂಸ್ಥೆಗಳ ಖಾತೆಗಳನ್ನು CKYC ರಿಜಿಸ್ಟ್ರಿಯಲ್ಲಿ ನೋಂದಣಿ ಮಾಡಲು ತಾಂತ್ರಿಕ ಸಮಸ್ಯೆ ಉಂಟಾಗಿದ್ದು, ಶೀಘ್ರದಲ್ಲಿ ಈ ಸಮಸ್ಯೆಯನ್ನು ಪರಿಹರಿಸಿ ಖಾತೆಗಳ KYC ಮಾಹಿತಿಯನ್ನು ನೋಂದಣಿ ಮಾಡಲಾಗುವುದು. ಬ್ಯಾಂಕಿನಿಂದ ನೋಂದಣಿಯಾದ ಖಾತೆದಾರರಿಗೆ CKYC ರಿಜಿಸ್ಟ್ರಿಯಿಂದಲೇ SMS ಮೂಲಕ ಮಾಹಿತಿ ನೀಡಲಾಗುತ್ತಿದೆ.**<br>**2.** ಬ್ಯಾಂಕ್‌ನಲ್ಲಿ 2255 ಪ್ರಕರಣಗಳಲ್ಲಿ, ಒಂದೇ PANಗೆ ಒಂದಕ್ಕಿಂತ ಹೆಚ್ಚು UCICಗಳನ್ನು ನೀಡಲಾಗಿದ್ದು, ಇದರಿಂದ ಗ್ರಾಹಕರ ಸಂಪೂರ್ಣ ಮಾಹಿತಿ ಒಂದೇ ಕಡೆ ಲಭ್ಯವಾಗದೇ, KYC/AML ಪರಿಶೀಲನೆ ಸಮರ್ಪಕವಾಗಿ ಮಾಡಲು ಸಾಧ್ಯವಾಗಿಲ್ಲ ಎಂದು ವರದಿಸಿರುತ್ತಾರೆ.<br>**3.** ಬ್ಯಾಂಕಿನ CBSನ ತಂತ್ರಾಂಶದಲ್ಲಿ ಪ್ರಮುಖ ವರದಿಗಳನ್ನು System ಮೂಲಕ ತಯಾರಿಸಲು ಪ್ರತ್ಯೇಕ MIS ಮಾಡ್ಯೂಲ್‌ನ್ನು ಹೊಂದಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.<br>**4.** ಬ್ಯಾಂಕ್‌ನಲ್ಲಿ ನಿಗದಿತ ಸಮಯದ ಮಿತಿಯೊಳಗೆ ಸ್ಟಾಕ್ ಸ್ಟೇಟ್‌ಮೆಂಟ್ ಸಲ್ಲಿಕೆ ಆಗದಿದ್ದಾಗ ಹಾಗೂ ಕ್ಯಾಶ್ ಕ್ರೆಡಿಟ್ ಸೌಲಭ್ಯವನ್ನು ನವೀಕರಿಸದಿದ್ದಾಗ ಅಂತಹ ಖಾತೆಗಳನ್ನು NPA ಎಂದು ಗುರುತಿಸಲು CBS ನಲ್ಲಿ ವ್ಯವಸ್ಥೆ ಜಾರಿಗೆ ತರಬೇಕು ಎಂದು ವರದಿಸಿರುತ್ತಾರೆ.<br>**ಸಮಾಧಾನ 2, 3 & 4 :– ಬ್ಯಾಂಕಿನಲ್ಲಿ TCSರವರ Global Banking Platform (GBP) ಕೋರ್ ಬ್ಯಾಂಕಿಂಗ್ ಸಿಸ್ಟಮ್ (CBS) ಅನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಪ್ರಸಕ್ತ ಹಣಕಾಸು ವರ್ಷದ ಅಂತ್ಯದೊಳಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ಲೆಕ್ಕಪರಿಶೋಧಕರು ಸೂಚಿಸಿರುವ ಆಕ್ಷೇಪಣೆಗಳನ್ನು ಪರಿಹರಿಸಿಲಾಗುವುದು.**<br>**5.** ಬ್ಯಾಂಕ್ ತನ್ನ ಹೂಡಿಕೆ ನೀತಿಯನ್ನು ಪರಿಶೀಲಿಸಿ, ಖಜಾನೆ (Treasury) ವಿಭಾಗದ ಕೆಲಸ ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ಪ್ರತ್ಯೇಕಿಸಬೇಕು ಹಾಗು ಖಜಾನೆ ನಿರ್ವಹಣೆಯಲ್ಲಿ CEO ಅವರ ಪಾತ್ರ ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ನಮೂದಿಸಬೇಕು ಎಂದು ವರದಿಸಿರುತ್ತಾರೆ.<br>**ಸಮಾಧಾನ :– ದಿನಾಂಕ 25-03-2026ರ ಕಾರ್ಯಕಾರಿ ಮಂಡಳಿಯಲ್ಲಿ ಬ್ಯಾಂಕಿನ ಹೂಡಿಕೆ ನೀತಿಯಲ್ಲಿ ಖಜಾನೆ ನಿರ್ವಹಣೆಯಲ್ಲಿ CEO ಅವರ ಪಾತ್ರ ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ನಮೂದಿಸಿ ಅನುಮೋದನೆ ಪಡೆಯಲಾಗಿರುತ್ತದೆ.**<br>**6.** ಬ್ಯಾಂಕು ಎನ್.ಪಿ.ಎ ಖಾತೆಗಳ ವರ್ಗೀಕರಣ ಮಾಡುವಾಗ, ಅದರಲ್ಲಿನ ಎರಡು ಖಾತೆಗಳ ವರ್ಗೀಕರಣದಲ್ಲಿ ವ್ಯತ್ಯಯ ಮಾಡಿದ್ದು(Doubtful-2 to Doubtful-3), ಆದಾಗ್ಯೂ ಬ್ಯಾಂಕು |

ಹೋಕುಬಾಕಿಗಾಗಿ ಕಾಯ್ದಿರಿಸಿದ್ದ ಮೊತ್ತವು ಹೆಚ್ಚಿದ್ದರಿಂದ, ಈ ವ್ಯತ್ಯಯದಿಂದ ಬ್ಯಾಂಕಿನ ನಿವ್ವಳ ಲಾಭದ ಮೇಲೆ ಯಾವುದೇ ಪರಿಣಾಮ ಬೀರಿರುವುದಿಲ್ಲ ಎಂದು ವರದಿಸಿರುತ್ತಾರೆ.

**ಸಮಾಧಾನ:– ಸದರಿ ಎನ್‌ಪಿಎ ಖಾತೆಗಳ ವರ್ಗೀಕರಣದಲ್ಲಿನ ವ್ಯತ್ಯಾಸವನ್ನು ದಿನಾಂಕ 31-01-2026ರಂದು ಸರಿಪಡಿಸಿಕೊಳ್ಳಲಾಗಿರುತ್ತದೆ.**

**ಇ) ವಿತ್ತೀಯ ದಂಡ :–**

**1.** ಬ್ಯಾಂಕಿನ ಅನುತ್ಪಾದಕ ಸಾಲದ ಪ್ರಮಾಣ ಶೇ. 6ಕ್ಕಿಂತ ಹೆಚ್ಚಾದ್ದರಿಂದ ಆರ್.ಬಿ.ಐ ದಿನಾಂಕ 30-06-2021 ರಿಂದ ಬ್ಯಾಂಕನ್ನು SAF (Supervisiory Action Framework) ನಿರ್ಭಂದಕ್ಕೆ ಒಳಪಡಿಸಿತ್ತು.

**2.** ಬ್ಯಾಂಕು 2023-24ನೇ ಸಾಲಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (RBI) ತನ್ನ ಮೇಲ್ವಿಚಾರಣಾ ಕ್ರಮ SAF ಅಡಿಯಲ್ಲಿ ನೀಡಿದ್ದ ನಿರ್ದಿಷ್ಟ ನಿರ್ದೇಶನಗಳನ್ನು ಬ್ಯಾಂಕು ಪಾಲಿಸದ ಕಾರಣ, 2025–26ನೇ ಆರ್ಥಿಕ ವರ್ಷದಲ್ಲಿ ಬ್ಯಾಂಕಿಗೆ ರೂ. 1.00 ಲಕ್ಷಗಳ ಹಣಕಾಸು ದಂಡವನ್ನು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949ರ ಕಲಂ 47A(1)(c), ಕಲಂ 46(4)(i) ಹಾಗೂ ಕಲಂ 56ರಡಿ RBIಗೆ ನೀಡಲಾದ ಅಧಿಕಾರದ ಅನ್ವಯ ವಿಧಿಸಿದೆ. SAF ನಿರ್ಬಂಧಗಳ ಉಲ್ಲಂಘನೆಯ ವಿವರ ಈ ಕೆಳಕಂಡಂತಿರುತ್ತದೆ :

**i.** ಬ್ಯಾಂಕು 100% ಕ್ಕಿಂತ ಹೆಚ್ಚಿನ Risk Weight ಹೊಂದಿದ್ದ 305 ಜಂಟಿ ಸಾಲ (Joint Loan) ಮತ್ತು ಕಂತು ಜಂಟಿ ಸಾಲದ (Instalment Joint Loan) ಖಾತೆಗಳನ್ನು ನವೀಕರಿಸಿರುವುದು.

**ii.** ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ನೀಡುತ್ತಿದ್ದ ಬಡ್ಡಿದರಕ್ಕಿಂತ ಹೆಚ್ಚಿನ ಬಡ್ಡಿದರವನ್ನು ಅವಧಿ ಠೇವಣಿ (Term Deposit) ಖಾತೆಗಳಿಗೆ ನೀಡಿರುವುದು. (70 ಖಾತೆಗಳು – ಮಾದರಿ ಪ್ರಕರಣಗಳು)

**iii.** ವಾಹನ ಸಾಲದಲ್ಲಿ ಎನ್.ಪಿ.ಎ/ಸುಸ್ತಿ ಪ್ರಮಾಣವು ಹೆಚ್ಚಿದ್ದರೂ, ಬ್ಯಾಂಕು 202 ವಾಹನ ಸಾಲಗಳನ್ನು (Passenger Vehicle Loans) ಮಂಜೂರು ಮಾಡಿರುವುದು.

**3.** ಭಾರತೀಯ ರಿಸರ್ವ್ ಬ್ಯಾಂಕ್ (RBI) 2024-25ನೇ ಸಾಲಿನ ಬ್ಯಾಂಕಿನ ಲೆಕ್ಕಪತ್ರಗಳ ಪರಿವೀಕ್ಷಣೆಯ ನಂತರ ಹಾಗೂ 31-12-2025ರ ಬ್ಯಾಂಕಿನ ಪ್ರಗತಿಯನ್ನು ಪರಿಗಣಿಸಿ ತನ್ನ ಪತ್ರದ ಸಂಖ್ಯೆ BLR.DOS.SSMS.No.S129/12-08-189/2025-2026 ದಿನಾಂಕ 25-02-2026ರಂತೆ ಬ್ಯಾಂಕಿನ ವ್ಯವಹಾರ ಸಮಯದ ನಂತರ ಅನ್ವಯಿಸುವಂತೆ ಬ್ಯಾಂಕಿಗೆ ವಿಧಿಸಿದ್ದ SAF ನಿರ್ಬಂಧಗಳನ್ನು ತೆರವುಗೊಳಿಸಿರುತ್ತಾರೆ.

## ಭಾಗ – 2

## ಬ್ಯಾಂಕಿನ ವ್ಯಾವಹಾರಿಕ ವಿವರಗಳು

**13) ದಿನಾಂಕ 31-03-2026ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತಿರುತ್ತದೆ:–**

| ಸದಸ್ಯತ್ವ | ಸಾಮಾನ್ಯ ಸದಸ್ಯತ್ವ | | ನಾಮಮಾತ್ರ ಸದಸ್ಯತ್ವ | | ಸಹ ಸದಸ್ಯತ್ವ | |
|---|---|---|---|---|---|---|
| | ಪ್ರಸಕ್ತ ಸಾಲು 2025-26 | ಹಿಂದಿನ ಸಾಲು 2024-25 | ಪ್ರಸಕ್ತ ಸಾಲು 2025-26 | ಹಿಂದಿನ ಸಾಲು 2024-25 | ಪ್ರಸಕ್ತ ಸಾಲು 2025-26 | ಹಿಂದಿನ ಸಾಲು 2024-25 |
| ವರ್ಷಾರಂಭದಲ್ಲಿ ಇದ್ದ ಸದಸ್ಯರು | **12864** | **12981** | **0** | **41** | **6391** | **5880** |
| ಹೊಸದಾಗಿ ಸದಸ್ಯತ್ವ ಪಡೆದವರು | 155 | 106 | 0 | 0 | 1596 | 1656 |
| ಸದಸ್ಯತ್ವದಿಂದ ಕಡಿಮೆ ಆದವರು | 188 | 223 | 0 | 41 | 761 | 1145 |
| ಸಾಲಾಖ್ಯೆರಿಗೆ ಇರುವ ಸದಸ್ಯರು | **12831** | **12864** | **0** | **0** | **7226** | **6391** |

**ಸದಸ್ಯತ್ವದ ಬಗ್ಗೆ ವಿಮರ್ಶೆ:**

ವರದಿ ವರ್ಷದಲ್ಲಿ ಸಾಮಾನ್ಯ ಸದಸ್ಯರ ಸಂಖ್ಯೆ 12831 ಇದ್ದು ಕಳೆದ ಸಾಲಿಗಿಂತ 33 ಸದಸ್ಯರು ಕಡಿಮೆಯಾಗಿರುತ್ತಾರೆ, ಅಂದರೆ ಶೇ.0.26ರಷ್ಟು ಸದಸ್ಯರ ಸಂಖ್ಯೆ ಕಡಿಮೆಯಾಗಿರುತ್ತದೆ.

ಬ್ಯಾಂಕಿನ ಉಪನಿಯಮ 33.4ರಂತೆ ನಾಮಮಾತ್ರ ಸದಸ್ಯರನ್ನು ಮುಖ್ಯ ಕಾರ್ಯನಿರ್ವಾಹಕರು ಸೇರಿಸಿಕೊಳ್ಳಬಹುದಾಗಿದ್ದು, ಬ್ಯಾಂಕಿನ ಉಪನಿಯಮ 33.6ರಂತೆ ನಾಮಮಾತ್ರ ಸದಸ್ಯರ ಸದಸ್ಯತ್ವವು ಆತನ ಹೊಣೆಗಾರಿಕೆ ಮುಗಿದ ಕೂಡಲೇ ಅಂತ್ಯಗೊಳ್ಳುತ್ತದೆ. ವರದಿ ವರ್ಷದಲ್ಲಿ ಯಾವುದೇ ನಾಮ ಮಾತ್ರ ಸದಸ್ಯರನ್ನು ಸೇರಿಸಿಕೊಂಡಿರುವುದಿಲ್ಲ.

ವರದಿ ಸಾಲಿನಲ್ಲಿ ರೂ. 291.15 ಲಕ್ಷಗಳ ಷೇರು ಬಂಡವಾಳವನ್ನು ಸಂಗ್ರಹಿಸಿದ್ದು, ರೂ. 515.86 ಲಕ್ಷಗಳು ವರದಿ ವರ್ಷದಲ್ಲಿ ವಾಪಸ್ಸಾಗಿದ್ದು ಇದು ಕಳೆದ ವರ್ಷದ ಅಂತ್ಯಕ್ಕಿದ್ದ ಷೇರು ಬಂಡವಾಳಕ್ಕೆ ಹೋಲಿಸಿದಾಗ ಸದರಿ ವಾಪಸ್ಸಾತಿಯು ಶೇ. 16.20 ರಷ್ಟಿರುತ್ತದೆ.

ಸದರಿ ಬ್ಯಾಂಕು ರಾಜ್ಯ ಸರ್ಕಾರ ಅಥವಾ ಇತರೆ ಸಹಕಾರ ಸಂಸ್ಥೆಗಳಿಂದ ಷೇರು ಬಂಡವಾಳ ಹೊಂದಿರುವುದಿಲ್ಲ, ಬ್ಯಾಂಕಿನ ವ್ಯವಹಾರಗಳು ಸಂಪೂರ್ಣವಾಗಿ ಗಣಕೀಕೃತಗೊಂಡಿದ್ದು ಷೇರು ರಿಜಿಸ್ಟರ್ ಸಹ ನಿರ್ವಹಿಸಲಾಗಿದೆ.

ಆರ್.ಬಿ.ಐನ ಸುತ್ತೋಲೆ ಸಂಖ್ಯೆ PLAN:UCB:20:09:63:00/96-97 ದಿನಾಂಕ 16-10-1996 ರಂತೆ ಸಾಲ ಪಡೆದ ನಾಮಮಾತ್ರ ಸದಸ್ಯರ ಸಂಖ್ಯೆಯು ಒಟ್ಟು ಸದಸ್ಯರ ಶೇ. 20ರೊಳಗೆ ಇರಬೇಕಾಗಿದ್ದು, ಪ್ರಸಕ್ತ ಸಾಲಿನಲ್ಲಿ ಅಂತ್ಯಕ್ಕೆ ಯಾವುದೇ ನಾಮಮಾತ್ರ ಸದಸ್ಯರಿರುವುದಿಲ್ಲ. ನಾಮಮಾತ್ರ ಸದಸ್ಯರಿಗೆ ಮತ ನೀಡುವ ಹಾಗೂ ಡಿವಿಡೆಂಡ್ ಪಡೆಯುವ ಹಕ್ಕು ಇರುವುದಿಲ್ಲ ಮತ್ತು ಸಾಮಾನ್ಯ ಸಭೆಯಲ್ಲೂ ಭಾಗವಹಿಸವಂತಿರುವುದಿಲ್ಲ.

ಸಾಮಾನ್ಯ ಸದಸ್ಯರಿಗೆ ಹೋಲಿಸಿದಾಗ ಸಹ ಸದಸ್ಯತ್ವ ಸಂಖ್ಯೆಯು ಶೇ. 56.32 ಇದ್ದು, ಇದು ಸರ್ಕಾರದ ಆದೇಶಕ್ಕೆ ವಿರುದ್ಧವಾಗಿರುತ್ತದೆ, ಈ ಬಗ್ಗೆ ಆರ್.ಬಿ.ಐನವರು ತಮ್ಮ ಪರಿವೀಕ್ಷಣಾ ವರದಿಯಲ್ಲಿಯೂ ಆಕ್ಷೇಪಿಸಿರುವುದು ಕಂಡುಬಂದಿರುತ್ತದೆ.

**ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014ರ ಕಲಂ 18(1)ರನ್ವಯ ಬ್ಯಾಂಕಿನಲ್ಲಿರುವ ಸಹ ಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದರಷ್ಟನ್ನು ಮೀರತಕ್ಕದ್ದಲ್ಲ, ಒಂದು ವೇಳೆ ಈಗಾಗಲೇ ಸದರಿ ಪ್ರಮಾಣ 15 ಪ್ರತಿಶತಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಅಂತಹ ಸದಸ್ಯರು ಕಲಂ 16ರನ್ವಯ ಕ್ರಮಬದ್ಧ ಸದಸ್ಯತ್ವ ಹೊಂದಲು ಅರ್ಹವಿದ್ದಲ್ಲಿ ಈ ತಿದ್ದುಪಡಿ ದಿನಾಂಕನಿಂದ 6 ತಿಂಗಳೊಳಗೆ ಅಂತಹ ಸಹ ಸದಸ್ಯರನ್ನು ಕ್ರಮಬದ್ಧ ಸದಸ್ಯರೆಂದು ಮಾಡಿಕೊಳ್ಳುವುದು, ಅಥವಾ ಅವರನ್ನು ಸಹ ಸದಸ್ಯತ್ವದಿಂದ ತೆಗೆದುಹಾಕುವುದು ಎಂದು ಇದ್ದು, ಈ ಮೇಲಿನ ಅಂಶಗಳನ್ನು ಗಮನಿಸಿ ಬ್ಯಾಂಕಿನಲ್ಲಿರುವ ಸಹ ಸದಸ್ಯರ ಬಗ್ಗೆ ವಿಮರ್ಶಿಸುವುದು:**

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಬ್ಯಾಂಕಿನಲ್ಲಿರುವ ಸಹ–ಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯರ ಪ್ರತಿಶತ 15 ರಷ್ಟು ಮೀರತಕ್ಕದಲ್ಲ. ಬ್ಯಾಂಕಿನಲ್ಲಿ 31-03-2026 ಕ್ಕೆ 12831 ಸದಸ್ಯರಿದ್ದು ಈ ಪೈಕಿ ಪ್ರತಿಶತ 15 ರಂತೆ 1925 ಸಹ ಸದಸ್ಯರಿರಬೇಕಾಗಿದ್ದು ದಿನಾಂಕ 31-03-2026ಕ್ಕೆ ಒಟ್ಟು 7226 ಸಹ ಸದಸ್ಯರಿದ್ದು ಮೇಲ್ಕಂಡ ನಿಯಮದ ಉಲ್ಲಂಘನೆಯಾಗಿರುತ್ತದೆ.

**ಸಮಾಧಾನ :– ಕ್ರಮವಿಡಲಾಗುವುದು.**

| |
|---|
| **ಎಲ್ಲಾ ಸದಸ್ಯರಿಂದ ಕೆ.ವೈ.ಸಿ. ದಾಖಲಾತಿಗಳನ್ನು ಪಡೆದಿರುವುದರ ಬಗ್ಗೆ ವಿಮರ್ಶೆ:** ಕೆಲವೊಂದು ಹಳೆ ಸದಸ್ಯರನ್ನು ಹೊರತು ಪಡಿಸಿ ಉಳಿದ ಎಲ್ಲಾ ಸದಸ್ಯರಿಂದ ಕೆ.ವೈ.ಸಿ ದಾಖಲಾತಿಗಳನ್ನು ಪಡೆದಿರುತ್ತಾರೆ. |
| **ಬ್ಯಾಂಕು ಸದಸ್ಯರೊಡನೆ ಕೈಗೊಂಡ ವ್ಯವಹಾರಗಳಲ್ಲಿ ಇರುವ ನ್ಯೂನತೆಗಳ ಬಗ್ಗೆ ವಿಮರ್ಶೆ:** |

| | |
|---|---|
| **1** | **ವಿವಿಧ ವರ್ಗಗಳ ಸದಸ್ಯರ ವ್ಯವಹಾರಗಳ ಬಗ್ಗೆ ಟಿಪ್ಪಣಿ:**<br>ಆಯಾ ವರ್ಗಕ್ಕೆ ಅನುಗುಣವಾಗಿ ಸದಸ್ಯರು ಠೇವಣಿ, ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆಗಳಲ್ಲಿ ವ್ಯವಹರಿಸಿರುತ್ತಾರೆ ಹಾಗೂ ಸಾಲಗಳನ್ನು ಪಡೆದಿರುತ್ತಾರೆ. ಸರ್ವಸದಸ್ಯರ ಸಭೆಗಳಲ್ಲಿ ಭಾಗವಹಿಸುವ ಕ್ರಮವಿಟ್ಟಿರುತ್ತಾರೆ. |
| **2** | **ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ:**<br>ಸದಸ್ಯೇತರರು ಠೇವಣಿ, ಉಳಿತಾಯ ಖಾತೆ, ಚಾಲ್ತಿ ಖಾತೆಗಳಲ್ಲಿ ವ್ಯವಹರಿಸುವ ಹಾಗೂ ಚಿನ್ನಾಭರಣ ಸಾಲ ಮತ್ತು ಠೇವಣಿ ಸಾಲ ಪಡೆಯುವ ವ್ಯವಹಾರಗಳಿಗೆ ಮಾತ್ರ ಸೀಮಿತರಾಗಿರುತ್ತಾರೆ. |
| **3** | **ವ್ಯಾಪ್ತಿ ಮೀರಿ ನಡೆಸಿದ ವ್ಯವಹಾರಗಳು:**<br>ನಮ್ಮ ಪರೀಕ್ಷಾರ್ತ ಪರಿಶೀಲನೆಯ ಆಧಾರದ ಮೇಲೆ, ಬ್ಯಾಂಕು ವ್ಯಾಪ್ತಿ ಮೀರಿ ಯಾವುದೇ ವ್ಯವಹಾರ ನಡೆಸಿರುವುದು ಕಂಡು ಬಂದಿರುವುದಿಲ್ಲ. |
| **4** | **ಷೇರು ಬಂಡವಾಳ ನಿರ್ವಹಣೆ ಬಗ್ಗೆ ಟಿಪ್ಪಣಿ:**<br>ಷೇರು ಬಂಡವಾಳವನ್ನು ಬ್ಯಾಂಕಿನ ನಿತ್ಯ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು ಸದಸ್ಯರಿಗೆ ಸಾಲ ನೀಡಲು ಹಾಗೂ ಹೆಚ್ಚುವರಿ ಬಂಡವಾಳದ ಹೂಡಿಕೆಗಳಲ್ಲಿ ವಿನಿಯೋಗಿಸುತ್ತಿದ್ದು ಷೇರು ಬಂಡವಾಳದ ನಿರ್ವಹಣೆ ಸಮರ್ಪಕವಾಗಿರುತ್ತದೆ. |

**14) ಷೇರು ಬಂಡವಾಳದ ಬಗ್ಗೆ ವಿಮರ್ಶೆ:**

1) **ಅಧಿಕೃತ ಷೇರು ಬಂಡವಾಳ:**

**ಬ್ಯಾಂಕಿನ ಉಪ ನಿಯಮದನ್ವಯ ಅಧಿಕೃತ ಷೇರು ಬಂಡವಾಳದ ಮಿತಿ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ನಿರ್ಧರಿಸಿದ ಕುರಿತು ಹಾಗೂ ಬ್ಯಾಂಕಿನ ಉಪ ನಿಯಮದನ್ವಯ ಷೇರಿನ ಮುಖಬೆಲೆ ಕುರಿತು ವಿಮರ್ಶಿಸುವುದು:**

ಬ್ಯಾಂಕಿನ ಉಪನಿಯಮ 10ರ ಅನ್ವಯ ಬ್ಯಾಂಕಿನ ಷೇರು ಬಂಡವಾಳ ಸದಸ್ಯರ ರೂ 100.00 ರ 30 ಲಕ್ಷ ಷೇರುಗಳು ಮತ್ತು ಸಹ ಸದಸ್ಯರ ರೂ 100.00 ರ 25 ಲಕ್ಷ ಷೇರುಗಳಿಂದ ಕೂಡಿರುತ್ತದೆ. ಬ್ಯಾಂಕಿನ ಒಟ್ಟು ಅಧಿಕೃತ ಷೇರು ಬಂಡವಾಳವು ರೂ 55.00 ಕೋಟಿಗಳಾಗಿರುತ್ತದೆ.

**ದಿನಾಂಕ 31-03-2026ಕ್ಕೆ ಇರುವಂತೆ ಬ್ಯಾಂಕಿನಲ್ಲಿ ಸಂದಾಯವಾದ ಷೇರು ಬಂಡವಾಳದ ವಿವರ ಈ ಳಕಂಡಂತೆ ಇರುತ್ತದೆ:** **(ರೂ. ಲಕ್ಷಗಳಲ್ಲಿ)**

| **ಷೇರು ಬಂಡವಾಳ** | **ಸರಕಾರದ ಷೇರು** | | **ಸಾಮಾನ್ಯ ಷೇರು** | | **ನಾಮಮಾತ್ರ ಸದಸ್ಯರ ಷೇರು** | | **ಸಹ ಸದಸ್ಯರ ಷೇರು** | |
|---|---|---|---|---|---|---|---|---|
| | **ಪ್ರಸಕ್ತ ಸಾಲು** | **ಹಿಂದಿನ ಸಾಲು** | **ಪ್ರಸಕ್ತ ಸಾಲು** | **ಹಿಂದಿನ ಸಾಲು** | **ಪ್ರಸಕ್ತ ಸಾಲು** | **ಹಿಂದಿನ ಸಾಲು** | **ಪ್ರಸಕ್ತ ಸಾಲು** | **ಹಿಂದಿನ ಸಾಲು** |
| | **2025-26** | **2024-25** | **2025-26** | **2024-25** | **2025-26** | **2024-25** | **2025-26** | **2024-25** |
| ವರ್ಷಾರಂಭದಲ್ಲಿದ್ದಂತೆ | - | - | **1798.20** | **1884.14** | **0.00** | **0.04** | **1385.52** | **1382.73** |
| ಪ್ರಸಕ್ತ ಸಾಲಿನಲ್ಲಿನ ಜಮಾ | - | - | 69.47 | 169.74 | 0.00 | 0.00 | 221.68 | 263.60 |
| ಪ್ರಸಕ್ತ ಸಾಲಿನಲ್ಲಿನ ಖರ್ಚು | - | - | 249.79 | 255.68 | 0.00 | 0.04 | 266.07 | 260.81 |
| **ಸಾಲಾಖೈರಿಗೆ ಇದ್ದಂತೆ** | - | - | **1617.88** | **1798.20** | **0.00** | **0.00** | **1341.13** | **1385.52** |

| |
|---|
| <u>**ಸರಕಾರದ ಷೇರು ಬಂಡವಾಳದ ಬಗ್ಗೆ ವಿಮರ್ಶೆ:**</u><br>**ಸರ್ಕಾರದ ಷೇರು ಧನ ಕುರಿತಂತೆ ಮಂಜೂರಾತಿ ಆದೇಶ ಮತ್ತು ಮರುಪಾವತಿಯ ಕಂತುಗಳ ಷರತ್ತು ಇತ್ಯಾದಿ ಕುರಿತು ವಿಮರ್ಶಿಸುವುದು:**<br>ಸರ್ಕಾರದ ಷೇರು ಹೊಂದಿರುವುದಿಲ್ಲವಾದ್ದರಿಂದ ಅನ್ವಯವಾಗುವುದಿಲ್ಲ. |
| <u>**ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಶೆ:**</u><br>**(ಇದರಲ್ಲಿ ಸಂದಾಯವಾದ ಷೇರು ಬಂಡವಾಳ ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿ ಇರುವಂತೆ, ಷೇರಿನ ಮುಖಬೆಲೆಯಂತೆ ಪೂರ್ಣ ಇರುವ ಬಗ್ಗೆ, ಎಲ್ಲಾ ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಿರುವ ಬಗ್ಗೆ, ಬ್ಯಾಂಕಿನಲ್ಲಿ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 122ರಂತೆ ಸದಸ್ಯರ ರಿಜಿಸ್ಟರಿನಲ್ಲಿ ಪೂರ್ಣ ವಿವರಗಳೊಂದಿಗೆ ಬರೆದು ಇಟ್ಟಿರುವ ಬಗ್ಗೆ ವಿಮರ್ಶಿಸುವುದು)**<br>ಸಂದಾಯವಾದ ಷೇರು ಬಂಡವಾಳವು ಅಧಿಕೃತ ಷೇರು ಬಂಡವಾಳದ ಪರಿಮಿತಿಯಲ್ಲಿರುತ್ತದೆ ಮತ್ತು ಪ್ರತಿ ಷೇರಿನ ಮುಖ ಬೆಲೆಯು ರೂ. 100.00ಗಳಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 122 ರಂತೆ ಷೇರು ರಿಜಿಸ್ಟರ್ ನಿರ್ವಹಿಸಿರುತ್ತಾರೆ ಹಾಗೂ ಬ್ಯಾಂಕಿನ ಉಪನಿಯಮ 28 ರಂತೆ ಪ್ರತಿ ಸಹಕಾರ ವರ್ಷದ ಕೊನೆಯ ದಿನದಂದು ಇರುವಂತೆ ತಮ್ಮ ಸದಸ್ಯರುಗಳ ಒಂದು ಪಟ್ಟಿಯನ್ನು ಸಿದ್ಧಪಡಿಸಬೇಕಾಗಿದ್ದು ಅದರಂತೆ ಕ್ರಮವಿಡಲಾಗಿರುತ್ತದೆ. ಸದಸ್ಯರ ಪಟ್ಟಿಯನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಿರ್ವಹಿಸಲಾಗಿದ್ದು ಪ್ರಮಾಣ ಪತ್ರ ಹಾಗೂ ಗುರುತಿನ ಚೀಟಿ ನೀಡಿರುತ್ತಾರೆ. |
| **ಕುಳುವಾರು ಪಟ್ಟಿ ತಯಾರಿಸಿದ್ದಾರೆಯೇ? ತಾಳೆಯಾಗಿದೆಯೇ?**<br>**(ವ್ಯತ್ಯಾಸವಿದ್ದಲ್ಲಿ ವ್ಯತ್ಯಾಸ ಯಾವ ಸಾಲಿನದು ಎಂಬುದರ ಬಗ್ಗೆ ವಿಮರ್ಶಿಸುವುದು)**<br>ಬ್ಯಾಂಕು ಹೊಂದಿರುವ ಸದಸ್ಯರ/ಸಹ ಸದಸ್ಯರ ಷೇರು ಕುಳುವಾರು ಗಣಕಯಂತ್ರದಿಂದ ಹೊರಹೊಮ್ಮಿದ್ದು, ಈ ಮೊತ್ತವು ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ತೋರಿಸಿರುವ ಮೊಬಲಗಿಗೆ ತಾಳೆ ಇರುತ್ತದೆ. |

**15) ಮೀಸಲು ನಿಧಿ ಮತ್ತು ಇತರೆ ನಿಧಿಗಳು: 'ಷೆಡ್ಯೂಲ್ ಯು'ನಲ್ಲಿರುವ ಪ್ರಕಾರ ನಿಧಿಗಳು :–**

ದಿನಾಂಕ 31-03-2026ಕ್ಕೆ ಬ್ಯಾಂಕು ರೂ. 111,73,50,367.96ಗಳ ಆಪದ್ಧನ ಒಳಗೊಂಡಂತೆ ಒಟ್ಟು ರೂ. 214,92,43,387.37ಗಳ ನಿಧಿಗಳನ್ನು ಹೊಂದಿರುತ್ತದೆ.

| ಕ್ರ.ಸಂ. | ವಿವರಗಳು | ಮೊಬಲಗು (ರೂ. ಗಳಲ್ಲಿ) |
|---|---|---|
| 1 | ಆಪದ್ಧನ ನಿಧಿ | 111,73,50,367.96 |
| 2 | ಕಟ್ಟಡದ ನಿಧಿ | 26,61,73,356.93 |
| 3 | ಧರ್ಮದ ನಿಧಿ | 79,23,961.27 |
| 4 | ಸದಸ್ಯರ ಕ್ಷೇಮ ನಿಧಿ | 12,35,90,270.86 |
| 5 | ಪ್ರಚಾರ ನಿಧಿ | 1,38,53,966.08 |
| 6 | ಹೂಡಿಕೆಗಳ ಏರಿಳಿತದ ನಿಧಿ | 21,74,78,589.00 |
| 7 | ವಿಶೇಷ ಕ್ಷೇತ್ರಕ್ಕಾಗಿ ಕಾಯ್ದಿರಿಸಿರುವ ನಿಧಿ | 15,75,03,379.00 |
| 8 | ವಜ್ರ ಮಹೋತ್ಸವ ನಿಧಿ | 87,17,246.27 |
| 9 | ಮರು ಮೌಲ್ಯಮಾಪನ ನಿಧಿ (ನಿವೇಶನ ಮತ್ತು ಕಟ್ಟಡ) | 23,66,52,250.00 |
| | **ಒಟ್ಟು** | **214,92,43,387.37** |

| | |
|---|---|
| **1** | **ಬ್ಯಾಂಕಿನಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆಯೇ? ಪ್ರತ್ಯೇಕವಾಗಿ ಗುಂತಾಯಿಸದೇ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ** |

**ಅನುಮತಿ ಪಡೆದಿದ್ದಾರೆಯೇ? ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖೈರಿಗೆ ಜಮಾ ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ:**

**ಆಪದ್ಧನ ನಿಧಿ:** ಸಾಲು ಪ್ರಾರಂಭದಲ್ಲಿ ಬ್ಯಾಂಕು ರೂ. 103,56,55,546.58ಗಳ ಆಪದ್ಧನ ನಿಧಿ ಹೊಂದಿದ್ದು, ವರದಿ ಸಾಲಿನಲ್ಲಿ ಸದರಿ ನಿಧಿಗೆ 2024-25ನೇ ಸಾಲಿನ ಲಾಭ ವಿಲೇವಾರಿ ಬಾಬ್ತು ರೂ. 8,07,48,861.38 ಹಾಗೂ ಡಿವಿಡೆಂಡ್‌ಗಳ ಹೆಚ್ಚುವರಿ ಅವಕಾಶ ರೂ. 9,45,960.00 ಒಟ್ಟು ರೂ.8,16,94,821.38ಗಳನ್ನು ಜಮಾ ಮಾಡಲಾಗಿದ್ದು, ಬ್ಯಾಂಕು ವರ್ಷಾಂತ್ಯಕ್ಕೆ ರೂ. 111,73,50,367.96 ಗಳ ಆಪದ್ಧನ ನಿಧಿ ಹೊಂದಿರುತ್ತದೆ.

ಆಪದ್ಧನದ ನಿಧಿಯನ್ನು ಸರ್ಕಾರಿ ಭದ್ರತಾ ಪತ್ರಗಳಲ್ಲಿ ಹೂಡಿಕೆ ಮಾಡಿದ್ದು, ರೂ. 115,00,00,000.00ಗಳ ಸರ್ಕಾರಿ ಭದ್ರತಾ ಪತ್ರಗಳನ್ನು ಆಪದ್ಧನ ಶಿರೋನಾಮೆಯಡಿ ನಿರ್ವಹಿಸಿದ್ದು ಹಾಗೂ ಸದರಿ ಗುಂತಾವಣಿಗಳ ಮೇಲೆ ರೂ. 8,88,95,000.00ಗಳ ಬಡ್ಡಿ ಬಂದಿರುತ್ತದೆ. ಗುಂತಾವಣಿಗಳ ವಿವರ ಕೆಳಕಂಡಂತಿರುತ್ತದೆ :–

| **ಕ್ರ.ಸಂ** | **ವಿವರಗಳು** | **ಮೊಬಲಗು (ರೂ. ಗಳಲ್ಲಿ)** |
|---|---|---|
| 1 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2027 8.26% | 5,00,00,000.00 |
| 2 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2027 8.28% | 5,00,00,000.00 |
| 3 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2027 8.28% | 5,00,00,000.00 |
| 4 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2028 6.13% | 5,00,00,000.00 |
| 5 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2032 8.28% | 5,00,00,000.00 |
| 6 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2032 8.28% | 5,00,00,000.00 |
| 7 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2032 8.28% | 5,00,00,000.00 |
| 8 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2032 8.28% | 5,00,00,000.00 |
| 9 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2032 8.28% | 5,00,00,000.00 |
| 10 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2032 8.28% | 5,00,00,000.00 |
| 11 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2034 7.50% | 5,00,00,000.00 |
| 12 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2034 7.50% | 5,00,00,000.00 |
| 13 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2039 6.83% | 5,00,00,000.00 |
| 14 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2039 6.83% | 5,00,00,000.00 |
| 15 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2044 8.17% | 5,00,00,000.00 |
| 16 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2035 7.40% | 5,00,00,000.00 |
| 17 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2035 7.40% | 5,00,00,000.00 |
| 18 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2032 7.95% | 5,00,00,000.00 |
| 19 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2028 7.17% | 10,00,00,000.00 |
| 20 | ಗೌರ್ನಮೆಂಟ್ ಆಫ್ ಇಂಡಿಯಾ ಸ್ಟಾಕ್ 2030 9.20% | 5,00,00,000.00 |
| 21 | ಸ್ಟೇಟ್ ಗೌರ್ನಮೆಂಟ್ ಸ್ಟಾಕ್ ಉತ್ತರ ಪ್ರದೇಶ 2032 7.02% | 10,00,00,000.00 |
| | **ಒಟ್ಟು** | **115,00,00,000.00** |

| | |
|---|---|
| | **2. ಕಟ್ಟಡದ ನಿಧಿ:** ಸಾಲು ಪ್ರಾರಂಭದಲ್ಲಿ ರೂ. 25,49,26,972.93ಗಳ ಕಟ್ಟಡದ ನಿಧಿ ಹೊಂದಿದ್ದು, ವರದಿ ಸಾಲಿನಲ್ಲಿ 2024-25ನೇ ಸಾಲಿನ ಲಾಭ ವಿಲೇವಾರಿ ಬಾಬ್ತು ರೂ. 1,12,46,384.00ಗಳನ್ನು ಕಟ್ಟಡದ ನಿಧಿಗೆ ವರ್ಗಾಯಿಸಿದ್ದು, ಸಾಲಖೈರಿಗೆ ರೂ. 26,61,73,356.93ಗಳ ಕಟ್ಟಡದ ನಿಧಿ ಹೊಂದಿರುತ್ತದೆ.<br><br>**3. ಧರ್ಮದ ನಿಧಿ:** ಸಾಲು ಪ್ರಾರಂಭದಲ್ಲಿ ರೂ. 45,50,046.27ಗಳಿದ್ದು ವರದಿ ಸಾಲಿನಲ್ಲಿ 2024-25ನೇ ಸಾಲಿನ ಲಾಭ ವಿಲೇವಾರಿ ಬಾಬ್ತು ರೂ. 33,73,915.00ಗಳನ್ನು ವರ್ಗಾಯಿಸಿದ್ದು ಸಾಲಖೈರಿಗೆ ರೂ. 79,23,961.27ಗಳ ಧರ್ಮದ ನಿಧಿಯನ್ನು ಹೊಂದಿರುತ್ತದೆ.<br><br>**4. ಸದಸ್ಯರ ಕ್ಷೇಮ ನಿಧಿ:** ಸಾಲು ಪ್ರಾರಂಭದಲ್ಲಿ ರೂ. 11,79,67,078.86 ಗಳಿದ್ದು ವರದಿ ಸಾಲಿನಲ್ಲಿ 2024-25ನೇ ಸಾಲಿನ ಲಾಭ ವಿಲೇವಾರಿ ಬಾಬ್ತು ರೂ.56,23,192.00ಗಳನ್ನು ವರ್ಗಾಯಿಸಿದ್ದು ಸಾಲಖೈರಿಗೆ ರೂ.12,35,90,270.86ಗಳ ಸದಸ್ಯರ ಕ್ಷೇಮ ನಿಧಿಯನ್ನು ಹೊಂದಿರುತ್ತದೆ.<br><br>**5. ಪ್ರಚಾರ ನಿಧಿ:** ಸಾಲು ಪ್ರಾರಂಭದಲ್ಲಿ ರೂ. 93,55,412.08 ಗಳನ್ನು ಹೊಂದಿದ್ದು ವರದಿ ಸಾಲಿನಲ್ಲಿ 2024-25ನೇ ಸಾಲಿನ ಲಾಭ ವಿಲೇವಾರಿ ಬಾಬ್ತು ರೂ. 44,98,554.00 ಗಳನ್ನು ವರ್ಗಾಯಿಸಿದ್ದು ಸಾಲಖೈರಿಗೆ ರೂ.1,38,53,966.08ಗಳ ಪ್ರಚಾರ ನಿಧಿಯನ್ನು ಹೊಂದಿರುತ್ತದೆ.<br><br>**6. ಹೂಡಿಕೆಗಳ ಏರಿಳಿತ ನಿಧಿ**: ಸಾಲು ಪ್ರಾರಂಭದಲ್ಲಿ ರೂ. 20,62,32,205.00 ಗಳಿದ್ದು ವರದಿ ಸಾಲಿನಲ್ಲಿ 2024-25ನೇ ಸಾಲಿನ ಲಾಭ ವಿಲೇವಾರಿ ಬಾಬ್ತು ರೂ.1,12,46,384.00ಗಳನ್ನು ವರ್ಗಾಯಿಸಿದ್ದು ಸಾಲಖೈರಿಗೆ ರೂ. 21,74,78,589.00ಗಳ ಹೂಡಿಕೆಗಳ ಏರಿಳಿತ ನಿಧಿಯನ್ನು ಹೊಂದಿರುತ್ತದೆ.<br><br>**7. ವಿಶೇಷ ಕ್ಷೇತ್ರಕ್ಕಾಗಿ ಕಾಯ್ದಿರಿಸಿರುವ ನಿಧಿ:** ಸಾಲು ಪ್ರಾರಂಭದಲ್ಲಿ ರೂ. 15,15,03,379.00ಗಳಿದ್ದು, ವರದಿ ಸಾಲಿನಲ್ಲಿ ರೂ. 60,00,000.00ಗಳನ್ನು ಲಾಭ–ನಷ್ಟ ಖಾತೆಗೆ ಖರ್ಚು ಹಾಕಿ ಈ ನಿಧಿಗೆ ಜಮಾ ಮಾಡಲಾಗಿದ್ದು, ಸಾಲಾಖೈರಿಗೆ ರೂ. 15,75,03,379.00 ಗಳಿರುತ್ತದೆ.<br><br>**8. ವಜ್ರ ಮಹೋತ್ಸವ ನಿಧಿ:** ಸಾಲು ಪ್ರಾರಂಭದಲ್ಲಿ ರೂ. 53,43,331.27ಗಳಿದ್ದು ವರದಿ ಸಾಲಿನಲ್ಲಿ 2024-25ನೇ ಸಾಲಿನ ಲಾಭ ವಿಲೇವಾರಿ ಬಾಬ್ತು ರೂ. 33,73,915.00ಗಳನ್ನು ವರ್ಗಾಯಿಸಿದ್ದು ಸಾಲಖೈರಿಗೆ ರೂ. 87,17,246.27 ಗಳಿರುತ್ತದೆ.<br><br>**9. ಮರುಮೌಲ್ಯಮಾಪನ ನಿಧಿ (ನಿವೇಶನ ಮತ್ತು ಕಟ್ಟಡ):** ಸಾಲು ಪ್ರಾರಂಭದಲ್ಲಿ ಬ್ಯಾಂಕಿನ ಕೇಂದ್ರ ಕಚೇರಿ ಮತ್ತು ಎ ಪಿ ಎಂ ಸಿ ಯಾರ್ಡ್ ಶಾಖೆ ಕಟ್ಟಡಗಳ ಮರುಮೌಲ್ಯಮಾಪನದ ಬಾಬ್ತು ರೂ. 23,66,52,250.00 ಗಳಿದ್ದು, ಸದರಿ ಮೊತ್ತವು ವರದಿ ಸಾಲಿನಲ್ಲೂ ಮುಂದುವರೆದಿರುತ್ತದೆ. |
| 2 | **ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಲಾಗಿದೆಯೇ?**<br>ಬ್ಯಾಂಕು ಕಳೆದ ಸಾಲಿನಲ್ಲಿ ರೂ. 15.46 ಕೋಟಿ ನಿವ್ವಳ ಲಾಭ ಗಳಿಸಿದ್ದು, ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಿರುತ್ತಾರೆ. |
| 3 | **ಬ್ಯಾಂಕು ಕರ್ನಾಟಕ ಸಹಕಾರಿ ಸಂಘಗಳ ನಿಯಮ 23(2)ರನ್ವಯ ತನ್ನ ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ನಿಬಂಧಕರ ಆದೇಶದನ್ವಯ ಸ್ವಂತ ವ್ಯಾಪಾರಕ್ಕಾಗಿ ಅಥವಾ ಬ್ಯಾಂಕಿನ ಕಟ್ಟಡ ನಿರ್ಮಾಣ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಲು ಅನುಮತಿ** |

| | |
|---|---|
| | **ಪಡೆಯದಿದ್ದಲ್ಲಿ, ಸದರಿ ಆದೇಶದ ಷರತ್ತುಗಳ ಹಾಗೂ ಅವುಗಳ ಪಾಲನೆಯ ಕುರಿತು ವಿಮರ್ಶಿಸುವುದು:**<br>ಬ್ಯಾಂಕು ತನ್ನ ಕಾಯ್ದಿಟ್ಟ ನಿಧಿಯ ಪೈಕಿ ಯಾವುದೇ ಭಾಗವನ್ನು ನಿಬಂಧಕರ ಆದೇಶ ಪಡೆದು ಸ್ವಂತ ವ್ಯಾಪಾರಕ್ಕಾಗಲಿ ಇಲ್ಲವೆ ಬ್ಯಾಂಕಿನ ಕಟ್ಟಡ ನಿರ್ಮಾಣಕ್ಕಾಗಲಿ ಉಪಯೋಗಿಸಿಕೊಂಡಿರುವುದಿಲ್ಲ. |
| **4** | **ಈ ಮೇಲಿನಂತೆ ವಿನಿಯೋಗಿಸಿದ ಕಾಯ್ದಿಟ್ಟ ನಿಧಿಯ ಮೊತ್ತ ಹಾಗೂ ಸ್ಥಿರಾಸ್ತಿಯಲ್ಲಿ ವಿನಿಯೋಗಿಸಿದ ಕಟ್ಟಡ ನಿಧಿಯ ಮೊತ್ತವನ್ನು ಬ್ಯಾಂಕಿನ ಸಾಲ ಜಿಂದಗಿ (Balance Sheet) ತಃಖ್ತೆಯ ಸಂಬಂಧಿಸಿದ ನಿಧಿಯ ಕೆಳಗೆ ಒಳಗಿನ ಅಂಕಣದಲ್ಲಿ (Inner Column) ಕಡ್ಡಾಯವಾಗಿ ನಮೂದಿಸುವುದು:**<br>ಮೇಲ್ಕಂಡ ಷರಾದಿಂದಾಗಿ ಸದರಿ ಪ್ರಶ್ನಾವಳಿ ಅನ್ವಯವಾಗುವುದಿಲ್ಲ. |
**ಸರ್ಕಾರಿ ಭದ್ರತೆಗಳಲ್ಲಿ ನಡೆಸಿದ ವ್ಯವಹಾರ (Trading in Govt. Securities) :** ಆರ್.ಬಿ.ಐ ಸುತ್ತೋಲೆ ಸಂಖ್ಯೆ UBD(PCB)MCNo.12/16.20.000/2010-11 ರಂತೆ ಅರ್ಧ ವಾರ್ಷಿಕ ಹೂಡಿಕೆಗಳನ್ನು ದಿನಾಂಕ 16-10-2025 ಮತ್ತು 18-04-2026 ರಂದು ಆರ್.ಬಿ.ಐಗೆ ಸಲ್ಲಿಸಿರುತ್ತಾರೆ. ವರದಿ ವರ್ಷದಲ್ಲಿ ಯಾವುದೇ ವ್ಯವಹಾರ ನೆಡೆಸಿರುವುದಿಲ್ಲ.

**ಆ) Non SLR ಹೂಡಿಕೆಗಳು:** ದಿನಾಂಕ 31-03-2026ಕ್ಕೆ Non-SLR ಹೂಡಿಕೆಗಳು ರೂ. 172,79,77,348.00 ಗಳಿದ್ದು ಅದರ ವಿವರ ಕೆಳಕಂಡಂತಿರುತ್ತದೆ : **(ರೂ. ಗಳಲ್ಲಿ)**

| ಕ್ರ. ಸಂ | ಹೂಡಿಕೆಗಳು | ಹೂಡಿಕೆಯ ಸ್ವರೂಪ | ಲೆಕ್ಕ ಪುಸ್ತಕದಲ್ಲಿ ತೋರಿಸಿರುವ ಮೊತ್ತ |
|---|---|---|---|
| 1 | ತುಮಕೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. | ಷೇರು ರೂಪದಲ್ಲಿ | 25,000.00 |
| 2 | ಮ್ಯೂಚುಯಲ್ ಫಂಡ್ಸ್ | ಲಿಕ್ವಿಡ್ | 140,00,00,000.00 |
| 3 | ಭದ್ರತಾ ರಸೀದಿ (ಎ.ಆರ್.ಸಿ.ಐ.ಎಲ್ ಬಾಂಡ್ಸ್) | ಲಿಕ್ವಿಡ್ | 32,79,52,348.00 |
| | **ಒಟ್ಟು** | | **172,79,77,348.00** |

**1. ತುಮಕೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ. :–** ದಿನಾಂಕ 31-03-2026ಕ್ಕೆ ಬ್ಯಾಂಕು ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಷೇರು ರೂಪದಲ್ಲಿ ರೂ. 25,000.00ಗಳನ್ನು ತೊಡಗಿಸಿದ್ದು ಸಾಲಾಖೈರಿಗೆ ದೃಢೀಕರಣ ಪತ್ರ ಪಡೆದಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ ಸದರಿ ಮೊಬಲಗಿನ ಮೇಲೆ ಡಿವಿಡೆಂಡ್ ಬಂದಿರುವುದಿಲ್ಲ.

**2. ಮ್ಯೂಚುಯಲ್ ಫಂಡ್ಸ್:–** ದಿನಾಂಕ 31-03-2026ಕ್ಕೆ ಬ್ಯಾಂಕು ರೂ. 140,00,00,000.00ಗಳನ್ನು ಈ ಕೆಳಕಂಡ ಸಂಸ್ಥೆಗಳ ಮ್ಯೂಚುಯಲ್ ಫಂಡ್‌ನಲ್ಲಿ ಹಣ ತೊಡಗಿಸಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಸದರಿ ಹೂಡಿಕೆಗಳ ಮೇಲೆ ರೂ. 9,20,45,169.56ಗಳ ಆದಾಯ ಬಂದಿರುತ್ತದೆ.

| ಕ್ರ.ಸಂ | ವಿವರಗಳು | ಮೊಬಲಗು (ರೂ.ಗಳಲ್ಲಿ) |
|---|---|---|
| 1 | ಎಸ್ ಬಿ ಐ ಮ್ಯೂಚುಯಲ್ ಫಂಡ್ | 20,00,00,000.00 |
| 2 | ಬಂಧನ್ ಮ್ಯೂಚುಯಲ್ ಫಂಡ್ | 15,00,00,000.00 |
| 3 | ಇಡೆಲ್‌ವೈಸ್ ಮ್ಯೂಚುಯಲ್ ಫಂಡ್ | 35,00,00,000.00 |
| 4 | ಎಚ್ ಡಿ ಎಫ್ ಸಿ ಮ್ಯೂಚುಯಲ್ ಫಂಡ್ | 30,00,00,000.00 |
| 5 | ಐ ಸಿ ಐ ಸಿ ಐ ಮ್ಯೂಚುಯಲ್ ಫಂಡ್ | 20,00,00,000.00 |
| 6 | ಜೆ ಎಂ ಮ್ಯೂಚುಯಲ್ ಫಂಡ್ | 10,00,00,000.00 |
| 7 | ಟಾಟಾ ಮ್ಯೂಚುಯಲ್ ಫಂಡ್ | 10,00,00,000.00 |
| | **ಒಟ್ಟು** | **140,00,00,000.00** |

**3. ಭದ್ರತಾ ರಸೀದಿ(ಎ.ಆರ್.ಸಿ.ಐ.ಎಲ್ ಬಾಂಡ್ಸ್) :** 2022-23ನೇ ಸಾಲಿನಲ್ಲಿ ಆರ್.ಬಿ.ಐ ಸುತ್ತೋಲೆ ಸಂಖ್ಯೆ RBI/DOR/2021-22/86 DOR.STR.REC.51/21.04.048/2021-22 ದಿನಾಂಕ 24-09-2021ರ ಅನ್ವಯ, ಬ್ಯಾಂಕ್ ರೂ.114.94 ಕೋಟಿ ಮೊತ್ತದ ಸಾಲಗಳನ್ನು ಆರ್‌ಬಿಐ ಅನುಮೋದಿತ ಆಸ್ತಿ ಪುನರ್‌ರಚನಾ ಕಂಪನಿಯಾದ ಎಆರ್‌ಸಿಐಎಲ್ (ARCIL)ಗೆ ವರ್ಗಾಯಿಸಿದೆ. ಮಾರಾಟದ ಒಪ್ಪಂದದಂತೆ, ನಿಯೋಜಿತ (Assigned) ಸಾಲದ ಮೊತ್ತದ ಶೇ.80 ರಷ್ಟು ಅಂದರೆ ರೂ. 91.95 ಕೋಟಿಯಲ್ಲಿ ರೂ. 18.39 ಕೋಟಿಯನ್ನು ನಗದಾಗಿ ಸ್ವೀಕರಿಸಿ, ಉಳಿದ ರೂ. 73.56 ಕೋಟಿಗೆ ಭದ್ರತಾ ರಸೀದಿಗಳನ್ನು (Security Receipts) ಪಡೆದು, ಅವುಗಳನ್ನು ತನ್ನ ಆಸ್ತಿ–ಜವಾಬ್ದಾರಿ ತಖ್ತೆಯಲ್ಲಿ Non-SLR ಹೂಡಿಕೆಯಡಿ ತೋರಿಸಿ ಸಂಬಂಧಿತ ಸಾಲದ ಖಾತೆಗಳನ್ನು ಚುಕ್ತಾ ಮಾಡಲಾಗಿದೆ.

ಎಆರ್‌ಸಿಐಎಲ್(ARCIL)ಗೆ ವರ್ಗಾಯಿಸಲಾದ ಸ್ಥಿರಾಸ್ತಿಗಳ ಮಾರಾಟದಿಂದ ಜಮಾ ಆದ ಮೊತ್ತದ ವಿವರಗಳು :–

| **ಕ್ರ.ಸಂ** | **ವಿವರಗಳು** | **ಮೊಬಲಗು (ಕೋಟಿಗಳಲ್ಲಿ)** | |
|---|---|---|---|
| 1 | ನಿಯೋಜಿತ (Assigned) ಸಾಲದ 80% ಮೊತ್ತ | | **91.95** |
| 2 | ನಗದಾಗಿ ಸ್ವೀಕರಿಸಿದ ಮೊತ್ತ | | **18.39** |
| 3 | ಪ್ರಾರಂಭಿಕ ಭದ್ರತಾ ರಸೀದಿಗಳ (Security Receipts) ಮೊತ್ತ | | **73.56** |
| 4 | 2023-24ನೇ ಸಾಲಿನಲ್ಲಿ ವಸೂಲಿಯಾದ ಮೊತ್ತ | 17.44 | |
| 5 | 2024-25ನೇ ಸಾಲಿನಲ್ಲಿ ವಸೂಲಿಯಾದ ಮೊತ್ತ | 2.59 | |
| 6 | 2025-26ನೇ ಸಾಲಿನಲ್ಲಿ ವಸೂಲಿಯಾದ ಮೊತ್ತ | 20.73 | |
| | ವರ್ಷಾಂತ್ಯಕ್ಕೆ ಭದ್ರತಾ ರಸೀದಿಗಳ ಮೊತ್ತ (3-4-5-6) | | **32.80** |

Security Recipts DP Accountನ ದೃಢೀಕರಣವು ದಿನಾಂಕ 30-04-2026ಕ್ಕೆ ತಾಳೆ ಇರುತ್ತದೆ.

ದಿನಾಂಕ 31-03-2026ಕ್ಕೆ ಬ್ಯಾಂಕಿನ Non-SLR ಹೂಡಿಕೆಗಳು ರೂ. 17279.77 ಲಕ್ಷಗಳಿದ್ದು, ದಿನಾಂಕ 31-03-2025 ರ ಒಟ್ಟು ಠೇವಣಿ ರೂ. 141409.64 ಲಕ್ಷಗಳಿಗೆ ಹೋಲಿಸಿದರೆ ರೂ. 3279.52 ಲಕ್ಷ ಮೌಲ್ಯದ ಎ.ಆರ್.ಸಿ.ಐ.ಎಲ್ ಬಾಂಡ್ಸ್‌ನ್ನು ಹೊರತುಪಡಿಸಿ Non-SLR ಹೂಡಿಕೆಯ ಮಿತಿಯು 9.90% ರಷ್ಟಿದ್ದು, ಆರ್.ಬಿ.ಐನ ಮಾರ್ಗಸೂಚಿ UBD:PCB:BPD:CIR 4/16.20.000/2007-08 ದಿನಾಂಕ 18-09-2007ರ ಮತ್ತು RBI/DOR/2025-26/284 DOR.MRG.REC.No.203/00-00-11/ 2025-26 ದಿನಾಂಕ 28-11-2025ರ ರೀತ್ಯಾ ಗರಿಷ್ಠ ಶೇ. 10ರ ಮಿತಿಯೊಳಗಿರುತ್ತದೆ.

**ಕರೆ ಠೇವಣಿ:** ವರದಿ ಸಾಲಿನಲ್ಲಿ ಕರೆ ಠೇವಣಿಗಳ ಮೇಲೆ ರೂ. 3,51,56,758.00ಗಳ ಆದಾಯ ಬಂದಿರುತ್ತದೆ. ಒಟ್ಟು ಹೂಡಿಕೆಯ ಆದಾಯದ ಮೇಲೆ ಕರೆ ಠೇವಣಿ ಆದಾಯ ಶೇ. 6.21 ರಷ್ಟಿರುತ್ತದೆ. ಬ್ಯಾಂಕು ವರ್ಷಾಂತ್ಯಕ್ಕೆ ಕರೆ ಠೇವಣಿಯಲ್ಲಿ ಯಾವುದೇ ಹೂಡಿಕೆ ಮಾಡಿರುವುದಿಲ್ಲ.

**ಇತರೆ ಬ್ಯಾಂಕುಗಳಲ್ಲಿನ ಠೇವಣಿ :** ದಿನಾಂಕ 31-03-2026ಕ್ಕೆ ಬ್ಯಾಂಕು ಇತರೆ ಬ್ಯಾಂಕುಗಳಲ್ಲಿ ನಿಶ್ಚಿತ ಠೇವಣಿ ಇರಿಸಿದ್ದು ವಿವರ ಈ ಕೆಳಕಂಡಂತಿರುತ್ತದೆ:–

| **ಕ್ರ.ಸಂ** | **ಠೇವಣಿಗಳ ವಿವರ** | **ಮೊತ್ತ (ರೂ.ಗಳಲ್ಲಿ)** |
|---|---|---|
| 1 | ತುಮಕೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., | 63,00,00,000.00 |
| 2 | ಐ ಡಿ ಬಿ ಐ ಬ್ಯಾಂಕ್, ತುಮಕೂರು | 32,50,000.00 |
| 3 | ಡಿ ಸಿ ಬಿ, ತುಮಕೂರು | 10,00,00,000.00 |
| 4 | ಎಸ್ ವಿ ಸಿ ಬ್ಯಾಂಕ್, ತುಮಕೂರು | 27,00,00,000.00 |
| 5 | ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ತುಮಕೂರು | 65,01,00,000.00 |
| 6 | ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ತುಮಕೂರು | 20,01,00,000.00 |
| 7 | ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., | 5,00,00,000.00 |
| 8 | ಸಾರಸ್ವತ್ ಕೋ–ಆಪರೇಟಿವ್ ಬ್ಯಾಂಕ್ ಲಿ., | 2,00,00,000.00 |
| 9 | ಕಾಸ್ಮೊಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., | 20,00,00,000.00 |
| 10 | ಸಿ ಎಸ್ ಬಿ ಬ್ಯಾಂಕ್ ಲಿ., ತುಮಕೂರು | 10,00,00,000.00 |
| | **ಒಟ್ಟು** | **222,34,50,000.00** |

| | |
|---|---|
| | ವರದಿ ಸಾಲಿನಲ್ಲಿ ಠೇವಣಿಗಳ ಮೇಲೆ ರೂ. 13,10,12,035.00ಗಳ ಬಡ್ಡಿ ಬಂದಿರುತ್ತದೆ. ಆರ್.ಬಿ.ಐ ಸುತ್ತೋಲೆಯಂತೆ ಹಿಂದಿನ ಸಾಲಿನ ಅಂತ್ಯಕ್ಕೆ ಇದ್ದ ಒಟ್ಟು ಠೇವಣಿಗಳ ಮೊತ್ತಕ್ಕೆ ಶೇ. 20 ರಷ್ಟು ಠೇವಣಿಗಳಲ್ಲಿ ತೊಡಗಿಸಲು ಅವಕಾಶವಿದ್ದು ಬ್ಯಾಂಕಿನವರು ಇದರ ಮಿತಿ ಉಲ್ಲಂಘನೆಯಾಗದಂತೆ ನಿರ್ವಹಿಸಿರುತ್ತಾರೆ. |
| | **1) ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ಹೊಂದಿರುವ ಪದ್ಧತಿ ಅಧಿಕಾರ ಪ್ರತ್ಯಾಯೋಜನೆ ಇತ್ಯಾದಿ ಬಗ್ಗೆ ವರದಿಸುವುದು :**<br>ಹೂಡಿಕೆಗಳ ಖರೀದಿ ಮತ್ತು ಮಾರುವಿಕೆ ಬಗ್ಗೆ ನಿಯಮಾವಳಿಗಳನ್ನು ರಚಿಸಿಕೊಂಡಿರುತ್ತಾರೆ. ಸದರಿ ನಿಯಮಾವಳಿಗಳನ್ನು ಪರಿಷ್ಕರಿಸಿದ್ದು ದಿನಾಂಕ 21-07-2018ರ ಆಡಳಿತ ಮಂಡಳಿಯ ನಡಾವಳಿಕೆ ಸಂಖ್ಯೆ 8(26) ರಂತೆ ಅನುಮೋದನೆಗೊಂಡಿರುತ್ತದೆ ಹಾಗೂ ದಿನಾಂಕ 25-03-2026ರ ಕಾರ್ಯಕಾರಿ ಮಂಡಳಿಯಲ್ಲಿ ನಿಯಮಾವಳಿಗಳನ್ನು ಸಮೀಕ್ಷೆ ಮಾಡಲಾಗಿರುತ್ತದೆ. ಖಜಾನೆ ನಿರ್ವಹಣೆಯಲ್ಲಿ CEO ಅವರ ಪಾತ್ರ ಮತ್ತು ಜವಾಬ್ದಾರಿ ಬಗ್ಗೆ, ಸಂಸ್ಥೆಗಳಲ್ಲಿ ಹೂಡಬಹುದಾದ ಹೂಡಿಕೆ ಮಿತಿ, ಮಾರುಕಟ್ಟೆ ಕುಸಿತ ಸಂಭವದಲ್ಲಿ ಹಾಗೂ ನಷ್ಟದಲ್ಲಿ ಮಾರುವ ಅಧಿಕಾರ ವಿಕೇಂದ್ರೀಕರಣ ಹಾಗೂ ಪರಿಪಕ್ವ ಹೂಡಿಕೆಗಳ ಪ್ರತ್ಯಾಯೋಜನೆಯನ್ನು ನಿಯಮಾವಳಿಗಳಲ್ಲಿ ಅಳವಡಿಸಿಕೊಂಡಿರುತ್ತಾರೆ. |
| | **2) ಹೂಡಿಕೆಗಳ ಬಗ್ಗೆ ಹತೋಟಿ ಕಾಲಕಾಲಕ್ಕೆ ಅವುಗಳ ಪರಿಶೀಲನೆ/ಲೆಕ್ಕಪತ್ರದೊಂದಿಗೆ ಸಮನ್ವಯಗೊಳಿಸುವಿಕೆ ಬಗ್ಗೆ ವಿಮರ್ಶೆ :**<br>ಬ್ಯಾಂಕಿನ ಹೂಡಿಕೆಗಳ ಉಪಸಮಿತಿ ಸಭೆಗಳಲ್ಲಿ ಅಧ್ಯಕ್ಷರು ಮತ್ತು ಇತರೆ ಮೂರು ನಿರ್ದೇಶಕರು ಹಾಗೂ ಒಬ್ಬರು ವಿಶೇಷ ಆಹ್ವಾನಿತರು ಹೂಡಿಕೆಗಳ ಸ್ಥಿತಿಗತಿ ಪರಿಶೀಲಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಈ ಕೆಳಕಂಡ ವಿವರದಂತೆ ತೀರ್ಮಾನಗಳನ್ನು ದಾಖಲಿಸಿರುತ್ತಾರೆ.<br>1) ಎಸ್.ಎಲ್.ಆರ್ ನಿರ್ವಹಣೆ ಬಗ್ಗೆ.<br>2) ಹೂಡಿಕೆಗಳ ಮಾರುಕಟ್ಟೆ ಮೌಲ್ಯಗಳ ಏರಿಕೆಗಳ ಬಗ್ಗೆ ಪರಿಶೀಲನೆ.<br>3) ಹೂಡಿಕೆಗಳ ಉಪ ಸಮಿತಿಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಮುಂದಿನ ಆಡಳಿತ ಮಂಡಳಿ ಮತ್ತು ನಿರ್ವಹಣಾ ಮಂಡಳಿಯಲ್ಲಿ ಅನುಮೋದಿಸಲಾಗುತ್ತಿದೆ. |
| | **3) ಮೌಲ್ಯಮಾಪನ ಮಾದರಿ ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯ ಮಾಪನದಲ್ಲಿ ಆಗಿರುವ ಬದಲಾವಣೆ ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ ವಿಮರ್ಶೆ :**<br>ಮೌಲ್ಯಮಾಪನವನ್ನು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮೋದಿತ ಸಂಸ್ಥೆಯಾದ Financial Benchmarks India Pvt Ltd. (FBIL) ರವರ ಮೌಲ್ಯಮಾಪನದಂತೆ ನಿರ್ವಹಿಸಲಾಗಿರುತ್ತದೆ. ಮೌಲ್ಯಮಾಪನದಲ್ಲಿ FBILರವರು ನಿಗದಿಪಡಿಸಿರುವಂತೆ 14 ಭದ್ರತೆಗಳ ಬಾಬ್ತು ರೂ. 272.40 ಲಕ್ಷ ನಷ್ಟದಲ್ಲಿದ್ದು 36 ಭದ್ರತೆಗಳ ಬಾಬ್ತು ರೂ. 1047.24 ಲಕ್ಷ ಲಾಭದಲ್ಲಿದ್ದು ಒಟ್ಟಾರೆ ರೂ.774.84 ಲಕ್ಷ ಲಾಭದಲ್ಲಿರುತ್ತದೆ. ಸದರಿ ಸವಕಳಿ ನಿಧಿಯಲ್ಲಿ ರೂ. 227.13 ಲಕ್ಷಗಳಿದ್ದು ವರದಿ ಸಾಲಿನಲ್ಲಿ ಯಾವುದೇ ಸವಕಳಿ ಅವಕಾಶ ಕಲ್ಪಿಸಿಕೊಂಡಿರುವುದಿಲ್ಲ. |
| | **4) SGL/BRS ಪದ್ಧತಿ ಸಾಲಾಂತ್ಯಕ್ಕೆ ಇರುವ SGL/BRS ಮೇಲಿನ ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ :**<br>ದಿನಾಂಕ 12-02-2013ರಂದು RBI SGL ಖಾತೆಗೆ ಎಲ್ಲಾ ಭದ್ರತೆಗಳನ್ನು ವರ್ಗಾಯಿಸಿಕೊಂಡಿರುತ್ತಾರೆ. ದಿನಾಂಕ 31-03-2026 ಕ್ಕೆ ಈ ಖಾತೆಯ ದೃಢೀಕರಣ ಪಡೆದಿರುತ್ತಾರೆ. ಕಾಲಕಾಲಕ್ಕೆ ಈ ಬಗ್ಗೆ ಪರಿಶೀಲಿಸಲಾಗುತ್ತಿದೆ. ಹೂಡಿಕೆಗಳ ಬಗ್ಗೆ ರಿಜಿಸ್ಟರ್ ನಿರ್ವಹಿಸಲಾಗಿದೆ. |

| 23.ಎ | **ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ:** |
|---|---|

**1) ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ :**

ಬ್ಯಾಂಕಿನಲ್ಲಿ ನಿಧಿಗಳ ಉಪಯುಕ್ತತೆ ಮತ್ತು ಬಳಕೆಗಳಿಗೆ ಒಳನಿಯಮಗಳನ್ನು ರಚಿಸಿಕೊಂಡಿರುತ್ತಾರೆ. ದಿನಾಂಕ 31-03-2026ಕ್ಕೆ SLR ಹೂಡಿಕೆಗಳು ಆರ್.ಬಿ.ಐನ SGL ಖಾತೆಯಲ್ಲಿರುತ್ತದೆ. ಅವುಗಳ ನಿರ್ವಹಣೆ ಸಮರ್ಪಕವಾಗಿರುತ್ತದೆ. ಕಂಡಿಕೆ 23(ಅ)ರಲ್ಲಿ RBI SGL ಖಾತೆ ಬಗ್ಗೆ ವಿವರಿಸಿದೆ.

**2) SLR ಹೂಡಿಕೆಗಳನ್ನು AFS HTM ಮತ್ತು HFT ಗಳೆಂದು ಪ್ರತ್ಯೇಕಿಸಲಾಗಿದೆಯೇ?**

ಆರ್.ಬಿ.ಐನ ಸುತ್ತೋಲೆಯಂತೆ ಹೂಡಿಕೆಗಳನ್ನು ವರ್ಗೀಕರಿಸಲಾಗಿದ್ದು ವಿವರ ಈ ಕೆಳಕಂಡಂತಿರುತ್ತದೆ:-

| Sl # | Classification of Security | Type of Securities | Face Value (In Rs.) | Book Value (In Rs.) |
|---|---|---|---|---|
| 1 | ಪರಿಪಕ್ವವಾಗಲು **(HTM)** | ಕೇಂದ್ರ ಸರ್ಕಾರಿ ಭದ್ರತೆಗಳು | 139,69,10,000.00 | 134,53,77,004.00 |
| 2 | ಪರಿಪಕ್ವವಾಗಲು **(HTM)** | ರಾಜ್ಯ ಸರ್ಕಾರಿ ಭದ್ರತೆಗಳು | 154,87,00,000.00 | 154,91,57,661.00 |
| 3 | ಮಾರಾಟಕ್ಕೆ ಲಭ್ಯವಿರುವುದು (**AFS)** | ಕೇಂದ್ರ ಸರ್ಕಾರಿ ಭದ್ರತೆಗಳು | 75,00,00,000.00 | 74,86,75,000.00 |
| 4 | ಮಾರಾಟಕ್ಕೆ ಲಭ್ಯವಿರುವುದು **(AFS)** | ರಾಜ್ಯ ಸರ್ಕಾರಿ ಭದ್ರತೆಗಳು | 44,99,20,000.00 | 45,02,47,350.00 |
| | | **ಒಟ್ಟು** | **414,55,30,000.00** | **409,34,57,015.00** |

**3) ರೂ. 100 ಕೋಟಿ ಮೀರಿ ಠೇವಣಿ ಹೊಂದಿದ್ದಲ್ಲಿ ಬ್ಯಾಂಕು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿದೆಯೇ?**

ವರ್ಷಾಂತ್ಯಕ್ಕೆ ಬ್ಯಾಂಕಿನಲ್ಲಿ ರೂ. 2174.79 ಲಕ್ಷಗಳ ಹೂಡಿಕೆಗಳ ಏರಿಳಿತ ನಿಧಿಯನ್ನು ನಿರ್ವಹಿಸಲಾಗಿದೆ. ಬ್ಯಾಂಕಿನ ಪುಸ್ತಕದ ಪ್ರಕಾರ ದಿನಾಂಕ 31-03-2026ಕ್ಕೆ AFS ವರ್ಗದಲ್ಲಿ ರೂ. 11989.22 ಲಕ್ಷಗಳಿರುತ್ತದೆ. ಇದರ ಮೇಲೆ ಶೇ. 5 ರಂತೆ ರೂ. 599.46 ಲಕ್ಷಗಳ ಅವಕಾಶ ಕಲ್ಪಿಸಿಕೊಳ್ಳಬೇಕಾಗಿದ್ದು ಅವಕಾಶ ಹೆಚ್ಚಿಗೆ ಇರುತ್ತದೆ.

**ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೇ?**

ಹೂಡಿಕೆಗಳ ಅಂತಿಮ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆ ಇರುತ್ತದೆ.

**ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೇ?**

ನಿಧಿಗಳಲ್ಲಿನ ಹೂಡಿಕೆಗಳು ಸಹಕಾರ ಸಂಘಗಳ ಕಾಯ್ದೆ ಕಲಂ 58 ರಲ್ಲಿ ನಿಗದಿಪಡಿಸಿದ ವಿವಿಧ ಬ್ಯಾಂಕಿನ ಖಾತೆಗಳಲ್ಲಿ ಹಾಗೂ ಭಾರತೀಯ ರಿಸರ್ವ್ ಬ್ಯಾಂಕು ನೀಡಿರುವ ಸುತ್ತೋಲೆಗಳ ಅನುಸಾರ ನಿಯೋಗಿಸಲಾಗಿದೆ.

**ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆಯೇ?**

ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿರುತ್ತದೆ.

**ಸದರಿ ಹೂಡಿಕೆಗಳು ಮೇಲಿನ ಲಾಭಾಂಶ ಕಾಲಕಾಲಕ್ಕೆ ಬ್ಯಾಂಕಿಗೆ ಜಮಾ ಆಗಿದೆಯೇ?**

2025-26ನೇ ಸಾಲಿನಲ್ಲಿ ಸರ್ಕಾರಿ ಭದ್ರತೆಗಳ ಮೇಲೆ ಇತರೆ ಹೂಡಿಕೆಗಳ ಮೇಲೆ ಹಾಗೂ ಇತರೆ ಬ್ಯಾಂಕುಗಳಲ್ಲಿನ ಠೇವಣಿ ಮೇಲೆ ಬಂದಿರುವ ಒಟ್ಟು ಆದಾಯದ ವಿವರ ಈ ಕೆಳಕಂಡಂತಿರುತ್ತದೆ :-

| **ಕ್ರ.ಸಂ** | **ವಿವರಗಳು** | **(ರೂ. ಗಳಲ್ಲಿ)** | |
|---|---|---|---|
| | | **ಬಂದಿರುವ ಬಡ್ಡಿ** | **ಬರಬೇಕಾದ ಬಡ್ಡಿ** |
| 1 | ಸರ್ಕಾರಿ ಭದ್ರತೆಗಳು (SLR) | 23,64,83,183.00 | 7,20,15,306.00 |

| | | | |
|---|---|---|---|
| 2 | ಮ್ಯೂಚ್ಯುಯಲ್ ಫಂಡ್ (Liquid) | 9,20,45,169.56 | 0.00 |
| 3 | ಕರೆ ಠೇವಣಿ ಮೇಲೆ | 3,51,56,758.00 | 0.00 |
| 4 | ಠೇವಣಿಗಳ ಮೇಲೆ | 5,14,19,617.00 | 7,95,92,418.00 |
| 5 | ಸಿ.ಸಿ.ಐ.ಎಲ್ ಠೇವಣಿ | 46,586.00 | 0.00 |
| | **ಒಟ್ಟು** | **41,51,51,313.56** | **15,16,07,724.00** |

ವರದಿ ವರ್ಷದಲ್ಲಿ ಹೂಡಿಕೆಗಳಿಂದ ಒಟ್ಟಾರೆ ರೂ. 56,67,59,037.56ಗಳ ಆದಾಯ ಬಂದಿರುತ್ತದೆ. ಆರ್ ಬಿ ಐ ಸುತ್ತೋಲೆಯಂತೆ ವರ್ಷಾಂತ್ಯದ ಲಾಭ–ನಷ್ಟ ತ:ಖ್ತೆಯಲ್ಲಿ HTM ಸ್ವರೂಪದ ಸರ್ಕಾರಿ ಭದ್ರತೆಗಳ ಮೇಲೆ amortise ಮಾಡಿರುವ ಪ್ರೀಮಿಯಂ ಮೊತ್ತ ರೂ. 3,42,812.00 ಗಳನ್ನು ಸರ್ಕಾರಿ ಭದ್ರತೆಗಳ ಮೇಲೆ ಬಂದ ಬಡ್ಡಿಯಿಂದ ಕಡಿಮೆ ಮಾಡಿ ತೋರಿಸಲಾಗಿರುತ್ತದೆ.

**ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ :**

ಹೂಡಿಕೆಗಳ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸಿರುತ್ತಾರೆ. ಹೂಡಿಕೆಗಳ ನಿರ್ವಹಣೆ ಬಗ್ಗೆ ಒಳನಿಯಮಗಳನ್ನು ರಚಿಸಿಕೊಂಡಿರುತ್ತಾರೆ ಹಾಗೂ ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿಗಳನ್ನೂ ಮೇಲ್ಕಂಡ ಕಂಡಿಕೆಗಳಲ್ಲಿ ವಿವರಿಸಲಾಗಿದೆ. ವರ್ಷಾಂತ್ಯಕ್ಕೆ ತೊಡಗಿಸಲಾದ SLR ಹೂಡಿಕೆಗಳಾದ ರಾಜ್ಯ ಮತ್ತು ಕೇಂದ್ರ ಭದ್ರತಾ ಪತ್ರಗಳಿಗೆ ಹಾಗೂ ಮ್ಯೂಚ್ಯುಯಲ್ ಫಂಡ್ಸ್‌ನಲ್ಲಿ ತೊಡಗಿಸಿರುವ ಬಾಬ್ತುಗಳಿಗೂ ಸಂಬಂಧಪಟ್ಟ ದೃಢೀಕರಣಗಳು ಹಾಜರಿದ್ದು ತಾಳೆಯಿರುತ್ತದೆ.

## (24) ಸದಸ್ಯರ ಸಾಲ ಮತ್ತು ಮುಂಗಡಗಳು :–

| | |
|---|---|
| ಎ | **ಸಾಲಗಳ ಮೌಲ್ಯಾಂಕನ (Credit Appraisal):**<br>**ಉಪ ನಿಯಮಗಳ ಹಾಗೂ ಸಾಲದ ನಿಯಮಾವಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ ಸಾಲಗಳ ಮಿತಿ ಸಾಲಗಳ ಅವಧಿ ಒಬ್ಬ ಸದಸ್ಯನು ಎಲ್ಲಾ ರೀತಿಯ ಪಡೆಯಬಹುದಾದ ಒಟ್ಟು ಸಾಲದ ಮಿತಿಯ ಬಗ್ಗೆ ಹಾಗೂ ಇಂತಹ ರಿಜಿಸ್ಟರ್ ಬ್ಯಾಂಕಿನಲ್ಲಿ ಬರೆದಿಟ್ಟಿರುವುದರ ಬಗ್ಗೆ ವಿಮರ್ಶೆ:**<br><br>ಬ್ಯಾಂಕಿನ ಉಪನಿಯಮ 61 ಹಾಗೂ ಆರ್.ಬಿ.ಐ ನವರು ಆಗಿಂದಾಗ್ಗೆ ಹೊರಡಿಸುವ ನಿರ್ದೇಶನಗಳಿಗನುಸಾರವಾಗಿ ಆಡಳಿತ ಮಂಡಳಿಯವರು ಅಂಗೀಕರಿಸಿದ ಭದ್ರತೆಗಳ ಆಧಾರಗಳನ್ನು ಪಡೆದು ಸದಸ್ಯರಿಗೆ ಸಾಲ ಮತ್ತು ಮುಂಗಡಗಳನ್ನು ಮಂಜೂರು ಮಾಡಬಹುದಾಗಿರುತ್ತದೆ.<br><br>ಬ್ಯಾಂಕು ಆರ್‌ಬಿಐನ ಪತ್ರ ಸಂಖ್ಯೆ BLR.DOS.SSMS.No.S1724/09.01.189/2024-2025 ದಿನಾಂಕ 04-02-2025ರಂತೆ, ದಿನಾಂಕ 01-04-2025 ರಿಂದ 31-07-2025 ರವರೆಗೆ ಪ್ರತ್ಯೇಕ ಸದಸ್ಯರಿಗೆ ರೂ. 20.58 ಕೋಟಿ ಮತ್ತು ಸಮೂಹಗಳಿಗೆ ಸಾಲಗಳ ಮಿತಿಯನ್ನು ರೂ. 34.30 ಕೋಟಿಗಳಂತೆ ಹಾಗೂ ದಿನಾಂಕ 01-08-2025 ರಿಂದ 17-03-2026 ರವರೆಗೆ ಪ್ರತ್ಯೇಕ ಸದಸ್ಯರಿಗೆ ರೂ. 21.56 ಕೋಟಿ ಮತ್ತು ಸಮೂಹಗಳಿಗೆ ಸಾಲಗಳ ಮಿತಿಯನ್ನು ರೂ. 35.94 ಕೋಟಿಗಳಂತೆ ನಿಗದಿ ಪಡಿಸಿಕೊಂಡಿರುತ್ತಾರೆ.<br><br>ಆರ್‌ಬಿಐನ ಪತ್ರ ಸಂಖ್ಯೆ BLR.DOS.SSMS.No.S291/12-08-189/2025-2026 ದಿನಾಂಕ 25-02-2026 ರಂತೆ ಬ್ಯಾಂಕು SAF ನಿರ್ಭಂದದಿಂದ ತೆರವುಗೊಂಡಿದ್ದರಿಂದ ದಿನಾಂಕ 18-03-2026 ರಿಂದ |

| | |
|---|---|
| | ತಹಲ್ ವರೆವಿಗೂ ಪ್ರತ್ಯೇಕ ಸದಸ್ಯರಿಗೆ ರೂ. 28.75 ಕೋಟಿ ಮತ್ತು ಸಮೂಹಗಳಿಗೆ ಸಾಲಗಳ ಮಿತಿಯನ್ನು ರೂ. 47.92 ಕೋಟಿಗಳಂತೆ ಸಾಲಗಳ ಮಿತಿಯನ್ನು ನಿಗದಿ ಪಡಿಸಿಕೊಂಡಿರುತ್ತಾರೆ.<br><br>ಸಾಲದ ಅವಧಿ ಬೈಲಾ ಸಂಖ್ಯೆ 66 ರಂತೆ ಅಲ್ಪಾವಧಿ ಸಾಲಗಳನ್ನು 15 ತಿಂಗಳವರೆಗೂ ಮಧ್ಯಮಾವಧಿ ಸಾಲಗಳನ್ನು 15 ತಿಂಗಳಿಗಿಂತ ಮೇಲ್ಪಟ್ಟು 5 ವರ್ಷಗಳವರೆಗೂ, ದೀರ್ಘಾವಧಿ ಸಾಲಗಳನ್ನು 5 ವರ್ಷಗಳಿಗೂ ಹೆಚ್ಚಿನ ಅವಧಿಗೆ ಮಂಜೂರು ಮಾಡಬಹುದಾಗಿರುತ್ತದೆ. |
| ಬಿ | <u>ಸಾಲ ಮಂಜೂರಾತಿ/ ವಿತರಣೆ:]</u><br><br>**ಅಧಿಕಾರ ಪ್ರತ್ಯಾಯೋಜನೆ/ಪ್ರಾಧಿಕಾರದ ವಿವಿಧ ಹಂತಗಳು (authority at various levels) ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ?**<br>ಬ್ಯಾಂಕಿನ ಸಾಲ ಮಂಜೂರಾತಿಯ ಎಲ್ಲಾ ಹಕ್ಕುಗಳನ್ನು ಆಡಳಿತ ಮಂಡಳಿ ಹಾಗೂ ಸಾಲದ ಉಪ–ಸಮಿತಿ ಹೊಂದಿರುತ್ತದೆ. ಎಲ್ಲಾ ಠೇವಣಿ ಆಧಾರಿತ ಸಾಲ, ರೂ. 10.00 ಲಕ್ಷಗಳವರೆಗಿನ ಚಿನ್ನಾಭರಣಗಳ ಆಧಾರದ ಮೇಲೆ ಮೀರೆಳೆತ ಸಾಲ ಮತ್ತು ಚಿನ್ನಾಭರಣ ಸಾಲಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಆಯಾ ಶಾಖಾ ವ್ಯವಸ್ಥಾಪಕರು ಹೊಂದಿರುತ್ತಾರೆ. ಮುಖ್ಯ ಕಾರ್ಯನಿರ್ವಾಹಕರು ರೂ. 10.00 ಲಕ್ಷ ಮೇಲ್ಪಟ್ಟ ಚಿನ್ನಾಭರಣಗಳ ಆಧಾರದ ಮೇಲೆ ಮೀರೆಳೆತ ಸಾಲ ಮತ್ತು ಚಿನ್ನಾಭರಣ ಸಾಲಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಶಾಖಾ ವ್ಯವಸ್ಥಾಪಕರು ಮತ್ತು ಮುಖ್ಯ ಕಾರ್ಯನಿರ್ವಾಹಕರು ನೀಡಿದ ಸಾಲಗಳಿಗೆ ನಿರ್ದೇಶಕ ಮಂಡಳಿಯಲ್ಲಿ ಘಟನೋತ್ತರ ಅನುಮತಿ ಪಡೆಯಲಾಗುತ್ತಿದೆ. ಸಾಲ ಮಂಜೂರಾತಿಯ ನಿಬಂಧನೆಗಳನ್ನು ಮತ್ತು ದಾಖಲೆಗಳನ್ನು ಪಡೆದ ನಂತರ ಸಾಲ ಬಿಡುಗಡೆ ಮಾಡುವ ಕ್ರಮವಿರಿಸಿರುತ್ತಾರೆ.<br><br>ಮುಖ್ಯ ಕಾರ್ಯನಿರ್ವಾಹಕರಿಗೆ ಸಿಬ್ಬಂದಿ ಸಾಲಗಳಾದ ವಾಹನ ಸಾಲಗಳು, ಗೃಹಬಳಕೆ ವಸ್ತುಗಳು ಹಾಗೂ ಗಣಕಯಂತ್ರಗಳನ್ನು ಖರೀದಿಸಲು ರೂ. 2.00 ಲಕ್ಷದವರೆಗೆ ಸಾಲ ನೀಡಲು ಹಾಗೂ ರೂ. 10.00 ಲಕ್ಷದವರೆಗೆ ವೇತನಾಧಾರ ಸಾಲ ಹಾಗೂ ಗ್ರಾ ಚ್ಯುಟಿ ಮೊತ್ತದ ಮೇಲೆ ಸಿಬ್ಬಂದಿ OD ಸೌಲಭ್ಯ ನೀಡಲು ಅಧಿಕಾರ ನೀಡಿರುತ್ತದೆ. |
| ಸಿ | <u>**ದಾಖಲೀಕರಣ ಸಂಗ್ರಹಣೆ (Documentation):**</u><br>**ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿಕೊಳ್ಳುವುದು ದಾಖಲೆಗಳ ಸ್ವರೂಪ ಈ ಸಂಬಂಧ ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳು. ಜಂಟಿ/ ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ. (documentation of consortium advances):**<br><br>ಸಾಲ ಮಂಜೂರಾತಿ ಆದೇಶಗಳಲ್ಲಿರುವ ನಿಬಂಧನೆಗಳಂತೆ ಅವಶ್ಯಕವಿರುವ ದಾಖಲಾತಿಗಳನ್ನು ಪಡೆದು MODTD ನೊಂದಣಿ ಮಾಡಿಸಿದ ನಂತರ ಸಾಲ ವಿತರಿಸಲಾಗುತ್ತಿರುತ್ತದೆ.<br><br>ಬ್ಯಾಂಕು ವಿವಿಧ ರೀತಿಯ ಸಾಲಗಳಿಗೆ ಯಾವ ಯಾವ ದಾಖಲೆಗಳನ್ನು ಪಡೆದುಕೊಳ್ಳಬೇಕೆಂಬುದಕ್ಕೆ ಕ್ರೆಡಿಟ್ ಪಾಲಿಸಿ ಮಾಡಿಕೊಂಡು ಸಾಲದ ದಾಖಲಾತಿ ಕೈಪಿಡಿಯನ್ನು ಪರಿಷ್ಕರಿಸಿಕೊಂಡು ಅದರಂತೆ ದಾಖಲೆಗಳನ್ನು ಪಡೆದಿರುತ್ತಾರೆ.<br><br>ಸಾಲ ವಿತರಣೆಗೆ ಮುಂಚೆ ಒತ್ತೆ ಇಡಬೇಕಾದ ಆಸ್ತಿಯ ಸತ್ಯತೆ ಬಗ್ಗೆ Search Report ಅಲ್ಲದೆ ಕಾನೂನು ತಜ್ಞರ ಅಭಿಪ್ರಾಯ ಪಡೆಯುವ ಕ್ರಮ ಅನುಸರಿಸಿರುತ್ತಾರೆ.<br><br>ಲೆಕ್ಕ ಪರಿಶೋಧನಾ ವೇಳೆಯಲ್ಲಿ ಕೈಗೊಂಡ ದೊಡ್ಡ ಸಾಲಗಳ ಪರಿಕ್ಷಾರ್ಥ ಪರಿಶೀಲನೆಯ ಆಧಾರದ ಮೇಲೆ ಗುರುತಿಸಿದ ಪ್ರಮುಖ ನ್ಯೂನತೆಗಳ ಸಾರಾಂಶ. |

| | |
|---|---|
| | ➢ ಕೆಲವೊಂದು ಪ್ರಕರಣಗಳಲ್ಲಿ (ರೂ. 10 ಲಕ್ಷಕ್ಕಿಂತ ಕಡಿಮೆ) ಅರ್ಜಿದಾರರಿಂದ ಆದಾಯ ತೆರಿಗೆ ವರದಿಗಳನ್ನು ಪಡೆಯದೆ ಅರ್ಜಿದಾರನ ಸ್ವಯಂ ಘೋಷಿತ ಆದಾಯವನ್ನೇ ನೈಜ ಆದಾಯವೆಂದು ಪರಿಗಣಿಸಿ ಅರ್ಜಿದಾರನ ಸಾಲ ಮರುಪಾವತಿ ಸಾಮರ್ಥ್ಯವನ್ನು ನಿರ್ಧರಿಸಿ ಭದ್ರತೆಯ ಮಾರುಕಟ್ಟೆ ಬೆಲೆಯನ್ನೇ ಸಾಲ ಮೌಲ್ಯ ನಿರ್ಧರಣೆಯ ಏಕೈಕ ಮಾನದಂಡವಾಗಿ ಪರಿಗಣಿಸಿ ಸಾಲವನ್ನು ಮಂಜೂರು ಮಾಡುವ ಪದ್ಧತಿ ಅನುಸರಿಸುತ್ತಿರುತ್ತಾರೆ. |
| **ಡಿ** | **<u>ದಾಖಲೆಗಳ ನವೀಕರಣ/ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ/ ಮೇಲ್ವಿಚಾರಣೆ:</u>** |
| **1** | **ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ:**<br>ಬ್ಯಾಂಕು ಸಾಲ ನೀಡಿದ ನಂತರ ಸಾಲದ ಹಣ ಉಪಯೋಗವಾದ ಬಗ್ಗೆ ಸಾಲದ ಮೇಲ್ವಿಚಾರಣೆ ಮಾಡುತ್ತಿದ್ದು ವ್ಯವಸ್ಥಾಪಕರು ಹಣ ಸದುಪಯೋಗದ ದೃಢೀಕರಣ ನೀಡುವ ಪದ್ಧತಿ ಇದ್ದು ಮತ್ತು ಸಾಲಗಾರರಿಂದಲೂ ದೃಢೀಕರಣ ಪಡೆಯುತ್ತಿರುತ್ತಾರೆ.<br><br>ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲಾತಿಗಳನ್ನು ಪಡೆಯುವ ನಿಟ್ಟಿನಲ್ಲಿ ಆಗಿರುವ ಉಲ್ಲಂಘನೆ ಗಮನಿಸಿದ ದೋಷಗಳು ಹಾಗೂ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ವಿವರಗಳನ್ನು ಪ್ರತ್ಯೇಕ ಶಿರೋನಾಮೆಯಡಿ ನೀಡಲಾಗಿದೆ.<br>ಸಾಲ ವಿತರಣೆ ನಂತರ ಸೂಕ್ತ ಮೇಲುಸ್ತುವಾರಿಗೆ (Pre-Sanction Appraisal and Post Sanction Supervision) ಸಂಬಂಧಿಸಿದ ಮಾನದಂಡಗಳನ್ನು ರಚಿಸಿಕೊಂಡು ಅದರಂತೆ ಬ್ಯಾಂಕು ಕಾರ್ಯನಿರ್ವಹಿಸಿರುತ್ತದೆ. |
| **2** | **ಸಾಲಗಾರರಿಂದ ದಾಸ್ತಾನಿನ ಬಗ್ಗೆ ನಿಯಮಿತ ಮಾಹಿತಿ ಅವರ ಆಸ್ತಿ–ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿಯಾಗುತ್ತಿರುವ ಬಗ್ಗೆ :**<br>ಕೆಲವೊಂದು ಪ್ರಕರಣಗಳಲ್ಲಿ ಸಾಲಗಾರರಿಂದ ಸದರಿಯವರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಆಸ್ತಿ ಜವಾಬ್ದಾರಿ ತಃಖ್ತೆಗಳನ್ನು ಪ್ರತಿ ವರ್ಷ ಪಡೆದು ಪರಿಶೀಲಿಸುವ ಪದ್ಧತಿ ಅನುಸರಿಸಿರುವುದಿಲ್ಲ. ಎಲ್ಲಾ ಸಾಲದ ಖಾತೆಗಳಲ್ಲಿ ಸಾಲಗಾರರಿಂದ ಆರ್ಥಿಕ ತಃಖ್ತೆಗಳನ್ನು ಪಡೆದು ಪರಿಶೀಲಿಸಿಕೊಳ್ಳುವ ಕ್ರಮವಿಡುವುದು ಸೂಕ್ತವಾಗಿರುತ್ತದೆ. ಎಲ್ಲಾ ಮೀರೆಳೆತ ಸಾಲಗಳನ್ನು ಆಸ್ತಿ ಆಧಾರದ ಮೇಲೆ ನೀಡಿರುವುದರಿಂದ ದಾಸ್ತಾನಿನ ತಃಖ್ತೆ ಪಡೆಯುವ ಪದ್ಧತಿ ಇರುವುದಿಲ್ಲ. ಆದರೆ ಆರ್.ಬಿ.ಐ ಪರಿವೀಕ್ಷಣಾ ವರದಿಯಲ್ಲಿ ತಿಳಿಸಿರುವಂತೆ ದಾಸ್ತಾನು ತಃಖ್ತೆಗಳನ್ನು ಪಡೆಯಲು ಕ್ರಮವಿಡುವುದು.<br><br>**ಸಮಾಧಾನ :– ಈಗಾಗಲೇ ಶಾಖೆಗಳಿಗೆ ದಾಸ್ತಾನು ಮತ್ತು ಆಸ್ತಿ ಜವಾಬ್ದಾರಿ ತ:ಖ್ತೆಯನ್ನು ಪಡೆಯಲು ಸೂಚಿಸಿದ್ದು, ಕ್ರಮವಿಡಲಾಗುವುದು.** |
| **3** | **ರೂ. 10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆಯಾದ ಲೆಕ್ಕಗಳನ್ನು (Audited Accounts) ಪಡೆದಿರುವ ಬಗ್ಗೆ:**<br>Section 44AD ರ ಅಡಿಯಲ್ಲಿ ಲೆಕ್ಕ ಪರಿಶೋಧಕರಿಂದ ಆರ್ಥಿಕ ತ:ಖ್ತೆಗಳನ್ನು ಪಡೆಯಲು ವಿನಾಯಿತಿ ಇದ್ದು, ಅಂತಹ ಖಾತೆಗಳನ್ನು ಹೊರತುಪಡಿಸಿ ಇತರೆ ಸಾಲ ನೀಡುವ ಸಂದರ್ಭಗಳಲ್ಲಿ ಲೆಕ್ಕಪರಿಶೋಧನೆಯಾದ ಆರ್ಥಿಕ ತ:ಖ್ತೆಗಳನ್ನು ಪಡೆಯಲಾಗುತ್ತಿದೆ. |
| **4** | **ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (Follow-up) ಮತ್ತು ಸಂರಕ್ಷಣೆ ಬಗ್ಗೆ :**<br>ಬ್ಯಾಂಕು ಸಾಲ ನೀತಿಯನ್ನು ರೂಪಿಸಿದ್ದು ಬ್ಯಾಂಕಿನ ಉಪನಿಯಮ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಗಳನ್ವಯ ಅಗತ್ಯ ಮಾಹಿತಿ ದಾಖಲೆ ಪಡೆದು ಸಾಲಗಳನ್ನು ನೀಡಲಾಗುತ್ತಿರುತ್ತದೆ. |

| | |
|---|---|
| 5 | **ದಾಸ್ತಾನು ಉಪಕರಣಗಳು ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿಯ ಬಗ್ಗೆ:**<br>ಸಾಲಗಳನ್ನು ವಿತರಿಸುವ ಮೊದಲು ಹಾಗೂ ವಿತರಿಸಿದ ನಂತರ ಬ್ಯಾಂಕಿಗೆ ಕೊಟ್ಟ ಭದ್ರತೆಗಳನ್ನು ಭೌತಿಕ ಪರಿಶೀಲನೆ ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ. ಸಾಲ ನೀಡಿದ ನಂತರ ಸಾಲ ಪಡೆದ ಸ್ಥಿರ ಸ್ವತ್ತುಗಳನ್ನು ಕಾಲಕಾಲಕ್ಕೆ ಪರಿಶೀಲಿಸುವ ಪದ್ಧತಿ ಅಳವಡಿಸಿಕೊಂಡಿರುತ್ತಾರೆ ಹಾಗೂ ಸಾಲದ ಉಪಯುಕ್ತತೆ ಬಗ್ಗೆ ವರದಿ ಪಡೆಯುತ್ತಿರುತ್ತಾರೆ. |
| 6 | **ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ:**<br>ಸಾಲ ಮಂಜೂರಾತಿ ಪೂರ್ವದಲ್ಲಿ ಮತ್ತು ಹೆಚ್ಚುವರಿ ಸಾಲ ಮಂಜೂರಾತಿ ಪೂರ್ವದಲ್ಲಿ ಸಾಲದ ಉಪ ಸಮಿತಿ ಸದಸ್ಯರು ಸಾಲದ ಘಟಕಗಳಿಗೆ ಭೇಟಿ ನೀಡಿ ವರದಿ ನೀಡುವ ಪದ್ಧತಿ ಇರುತ್ತದೆ. ಸಾಲ ವಿತರಿಸಿದ ನಂತರ ಶಾಖೆಗಳಲ್ಲಿ ಕಾಲಕಾಲಕ್ಕೆ ಪರಿಶೀಲಿನೆ ನೆಡೆಸಿ ಕಡತಗಳಲ್ಲಿ ನಿರ್ವಹಿಸುವುದು ಕಂಡುಬಂದಿರುತ್ತದೆ. |
| 7 | **ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಗಳನ್ವಯ ಸಾಲಗಳ ಸ್ವಾಸ್ಥ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ (Allotment Health Code of RBI) :**<br>ಅನ್ವಯಿಸುವುದಿಲ್ಲ. ಹೆಲ್ತ್ ಕೋಡ್ ಪದ್ಧತಿ ಜಾರಿಯಲ್ಲಿರುವುದಿಲ್ಲ. |
| 8 | **ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳಗೊಂಡಂತೆ ಸಾಲಗಳ ವಿಮರ್ಶೆ ಸಾಲದ ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣ ಇತ್ಯಾದಿ:**<br>ಸಾಲದ ಮಿತಿಗಳ ವಿಸ್ತರಣೆ ಸಂದರ್ಭಗಳಲ್ಲಿ ಹೆಚ್ಚುವರಿ ಮಿತಿಗಳಿಗೆ ಅವಶ್ಯಕವಿರುವಂತೆ ಹೆಚ್ಚಿನ ಭದ್ರತೆ ಮತ್ತು ಅವಶ್ಯಕ ದಾಖಲೆಗಳನ್ನು ಪಡೆಯಲಾಗುತ್ತಿದೆ. ಆರ್.ಬಿ.ಐ ಮಾರ್ಗಸೂಚಿಯನ್ವಯ ಸಾಲಗಳನ್ನು ಉತ್ಪಾದಕ ಹಾಗೂ ಅನುತ್ಪಾದಕ ಆಸ್ತಿಗಳೆಂದು ವರ್ಗೀಕರಿಸಿರುತ್ತಾರೆ. |
| 9 | **ಸೌಲಭ್ಯಗಳ ನವೀಕರಣ:**<br>ಬ್ಯಾಂಕಿನಲ್ಲಿ ಮೀರೆಳೆತ ಸಾಲಗಳನ್ನು ನವೀಕರಿಸುತ್ತಿದ್ದು ಕೆಲವೊಂದು ಪ್ರಕರಣಗಳಲ್ಲಿ ಕಡಿಮೆ ವ್ಯವಹಾರ ನೆಡೆಸಿದ್ದರೂ ಸಹ ನವೀಕರಿಸಿರುವುದು ಕಂಡುಬಂದಿರುತ್ತದೆ. |
| 10 | **ಕೈಗಾರಿಕೆಗಳನ್ವಯ ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ:**<br>ಬ್ಯಾಂಕಿನಿಂದ ಕೈಗಾರಿಕಾ ಸಾಲಗಳನ್ನು ವಿರಳವಾಗಿ ನೀಡಿರುತ್ತಾರೆ. ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲದ ಸಮಗ್ರ ಮೇಲ್ವಿಚಾರಣೆ ನೆಡೆಸುವುದು ಹಾಗೂ ಯಂತ್ರೋಪಕರಣಗಳ ಸುಸ್ಥಿತಿಯ ಬಗ್ಗೆ ಪರಿಶೀಲಿಸಿ ವರದಿಗಳನ್ನು ಶಾಖಾ ವ್ಯವಸ್ಥಾಪಕರು ತೀವ್ರತೆಯಿಂದ ನೀಡುವುದು ಸೂಕ್ತ. |
| ಇ | **<u>ಕರಡು ಮತ್ತು ಸಂಶಯಾಸ್ಪದ ಸಾಲಗಳು:</u>** |
| 1 | **ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ:**<br>ವರದಿ ಸಾಲಿನಲ್ಲಿ ಗ್ರಾಹಕರ ಗುರುತಿನ ಸಂಖ್ಯೆಯ ಆಧಾರದ ಮೇಲೆ ಕರಡು ಮತ್ತು ಸಂಶಯಾಸ್ಪದ ಸಾಲಗಳ ವರ್ಗೀಕರಣ ಮಾಡುವ ವ್ಯವಸ್ಥೆಯನ್ನು ತಂತ್ರಾಂಶದಲ್ಲಿ ಅಳವಡಿಸಿಕೊಂಡಿರುತ್ತಾರೆ ಹಾಗೂ ಕರಡು ಸಾಲಗಳ ವಿವರಗಳನ್ನು ಶಾಖೆಗಳಿಂದ ಕೂಡ ಪಡೆಯಲಾಗುತ್ತಿದೆ.<br><br>ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಬ್ಯಾಂಕು ಪರಿಣಾಮಕಾರಿ ಪದ್ಧತಿಯನ್ನು ಅಳವಡಿಸಿಕೊಂಡಿರುತ್ತದೆ ಮತ್ತು ಅವಕಾಶ ಕಲ್ಪಸಿಕೊಳ್ಳುವಲ್ಲಿ ಯಾವುದೇ ಕೊರತೆ ಇರುವುದಿಲ್ಲ. |

| ಕ್ರ.ಸಂ | ವಿವರಗಳು | (ರೂ. ಲಕ್ಷಗಳಲ್ಲಿ) |
|---|---|---|
| 1 | ಸಾಲು ಪ್ರಾರಂಭಕ್ಕೆ ಕರಡು ಸಾಲದ ನಿಧಿ | 19053.28 |
| 2 | 2025-26 ಸಾಲಿನಲ್ಲಿ ಸೇರ್ಪಡೆ ಲಾಭ ನಷ್ಟ ತಃಖ್ತೆಯಿಂದ | 500.00 |
| | **ಒಟ್ಟು** | **19553.28** |
| 3 | ವರದಿ ಸಾಲಿನಲ್ಲಿ ಹಿಂಪಡೆದ ಮೊತ್ತ | 0.00 |
| **4** | **31-03-2026 ಕ್ಕೆ** ಕರಡು ಸಾಲದ ನಿಧಿಯ ಒಟ್ಟು ಮೊತ್ತ | **19553.28** |

**2. ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ:**

ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆಯನ್ವಯ ಅನುತ್ಪಾದಕ ಆಸ್ತಿಗಳನ್ನು ಸೂಕ್ತವಾಗಿ ಗುರುತಿಸಿಕೊಳ್ಳಲಾಗಿದೆ. ಆರ್.ಬಿ.ಐ ಸುತ್ತೋಲೆ ಸಂಖ್ಯೆ RBI/DOR/2025-26/286 DOR.STR.REC.205./21.04.048/2025-26 ದಿನಾಂಕ 28-11-2025 ರಂತೆ ಕರಡು ಮತ್ತು ಸಂಶಯಾಸ್ಪದ ಸಾಲಗಳನ್ನು ಗುರುತಿಸಲಾಗುತ್ತಿದೆ. ದಿನಾಂಕ 31-03-2025ಕ್ಕೆ ರೂ. 21631.48 ಲಕ್ಷ ಎನ್.ಪಿ.ಎ ಸಾಲಗಳಿದ್ದು ದಿನಾಂಕ 31-03-2026ಕ್ಕೆ ರೂ. 20143.59 ಲಕ್ಷ ಎನ್.ಪಿ.ಎ ಸಾಲವಿದ್ದು, ಒಟ್ಟು ಸಾಲಕ್ಕೆ ಶೇ. 17.17 ರಷ್ಟಿರುತ್ತದೆ. ವರದಿ ವರ್ಷದಲ್ಲಿ ನಿವ್ವಳ ಎನ್.ಪಿ.ಎ ಪ್ರಮಾಣ ಶೇ. 0.60 ರಷ್ಟಿದ್ದು, ಇದಕ್ಕೆ ಪ್ರತ್ಯೇಕ ತಃಖ್ತೆ ಲಗತ್ತಿಸಿರುತ್ತದೆ. ಬ್ಯಾಂಕು ವರ್ಷಾಂತ್ಯಕ್ಕೆ ರೂ. 19553.28 ಲಕ್ಷಗಳ ಕರಡು ಸಾಲದ ನಿಧಿಯನ್ನು ಹೊಂದಿರುತ್ತದೆ.

ಬ್ಯಾಂಕಿನಲ್ಲಿ ಶಾಖಾವಾರು ಶೇಕಡವಾರು ಎನ್.ಪಿ.ಎ ಬಾಬ್ತುಗಳನ್ನು ಗುರುತಿಸಿದ್ದು 28 ಶಾಖೆಗಳ ಪೈಕಿ 5 ಶಾಖೆಗಳಲ್ಲಿ NPA ಪ್ರಮಾಣ ಶೂನ್ಯವಿರುತ್ತದೆ. ಹೆಚ್ಚಿಗೆ NPA ಹೊಂದಿರುವ ಶಾಖೆಗಳಲ್ಲಿ ವಸೂಲಾತಿಗೆ ವಿಶೇಷ ಕ್ರಮಗಳನ್ನು ತೆಗೆದುಕೊಂಡು ಶೇಕಡಾವಾರು NPA ಪ್ರಮಾಣವನ್ನು ಶೂನ್ಯ ಮಟ್ಟಕ್ಕೆ ತರಲು ಅಗತ್ಯ ಕ್ರಮಗಳನ್ನು ರೂಪಿಸಿಕೊಳ್ಳತಕ್ಕದ್ದು.

**ಸಮಾಧಾನ :– ಕ್ರಮವಿಡಲಾಗುವುದು.**

**3 ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ:**

ವರದಿ ಸಾಲಿನ ಅಂತ್ಯಕ್ಕೆ ಎಲ್ಲಾ ಅನುತ್ಪಾದಕ ಆಸ್ತಿಗಳ ಮೇಲೆ ಬರಬೇಕಾದ ಬಡ್ಡಿಯನ್ನು (CBS) C-Edge Technolgies ರವರ ಮುಖಾಂತರ ಗುರುತಿಸಿ ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಎರಡು ಕಡೆ ಕಾಂಟ್ರಾ ತೋರಿಸಿರುತ್ತಾರೆ.

**4 ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದುಕೊಳ್ಳುವುದು ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು ಪುನ: ಸ್ಪಷ್ಟೀಕರಣದ (Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ DICGC/ECGCಯನ್ನೊಳಗೊಂಡಂತೆ :**

ಬ್ಯಾಂಕಿನಲ್ಲಿ ಸಾಲ ಮಂಜೂರು ಮಾಡುವ ಮುನ್ನ ಬ್ಯಾಂಕಿನ ಅಭಯಂತರವರಿಂದ ಆಸ್ತಿಯ ಮೌಲ್ಯಮಾಪನ ಮಾಡಿಸುವ ವ್ಯವಸ್ಥೆ ಜಾರಿಯಲ್ಲಿರುತ್ತದೆ. ಯಾವುದೇ ಸಾಲಗಳು ಡಿ.ಐ.ಸಿ.ಜಿ.ಸಿ/ಇ.ಸಿ.ಜಿ.ಸಿಯ ಅಡಿಯಲ್ಲಿ ಇರುವುದಿಲ್ಲವೆಂದು ಬ್ಯಾಂಕಿನವರು ಸಮಜಾಯಿಶಿ ನೀಡಿರುತ್ತಾರೆ.

**5 ಉಚಿತ ಪ್ರಾಧಿಕಾರದಡಿ ಮಾಡುವ ಮನ್ನಾ/ಕಲ್ಪಿಸಲಾದ ಅವಕಾಶಗಳು:**

ಶಾಖೆಗಳ ಸಾಲದ ದಾಖಲೆಗಳ ಮತ್ತು ಕಡತಗಳ ಪರಿಶೀಲನಾ ವೇಳೆಯಲ್ಲಿ 12 ಸಾಲದ ಖಾತೆಗಳಿಗೆ ಮೂಲ ಬಡ್ಡಿಯಲ್ಲಿ, ದಂಡ ಬಡ್ಡಿಯಲ್ಲಿ ಹಾಗೂ ಇತರೆ ಮೊತ್ತಗಳಿಗೆ ರಿಯಾಯಿತಿಯನ್ನು ನೀಡಿರುತ್ತಾರೆ. ಈ ರಿಯಾಯಿತಿಯನ್ನು ಆರ್ ಬಿ ಐ ಸುತ್ತೋಲೆ ಸಂಖ್ಯೆ RBI/2023-24/40/DOR.STR.REC.20

| | |
|---|---|
| | /21.04.048/2023-24 ದಿನಾಂಕ June 08, 2023 ಮತ್ತು RBI/DOR/2025-26/287 DOR.STR.REC.206/ 21.04.048/2025-26 ದಿನಾಂಕ 28-11-2025 ಪ್ರಕಾರ ಬ್ಯಾಂಕು ಪಾಲಿಸಿ ತಯಾರಿಸಿ ಕಾರ್ಯಕಾರಿ ಮಂಡಳಿಯಲ್ಲಿ ಅನುಮೋದನೆಗೊಂಡು ಸಾಲ ವಸೂಲಾತಿ ನಿಯಮಾನುಸಾರ ನೀಡಿರುತ್ತದೆ. ಇದರ ವಿವರ ಈ ಕೆಳಕಂಡಂತಿದೆ :– |

| **ವಿವರಗಳು** | | **ರೂ. ಗಳಲ್ಲಿ** |
|---|---|---|
| ಸಾಲದ ಬಾಕಿ ಮೊತ್ತ (ಅಸಲು, ಬಡ್ಡಿ ಮತ್ತು ಇತರೆ) | | 21,15,45,459.00 |
| ವಸೂಲಾದ ಮೊತ್ತ | | 12,62,54,657.00 |
| **ಅ.** ಮೂಲ ಬಡ್ಡಿಯಲ್ಲಿ ನೀಡಲಾದ ರಿಯಾಯಿತಿಯ ಮೊತ್ತ | 8,25,97,152.00 | |
| **ಆ.** ದಂಡ ಬಡ್ಡಿಯಲ್ಲಿ ನೀಡಲಾದ ರಿಯಾಯಿತಿಯ ಮೊತ್ತ | 12,00,600.00 | |
| **ಇ.** ಇತರೆ ಮೊತ್ತದಲ್ಲಿ ನೀಡಲಾದ ರಿಯಾಯಿತಿಯ ಮೊತ್ತ | 14,93,050.00 | |
| ರಿಯಾಯಿತಿ ನೀಡಲಾದ ಒಟ್ಟು ಮೊತ್ತ **(ಅ+ಆ+ಇ)** | | 8,52,90,802.00 |

ಮೇಲ್ಕಂಡ ಸಾಲದ ಖಾತೆಗಳಲ್ಲಿ ಅಸಲಿನಲ್ಲಿ ಯಾವುದೇ ರಿಯಾಯಿತಿಯನ್ನು ನೀಡಿರುವುದಿಲ್ಲ.

**6** **ಸಾಲ ವಸೂಲಾತಿಯ ಕಾರ್ಯ ವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ:**

ದಿನಾಂಕ 31-03-2026ಕ್ಕೆ ರೂ. 117338.26 ಲಕ್ಷ ಹೊರೆ ಬಾಕಿ ಸಾಲವಿದ್ದು, ಈ ಸಾಲದ ಪೈಕಿ ರೂ. 18412.24 ಲಕ್ಷ ಸಾಲ ಸುಸ್ತಿಯಾಗಿರುತ್ತದೆ. ಸುಸ್ತಿ ಸಾಲದ ಪ್ರಮಾಣವು ಒಟ್ಟು ಸಾಲದ ಶೇ. 15.69 ರಷ್ಟಿರುತ್ತದೆ. ಸುಸ್ತಿ ಸಾಲಗಳ ಬಾಬ್ತು ದಾವಾ ಮತ್ತು ಡಿಕ್ರಿ ಕ್ರಮ ಜರುಗಿಸಿರುತ್ತಾರೆ. ಸಾಲ ವಸೂಲಾತಿಗೆ ಪ್ರತ್ಯೇಕ ವಿಭಾಗವಿರುತ್ತದೆ. ಕಳೆದ ಸಾಲಿನ ಅಂತ್ಯಕ್ಕೆ ಸುಸ್ತಿ ಪ್ರಮಾಣ ಶೇ. 18.47 ರಷ್ಟಿದ್ದು, ವರದಿ ಸಾಲಿನ ಸುಸ್ತಿ ಪ್ರಮಾಣ ಶೇ. 15.69 ರಷ್ಟಿದ್ದು ಶೇ. 2.78 ರಷ್ಟು ಕಡಿಮೆಯಾಗಿರುತ್ತದೆ.

ವರದಿ ಸಾಲಿನ ದಾವಾ ಕ್ರಮ, ಅವಾರ್ಡ್ ಮತ್ತು ಅಮಲ್ಜಾರಿ ಸಾಲಗಳ ಬಾಕಿ ಮೊತ್ತದ ವಿವರಗಳು ಕೆಳಕಂಡಂತಿದೆ :– **(ರೂ. ಲಕ್ಷಗಳಲ್ಲಿ)**

| **ಕ್ರ. ಸಂ** | **ವಿವರಗಳು** | **ದಾವಾ ಕ್ರಮ** | | **ಅವಾರ್ಡ್** | | **ಅಮಲ್ಜಾರಿ** | |
|---|---|---|---|---|---|---|---|
| | | **ಸಂಖ್ಯೆ** | **ಮೊಬಲಗು** | **ಸಂಖ್ಯೆ** | **ಮೊಬಲಗು** | **ಸಂಖ್ಯೆ** | **ಮೊಬಲಗು** |
| 1 | ಸಾಲು ಪ್ರಾರಂಭಕ್ಕೆ ಇದ್ದ ಪ್ರಮಾಣ | **4** | **2241.75** | **17** | **1212.92** | **9** | **917.92** |
| 2 | ವರದಿ ಸಾಲಿನಲ್ಲಿ ದಾಖಲಿಸಿದ್ದು | 0 | 0.00 | 0 | 0.00 | 0 | 0.00 |
| 3 | ವರದಿ ಸಾಲಿನಲ್ಲಿ ವಿಲೇವಾರಿಯಾದ ಪ್ರಕರಣ | 0 | 0.00 | 5 | 485.94 | 0 | 0.00 |
| 4 | ಸಾಲಾಖ್ಯೆರಿಗೆ ಉಳಿಕೆ | 4 | 2241.75 | 12 | 726.98 | 9 | 917.92 |
| 5 | ಪರಿವರ್ತಿತವಾದದ್ದು | 0 | 0.00 | 0 | 0.00 | 0 | 0.00 |
| | **ಒಟ್ಟು (4-5)** | **4** | **2241.75** | **12** | **726.98** | **9** | **917.92** |

ಈ ಬಗ್ಗೆ ವಿವಿಧ ಸಾಲವಾರು ವಿವರ ಪಟ್ಟಿ ತಯಾರಿಸಿದ್ದು ಅದರ ಅಂಕಿ ಅಂಶಗಳು ಮೇಲ್ಕಂಡ ಅಂಕಿ ಅಂಶಗಳೊಂದಿಗೆ ತಾಳೆಯಾಗಿರುತ್ತದೆ. ಸಾಲಗಳು ಸುಸ್ತಿಯಾದ 6 ತಿಂಗಳ ಅವಧಿಯೊಳಗೆ ಕಾನೂನು ಕ್ರಮ ತೆಗೆದುಕೊಳ್ಳತಕ್ಕದ್ದು.

ಆಡಳಿತ ಮಂಡಳಿಯು ತನ್ನ ಪ್ರತಿ ಮಾಸಿಕ ಸಭೆಯಲ್ಲಿ NPA ಆದ ದೊಡ್ಡ ಪ್ರಮಾಣದ ಸಾಲಗಳ ಅನೇಕ ಪ್ರಕರಣಗಳನ್ನು ಪರಿಶೀಲಿಸುತ್ತಿದೆ. ಕೆಲವು ಪ್ರಕರಣಗಳ ವಿರುದ್ಧ SARFAESI ಕಾಯ್ದೆಯಡಿ ಕ್ರಮವಿಡಲು, ಕೆಲವು ಪ್ರಕರಣಗಳಲ್ಲಿ ಸಾಲಗಾರರು ಮರುಪಾವತಿಸುವ ಬಗ್ಗೆ ಭರವಸೆ ನೀಡಿರುವ ಹಿನ್ನೆಲೆಯಲ್ಲಿ, ಕಾದು ನೋಡಿ ಅನುಸರಣಾ ಕ್ರಮವಿಡುವ ಬಗ್ಗೆ ನಿರ್ಣಯಿಸಲಾಗಿದೆ.

**SARFAESI ACT 2002 ರನ್ವಯ ತೆಗೆದುಕೊಂಡ ಕ್ರಮ:** ದಿನಾಂಕ 31-03-2026 ಕ್ಕೆ ಬ್ಯಾಂಕು ಸುಸ್ತಿದಾರರ ಮೇಲೆ SARFAESI ACT 2002 ರಂತೆ ತೆಗೆದುಕೊಂಡ ಕ್ರಮಗಳ ವಿವರ ಈ ಕೆಳಗಿನಂತಿರುತ್ತದೆ :–

| ಕ್ರ. ಸಂ | ವಿವರಗಳು | ಪ್ರಕರಣಗಳ ಸಂಖ್ಯೆ | ಬಾಕಿ ಮೊತ್ತ(ರೂ. ಗಳಲ್ಲಿ) |
|---|---|---|---|
| 1 | ಡಿಮ್ಯಾಂಡ್ ನೋಟೀಸ್ | 20 | 67,92,11,244.92 |
| 2 | ಸಾಂಕೇತಿಕ ವಶಕ್ಕೆ | 9 | 23,12,46,527.24 |
| 3 | ಕೇಸ್ ದಾಖಲಿಸಿರುವುದು | 4 | 9,57,00,773.90 |
| 4 | ಆದೇಶ ಪಡೆದಿದ್ದು ಭೌತಿಕ ವಶಕ್ಕೆ | 5 | 4,98,74,099.00 |
| 5 | ಆದೇಶ ಪಡೆದಿದ್ದು ಭೌತಿಕ ವಶಕ್ಕೆ ಪಡೆಯಬೇಕಾಗಿರುತ್ತದೆ | 44 | 86,92,62,575.00 |
| | **ಒಟ್ಟು** | **82** | **192,52,95,220.06** |

ಎಫ್ **ದೊಡ್ಡ ಪ್ರಮಾಣ ಸಾಲ/ಮುಂಗಡಗಳು :**

**ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನ ಸೆಳೆಯಬಹುದಾದ ಮಹತ್ವದ ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ:–**

ಶಾಖೆಗಳಲ್ಲಿ ಸ್ಥಿರಾಸ್ತಿ ಅಡಮಾನ ಮಾಡಿಕೊಂಡು ಸಾಲಗಳನ್ನು ನೀಡಲಾಗುತ್ತಿದೆ. ಸದರಿ ಸಾಲಗಳನ್ನು ಮಂಜೂರು ಮಾಡುವಾಗ ಸದರಿ ಆಸ್ತಿಗಳ ಇ.ಸಿ ಮತ್ತು ತೆರಿಗೆ ಪಾವತಿ ರಸೀದಿಗಳನ್ನು ಪಡೆದು ಪರಿಶೀಲಿಸಲಾಗುತ್ತಿದೆ. ಸದರಿ ಆಸ್ತಿಗಳ ಸಂಬಂಧ ಪ್ರತಿ ವರ್ಷವೂ ತೆರಿಗೆ ಪಾವತಿ ರಸೀದಿಯನ್ನು ಪಡೆಯುತ್ತಿದ್ದು ಕೆಲವೊಂದು ಖಾತೆಗಳಲ್ಲಿ ಪಡೆಯದಿರುವುದನ್ನು ಗಮನಿಸಲಾಗಿದೆ.

**ಜಿ 1** **ಸದಸ್ಯರ ಸಾಲ ಮತ್ತು ಮುಂಗಡಗಳು :**

ಬ್ಯಾಂಕಿನ ಉಪವಿಧಿ 64ರ ಪ್ರಕಾರ ವಿವಿಧ ರೀತಿಯ ಸಾಲಗಳನ್ನು ನೀಡಬಹುದಾಗಿದ್ದು ಸಾಲ ನೀಡುವಿಕೆ ಬಗ್ಗೆ ಕ್ರೆಡಿಟ್ ಪಾಲಿಸಿ ಮಾಡಿಕೊಂಡಿರುತ್ತಾರೆ. ಅದರಂತೆ ಸಾಲ ನೀಡುತ್ತಿದ್ದು ವಿವರ ಈ ಕೆಳಕಂಡಂತಿರುತ್ತದೆ:–

| ಕ್ರ ಸಂ | ಸಾಲದ ಸ್ವರೂಪ | ಉಪ ನಿಯಮ | ಕ್ರೆಡಿಟ್ ಪಾಲಿಸಿ ಸಂಖ್ಯೆ | ಸಾಲದ ಅವಧಿ |
|---|---|---|---|---|
| 1 | ಜಂಟಿ ಸಾಲ | 64 | 7.5(b)(XVIII) | 3 ತಿಂಗಳು |
| 2 | ಕಂತು ಜಂಟಿ ಸಾಲ | 64 | 7.5(b)(XIX) | 10 ತಿಂಗಳು |
| 3 | ಠೇವಣಿ ಆಧಾರಿತ ಸಾಲ | 64 | 7.5(b)(I) | ಠೇವಣಿಯ ಉಳಿದಿರುವ ಪರಿಪಕ್ವತಾ ಅವಧಿ |

| | | | | |
|---|---|---|---|---|
| 4 | ಸರಕು ಅಡಮಾನ ಸಾಲ & ವೇರ್ ಹೌಸ್ ರಸೀದಿ ಸಾಲ | 64 | 7.5(b)(XVI & XVII) | 12 ತಿಂಗಳು |
| 5 | ಚಿನ್ನಾಭರಣ ಸಾಲ | 64 | 7.5(b)(VI & VII) | 1 ವರ್ಷ ಬುಲೆಟ್ ಸಾಲ ಇತರೆ 36 ಕಂತುಗಳು |
| 6 | ಮೀರೆಳೆತ ಸಾಲ | 64 | 7.5(c) | 12 ತಿಂಗಳು |
| 7 | NSC KVP LIC ಆಧಾರ ಸಾಲ | 64 | 7.5(b)(II & III) | 12 ತಿಂಗಳು |
| 8 | ಗೃಹಬಳಕೆ ಸಾಲ | 64 | 7.5(b)(V) | 3 ವರ್ಷ |
| 9 | ಸ್ಥಿರಾಧಾರ ಸಾಲ | 64 | 7.5(b)(VIII) | 180 ತಿಂಗಳಿನವರೆಗೆ |
| 10 | ಗೃಹ ನಿರ್ಮಾಣ ಸಾಲ | 64 | 7.5(b)(IX) | 240 ತಿಂಗಳಿನವರೆಗೆ |
| 11 | ಗೃಹ ನಿರ್ಮಾಣಕ್ಕಾಗಿ ನಿವೇಶನ ಖರೀದಿಗೆ ಸಾಲ | 64 | 7.5(b)(X) | 120 ತಿಂಗಳಿನವರೆಗೆ |
| 12 | ಗೃಹ ರಿಪೇರಿ/ನವೀಕರಣ ಸಾಲ | 64 | 7.5(b)(XI) | 120 ತಿಂಗಳಿನವರೆಗೆ |
| 13 | ವ್ಯಾಪಾರ ಸಾಲ | 64 | 7.5(b)(XII) | 120 ತಿಂಗಳಿನವರೆಗೆ |
| 14 | ವಾಹನ ಸಾಲ (ಹಳೆಯದ್ದು/ಹೊಸದು) | 64 | 7.5(b)(XIII) | 60 ತಿಂಗಳಿನವರೆಗೆ |
| 15 | ಯಂತ್ರೋಪಕರಣ ಸಾಲ (ಹಳೆಯದ್ದು/ಹೊಸದು) | 64 | 7.5(b)(XIV) | 60 ತಿಂಗಳಿನವರೆಗೆ |

**2 ವರದಿ ಸಾಲಿನಲ್ಲಿ ಆದ ಪ್ರತಿಯೊಂದು ಸಾಲದ ವ್ಯವಹಾರಗಳ ಬಗ್ಗೆ ಅಂಕಿ ಅಂಶಗಳ ವಿವರ ನೀಡುವುದು:**

**(ರೂ. ಲಕ್ಷಗಳಲ್ಲಿ)**

| ಸಾಲಗಳ ಸ್ವರೂಪ | ಆರಂಭದ ಬಾಕಿ 2024-25 | ಪ್ರಸಕ್ತ ಸಾಲಿನಲ್ಲಿ ಹಂಚಿದ ಸಾಲ | ಪ್ರಸಕ್ತ ಸಾಲಿನಲ್ಲಿ ವಸೂಲಿಸಿದ ಸಾಲ | ವರ್ಷಾಂತ್ಯಕ್ಕೆ ಬಾಕಿ 2025-26 | ಯಾದಿಯ ಮೊತ್ತ | ಅಂತರ |
|---|---|---|---|---|---|---|
| **ಅಲ್ಪಾವಧಿ ಸಾಲಗಳು** | | | | | | |
| ಜಂಟಿ ಸಾಲ | 0.28 | 0.05 | 0.33 | 0.00 | 0.00 | - |
| ಮೀರೆಳೆತ ಸಾಲ | 10820.12 | 124210.88 | 116150.15 | 18880.85 | 18880.85 | - |
| ಸಂಚಿತ ಠೇವಣಿ ಸಾಲ | 50.83 | 147.94 | 144.21 | 54.56 | 54.56 | - |
| ಮಂಗಳ ನಗದು ಪತ್ರ ಠೇವಣಿ ಸಾಲ | 1311.15 | 2873.62 | 2583.49 | 1601.28 | 1601.28 | - |
| ಚಿನ್ನಾಭರಣ ಸಾಲ | 2892.69 | 8411.56 | 5406.03 | 5898.22 | 5898.22 | - |
| ನಿಶ್ಚಿತ ಠೇವಣಿ ಸಾಲ | 2755.68 | 4315.00 | 5006.83 | 2063.85 | 2063.85 | - |
| ಸರಕು ಅಡಮಾನ ಸಾಲ | 8878.35 | 27673.07 | 23625.51 | 12925.91 | 12925.91 | - |
| ಮೀರೆಳೆತ ಸರಕು ಅಡಮಾನ ಸಾಲ | 2291.97 | 2711.76 | 2859.76 | 2143.97 | 2143.97 | - |
| ಎಫ್ ಐ ಟಿ ಎಲ್ – ಟರ್ಮ್ ಲೋನ್ | 28.20 | 0.00 | 0.00 | 28.20 | 28.20 | |
| ಎಂ.ಎಸ್.ಎಂ.ಇ ಸಾಲ | 0.00 | 72.68 | 66.56 | 6.12 | 6.12 | |
| ಒಟ್ಟು | 29029.27 | 170416.56 | 155842.87 | 43602.96 | 43602.96 | - |

| | | | | | | |
|---|---|---|---|---|---|---|
| **ಮಧ್ಯಮಾವಧಿ ಸಾಲಗಳು** | | | | | | |
| ಆಸ್ತಿ ಅಡಮಾನ ಸಾಲ | 40.71 | 465.47 | 51.70 | 454.48 | 454.48 | – |
| ವಾಹನ ಸಾಲ | 4346.48 | 2404.64 | 1742.86 | 5008.26 | 5008.26 | – |
| ಯಂತ್ರೋಪಕರಣ/ ಟರ್ಮ್ ಲೋನ್ | 966.44 | 0.95 | 0.95 | 966.44 | 966.44 | – |
| ಗೃಹ ಸಾಲ | 18.24 | 1.21 | 6.97 | 12.48 | 12.48 | – |
| ಸಣ್ಣ ವ್ಯಾಪಾರಾಭಿವೃದ್ಧಿ ಸಾಲ | 63.53 | 6.10 | 49.60 | 20.03 | 20.03 | – |
| ವೇತನ ಆಧಾರಿತ ಸಾಲ ಇತರೆ | 2.18 | 10.43 | 3.95 | 8.66 | 8.66 | – |
| ಆರ್ ಎಫ್ ಟಿ ಸಾಲ | 309.10 | 3.12 | 3.12 | 309.10 | 309.10 | – |
| ಎಂ.ಎಸ್.ಎಂ.ಇ ಸಾಲ | 6.08 | 351.33 | 89.13 | 268.28 | 268.28 | – |
| ಒಟ್ಟು | 5752.76 | 3243.25 | 1948.28 | 7047.73 | 7047.73 | – |
| **ದೀರ್ಘಾವಧಿ ಸಾಲಗಳು** | | | | | | |
| ಆಸ್ತಿ ಅಡಮಾನ ಸಾಲ | 51705.81 | 17660.65 | 21347.46 | 48019.00 | 48019.00 | |
| ಯಂತ್ರೋಪಕರಣ/ ಟರ್ಮ್ ಲೋನ್ | 994.96 | 1333.09 | 1503.43 | 824.62 | 824.62 | |
| ಗೃಹ ಸಾಲ | 6892.48 | 3736.15 | 1975.67 | 8652.96 | 8652.96 | |
| ಬಾಡಿಗೆ ಆಧಾರಿತ ಸಾಲ | 1163.82 | 116.82 | 239.31 | 1041.33 | 1041.33 | |
| ಎಂ.ಎಸ್.ಎಂ.ಇ ಸಾಲ | 1224.32 | 4544.82 | 1444.34 | 4324.80 | 4324.80 | |
| ನಿವೇಶನ ಖರೀದಿ ಹಾಗು ಕಟ್ಟಡ ನಿರ್ಮಾಣ | 1158.60 | 1563.32 | 615.77 | 2106.15 | 2106.15 | |
| ಒಟ್ಟು | 63139.99 | 28954.85 | 27125.98 | 64968.86 | 64968.86 | |
| **ಸಿಬ್ಬಂದಿ ಸಾಲಗಳು** | | | | | | |
| ಹಬ್ಬದ ಮುಂಗಡ | 22.10 | 37.30 | 39.50 | 19.90 | 19.90 | |
| ವೇತನ ಆಧಾರಿತ ಸಾಲ | 464.21 | 181.71 | 223.55 | 422.37 | 422.37 | |
| ವಾಹನ ಸಾಲ | 86.91 | 22.91 | 31.20 | 78.62 | 78.62 | |
| ಗೃಹಸಾಲ | 1092.85 | 296.63 | 191.66 | 1197.82 | 1197.82 | |
| ಗೃಹಪಯೋಗೀಕರಣ ಸಾಲ | 0.18 | 0.00 | 0.18 | 0.00 | 0.00 | |
| ಒಟ್ಟು | 1666.25 | 538.55 | 486.09 | 1718.71 | 1718.71 | |
| ಒಟ್ಟು | 99588.27 | 203153.21 | 185403.22 | 117338.26 | 117338.26 | |

**3 ವರ್ಷಾಂತ್ಯಕ್ಕೆ ಬಾಕಿ ಇದ್ದ ಸಾಲಗಳನ್ನು ಹಿಂದಿನ ಸಾಲಿನ ಅವಧಿಗೆ ಹೋಲಿಸಿ ಹೆಚ್ಚು / ಕಡಿಮೆ ಆದ ಬಗ್ಗೆ ವಿಮರ್ಶೆ: (ರೂ. ಗಳಲ್ಲಿ)**

| ಕ್ರ ಸಂ | ಸಾಲದ ವಿವರ | 31-03-2025 | 31-03-2026 | ಹೆಚ್ಚು/ಕಡಿಮೆ ಕಳೆದ ಸಾಲಿಗೆ | ಶೇಕಡಾವಾರು ಪ್ರಗತಿ |
|---|---|---|---|---|---|
| I | **ಅಲ್ಪಾವಧಿ ಸಾಲಗಳು** | | | | |
| 1 | ಜಂಟಿ ಸಾಲ | 28,321.00 | 0.00 | -28,321.00 | -100.00 |
| 2 | ಮೀರೆಳೆತ ಸಾಲ | 108,20,11,695.07 | 188,80,84,518.14 | 80,60,72,823.07 | 74.50 |
| 3 | ಸಂಚಿತ ಠೇವಣಿ ಸಾಲ | 50,83,520.00 | 54,55,603.00 | 3,72,083.00 | 7.32 |
| 4 | ಮಂಗಳ ನಗದು ಪತ್ರ ಸಾಲ | 13,11,15,174.00 | 16,01,27,649.00 | 2,90,12,475.00 | 22.13 |
| 5 | ಚಿನ್ನಾಭರಣ ಸಾಲ | 28,92,69,390.16 | 58,98,22,138.00 | 30,05,52,747.84 | 103.90 |

| | | | | | |
|---|---|---|---|---|---|
| 6 | ನಿಶ್ಚಿತ ಠೇವಣಿ ಸಾಲ | 27,55,68,484.00 | 20,63,85,122.00 | -6,91,83,362.00 | -25.11 |
| 7 | ಸರಕು ಅಡಮಾನ ಸಾಲ | 88,78,34,165.00 | 129,25,90,941.00 | 40,47,56,776.00 | 45.59 |
| 8 | ಮೀರೆಳೆತ ಸರಕು ಅಡಮಾನ ಸಾಲ | 22,91,96,088.60 | 21,43,97,490.80 | -1,47,98,597.80 | -6.46 |
| 9 | ಎಫ್ ಐ ಟಿ ಎಲ್– ಟರ್ಮ್ ಲೋನ್ | 28,20,038.00 | 28,20,038.00 | 0.00 | 0.00 |
| 10 | ಎಂ.ಎಸ್.ಎಂ.ಇ ಸಾಲ | 0.00 | 6,12,439.00 | 6,12,439.00 | 100.00 |
| | ಒಟ್ಟು | 290,29,26,875.83 | 436,02,95,938.94 | 145,73,69,063.11 | |
| II | ಮಧ್ಯಮಾವಧಿ ಸಾಲಗಳು | | | | |
| 1 | ಆಸ್ತಿ ಅಡಮಾನ ಸಾಲ | 40,71,445.00 | 4,54,48,061.00 | 4,13,76,616.00 | 1016.26 |
| 2 | ವಾಹನ ಸಾಲ | 43,46,46,841.42 | 50,08,26,097.22 | 6,61,79,255.80 | 15.23 |
| 3 | ಯಂತ್ರೋಪಕರಣ/ ಟರ್ಮ್ ಲೋನ್ | 9,66,44,385.00 | 9,66,44,385.00 | 0.00 | 0.00 |
| 4 | ಗೃಹ ಸಾಲ | 18,24,800.00 | 12,47,601.00 | -5,77,199.00 | -31.63 |
| 5 | ಸಣ್ಣ ವ್ಯಾಪಾರಾಭಿವೃದ್ಧಿ ಸಾಲ | 63,53,601.00 | 20,02,884.00 | -43,50,717.00 | -68.48 |
| 6 | ವೇತನ ಆಧಾರಿತ ಸಾಲ– ಇತರೆ | 2,18,300.00 | 8,66,180.00 | 6,47,880.00 | 296.78 |
| 7 | ಆರ್ ಎಫ್ ಟಿ ಸಾಲ | 3,09,09,500.00 | 3,09,09,500.00 | 0.00 | 0.00 |
| 8 | ಎಂ.ಎಸ್.ಎಂ.ಇ ಸಾಲ | 6,08,167.00 | 2,68,28,171.00 | 2,62,20,004.00 | 4311.32 |
| | ಒಟ್ಟು | 57,52,77,039.42 | 70,47,72,879.22 | 12,94,95,839.80 | |
| III | ದೀರ್ಘಾವಧಿ ಸಾಲಗಳು | | | | |
| 1 | ಆಸ್ತಿ ಅಡಮಾನ ಸಾಲ | 517,05,80,952.73 | 480,19,00,319.13 | -36,86,80,633.60 | -7.13 |
| 2 | ಯಂತ್ರೋಪಕರಣ/ ಟರ್ಮ್ ಲೋನ್ | 9,94,95,486.90 | 8,24,61,521.90 | -1,70,33,965.00 | -17.12 |
| 3 | ಗೃಹ ಸಾಲ | 68,92,48,134.38 | 86,52,96,197.84 | 17,60,48,063.46 | 25.54 |
| 4 | ಬಾಡಿಗೆ ಆಧಾರಿತ ಸಾಲ | 11,63,83,045.00 | 10,41,33,353.00 | -1,22,49,692.00 | -10.53 |
| 5 | ಎಂ.ಎಸ್.ಎಂ.ಇ ಸಾಲ | 12,24,31,894.00 | 43,24,79,968.00 | 31,00,48,074.00 | 253.24 |
| 6 | ನಿವೇಶನ ಖರೀದಿ ಹಾಗು ಕಟ್ಟಡ ನಿರ್ಮಾಣ | 11,58,60,125.00 | 21,06,14,981.00 | 9,47,54,856.00 | 81.78 |
| | ಒಟ್ಟು | 631,39,99,638.01 | 649,68,86,340.87 | 18,28,86,702.86 | |
| IV | ಸಿಬ್ಬಂದಿ ಸಾಲಗಳು | | | | |
| 1 | ಹಬ್ಬದ ಮುಂಗಡ | 22,10,000.00 | 19,90,000.00 | -2,20,000.00 | -9.95 |
| 2 | ವೇತನ ಆಧಾರಿತ ಸಾಲ | 4,64,20,569.00 | 4,22,36,915.00 | -41,83,654.00 | -9.01 |
| 3 | ವಾಹನ ಸಾಲ | 86,90,476.00 | 78,61,763.00 | -8,28,713.00 | -9.54 |
| 4 | ಗೃಹಸಾಲ | 10,92,84,710.00 | 11,97,81,958.00 | 1,04,97,248.00 | 9.61 |
| 5 | ಗೃಹಪಯೋಗೀಕರಣ ಸಾಲ | 18,015.00 | 0.00 | -18,015.00 | -100.00 |
| | ಒಟ್ಟು | 16,66,23,770.00 | 17,18,70,636.00 | 52,46,866.00 | 3.15 |
| | ಒಟ್ಟು | **995,88,27,323.26** | **1173,38,25,795.03** | **177,49,98,471.77** | 17.82 |

| | |
|---|---|
| | ಸಾಲು ಪ್ರಾರಂಭಕ್ಕೆ ರೂ. 99588.27 ಲಕ್ಷ ಹೊರೆ ಬಾಕಿ ಸಾಲ ಇದ್ದು ದಿನಾಂಕ 31-03-2026ಕ್ಕೆ ರೂ. 117338.26 ಲಕ್ಷಗಳಿದ್ದು ಕಳೆದ ಸಾಲಿಗೆ ಹೋಲಿಸಿದಲ್ಲಿ ರೂ. 17749.99 ಲಕ್ಷ ಸಾಲಗಳು ಹೆಚ್ಚಾಗಿರುತ್ತದೆ. |
| **4** | **ಆಡಳಿತ ಮಂಡಳಿಯವರು ಪಡೆದಿರುವ ಸಾಲ ಸುಸ್ತಿ / ಚಾಲ್ತಿಯಲ್ಲಿರುವ ಬಗ್ಗೆ:**<br>2025-30ನೇ ಸಾಲಿನ ಚುನಾವಣೆಯಲ್ಲಿ ಗೆದ್ದ ಒಬ್ಬ ನಿರ್ದೇಶಕರ, ಒಬ್ಬ ನಿರ್ದೇಶಕರ ಸಂಬಂಧಿ ಮತ್ತು ಇನ್ನೊಬ್ಬ ನಿರ್ದೇಶಕರ ಆಸಕ್ತ ಸಂಸ್ಥೆಯ ಸಾಲಗಳಿದ್ದು, ಇವು ಚುನಾವಣೆಗೂ ಮುನ್ನ ಪಡೆದ ಸಾಲಗಳಾಗಿರುತ್ತವೆ. ದಿನಾಂಕ 31-03-2026ಕ್ಕೆ ರೂ. 9,56,46,994.00 ಸಾಲಗಳಿದ್ದು, ಯಾವುದು ಸುಸ್ತಿಯಾಗಿರುವುದಿಲ್ಲ. ಈ ಬಗ್ಗೆ ಆರ್.ಬಿ.ಐಗೆ ವರದಿಗಳನ್ನು ಸಲ್ಲಿಸಿರುತ್ತಾರೆ. |
| | **ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯರು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29ಸಿ(ಎ)ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ?**<br>ಮೇಲ್ಕಂಡ ಕಂಡಿಕೆಯಲ್ಲಿ ವಿವರಿಸಿದಂತೆ ಆಡಳಿತ ಮಂಡಳಿ ಸದಸ್ಯರ ಸಾಲಗಳು ಸುಸ್ತಿಯಾಗದ ಪ್ರಯುಕ್ತ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29ಸಿ(ಎ)ರನ್ವಯ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. |
| **5** | **ಸಾಲದ ಕುಳುವಾರು ತ:ಖ್ತೆಗಳು ಆಸ್ತಿ ಜವಾಬ್ದಾರಿ ತ:ಖ್ತೆಗೆ ತಾಳೆ ಇರುವ ಬಗ್ಗೆ:**<br>ಎಲ್ಲಾ ಸಾಲಗಳ ಕುಳುವಾರು ತಃಖ್ತೆಗಳು ತಾಳೆ ಇದ್ದು ವಿವರಗಳನ್ನು ವರದಿಯ ಕಂಡಿಕೆ 24(ಜಿ)(2)ರಲ್ಲಿ ಸಾಲದ ಸ್ವರೂಪ ಸಹಿತವಾಗಿ ವಿವರಿಸಲಾಗಿದೆ. |
| **6** | **ಮುದ್ದತ್ತು ಮೀರಿದ ಮತ್ತು ಮುದ್ದತ್ತು ಮೀರುವ ಅವಧಿ ಪೂರ್ವದಲ್ಲಿಯೇ ಸಾಲಗಳನ್ನು ನವೀಕರಿಸಲಾಗುತ್ತಿದೆಯೇ? ಈ ರೀತಿ ನವೀಕರಿಸುವುದಕ್ಕೆ ಬೈಲಾದಲ್ಲಿ ಅವಕಾಶವಿರುವುದೋ?**<br>ಯಾವುದೇ ಮುದ್ದತ್ತು ಮೀರಿದ ಮತ್ತು ಮುದ್ದತ್ತು ಮೀರುವ ಅವಧಿ ಪೂರ್ವದಲ್ಲಿರುವ ಸಾಲಗಳನ್ನು ನವೀಕರಿಸುತ್ತಿರುವುದಿಲ್ಲ. |
| **7** | **ವರದಿ ಸಾಲಿನಲ್ಲಿ ಒಟ್ಟು ನವೀಕರಿಸಿದ ಸಾಲದ ಪ್ರಕರಣಗಳು ಮತ್ತು ಮೊತ್ತ:**<br>ಪರಿಕ್ಷಾರ್ಥ ಪರಿಶೀಲನೆ ವೇಳೆಯಲ್ಲಿ OD ಸಾಲಗಳನ್ನು ಹೊರತುಪಡಿಸಿ ಉಳಿದಂತೆ ಯಾವುದೇ ಇತರೆ ಸಾಲಗಳನ್ನು ನವೀಕರಿಸಿದ ಪ್ರಕರಣಗಳು ಇರುವುದಿಲ್ಲ. |
| **8** | **ಹಿಂದಿನ ಸಾಲದ ಬಾಕಿ ಮತ್ತು ಬಡ್ಡಿಯನ್ನು ಜಮಾ ಹಿಡಿದ ಅಷ್ಟೇ ಮೊತ್ತಕ್ಕೆ ಹೊಸ ಸಾಲ ಎಂದು ಖರ್ಚು ಹಾಕಿರುವ ಪ್ರಕರಣಗಳಿರುತ್ತವೆಯೇ ವಿವರಿಸಿ:**<br>ಪರಿಕ್ಷಾರ್ಥ ಪರಿಶೀಲನೆ ವೇಳೆಯಲ್ಲಿ ಹಿಂದಿನ ಸಾಲದ ಬಾಕಿ ಮತ್ತು ಬಡ್ಡಿಯನ್ನು ಜಮಾ ಹಿಡಿದು ಅಷ್ಟೇ ಮೊತ್ತದ ಹೊಸ ಸಾಲ ಎಂದು ಖರ್ಚು ಹಾಕಿರುವ ಯಾವುದೇ ಪ್ರಕರಣಗಳಿರುವುದಿಲ್ಲ. |
| **9** | **ಹಳೇ ಸಾಲದ ಬಾಕಿಗಿಂತ ಹೆಚ್ಚುವರಿ ಸಾಲ ಮಂಜೂರು ಮಾಡಿ ಹಳೇ ಸಾಲದ ಬಾಕಿ ಜಮೆ ಪಡೆದಿರುವ ಪ್ರಕರಣಗಳಿದ್ದಲ್ಲಿ ವಿಮರ್ಶಿಸಿ:**<br>ಯಾವುದೇ ಪ್ರಕರಣಗಳು ಕಂಡುಬಂದಿರುವುದಿಲ್ಲ. |

| | |
|---|---|
| 10 | **ಬಂಗಾರ ಅಡವಿನ ಸಾಲ ನೀಡಿದಲ್ಲಿ ಬ್ಯಾಂಕಿನಲ್ಲಿಯ ಅಡವಿನ ಬಂಗಾರದ ಆಭರಣದ ಬಗ್ಗೆ ಭದ್ರತೆ ಹಾಗೂ ವಿಮೆ ಮಾಡಿಸಿರುವ ಮೊತ್ತ:**<br>ಬ್ಯಾಂಕಿನಲ್ಲಿ ಒತ್ತೆಯಿಟ್ಟಿರುವ ಚಿನ್ನಾಭರಣಗಳನ್ನು ಶಾಖಾ ವ್ಯವಸ್ಥಾಪಕರು ಹಾಗೂ ನಗದು ಗುಮಾಸ್ತರ ಜಂಟಿ ಅಭಿರಕ್ಷೆಯಲ್ಲಿ ಇಟ್ಟುಕೊಂಡಿದ್ದು ಅದು ಶಾಖೆಯ ಭದ್ರತಾ ಸೇಫ್ ಲಾಕರ್‌ನಲ್ಲಿ ಇರುವುದು ಕಂಡು ಬಂದಿರುತ್ತದೆ.<br>ವರದಿ ವರ್ಷದಲ್ಲಿ ರೂ. 100.00 ಕೋಟಿಗೆ ಅಡವಿಟ್ಟ ಚಿನ್ನಾಭರಣಕ್ಕೆ ದಿನಾಂಕ 04-04-2026ರವರೆಗೆ ವಿಮೆ ಮಾಡಿಸಿದ್ದು, ನಂತರ ಬ್ಯಾಂಕು ಚಿನ್ನಾಭರಣ ಸಾಲಗಳನ್ನು ಹೆಚ್ಚಿಗೆ ನೀಡಿದ್ದರಿಂದ ವಿಮೆಯ ಮೊತ್ತ ಕಡಿಮೆಯಾಗಿರುತ್ತದೆ.<br>ಪ್ರಸಕ್ತ ಸಾಲಿನಲ್ಲಿ ರೂ. 200.00 ಕೋಟಿಗೆ ವಿಮೆ ಮಾಡಿಸಿದ್ದು, ದಿನಾಂಕ 04-04-2027ರವರೆಗೆ ಜಾರಿಯಲ್ಲಿರುತ್ತದೆ. ಬ್ಯಾಂಕು ಪ್ರಸ್ತುತ ಚಿನ್ನದ ಮಾರುಕಟ್ಟೆ ಮೌಲ್ಯವನ್ನು ಪರಿಗಣಿಸಿ ಅಗತ್ಯವಿದ್ದಲ್ಲಿ ಹೆಚ್ಚುವರಿ ವಿಮಾ ಪಾಲಿಸಿಯನ್ನು ಮಾಡಿಸಲು ಕ್ರಮವಿಡುವುದು.<br>**ಸಮಾಧಾನ :– ಲೆಕ್ಕಪರಿಶೋಧಕರ ಸಲಹೆಯನ್ನು ಪಾಲಿಸಲಾಗುವುದು.** |
| 11 | **ಆಧಾರ ಮತ್ತು ಆಧಾರ ರಹಿತ ಸಾಲಗಳ ಪ್ರಮಾಣವನ್ನು ವಿಶ್ಲೇಷಿಸುವುದು:**<br>ಬ್ಯಾಂಕಿನಲ್ಲಿ ಆಧಾರ ರಹಿತ ಸಾಲದ ಮೊತ್ತ ರೂ. 28.69 ಲಕ್ಷಗಳಿದ್ದು ಇದು ಒಟ್ಟು ಸಾಲದ ಶೇ. 0.02ರಷ್ಟಿರುತ್ತದೆ.<br>ಆಧಾರ ಸಾಲಗಳು ರೂ. 117309.57 ಲಕ್ಷಗಳಿದ್ದು ಒಟ್ಟು ಸಾಲಕ್ಕೆ ಶೇ. 99.98ರಷ್ಟಿರುತ್ತದೆ. ಆಧಾರ ರಹಿತ ಸಾಲಗಳನ್ನು ಹೆಚ್ಚಿಗೆ ನೀಡಲು ಕ್ರಮವಿಡಬಹುದಾಗಿದೆ. |
| 12 | **ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ನಮೂದಿಸುವುದು. ಅದರಂತೆ ಸಂಘ ಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಲಾತಿಗಳಲ್ಲಿರುವ ನ್ಯೂನತೆಗಳ ಬಗ್ಗೆ ವಿವರವಾಗಿ ವಿಮರ್ಶಿಸುವುದು:**<br>ವರದಿ ಸಾಲಿನಲ್ಲಿ ಮಂಜೂರಾದ ಸಾಲದ ಕಡತಗಳನ್ನು ಲೆಕ್ಕಪರಿಶೋಧನಾ ವೇಳೆಯಲ್ಲಿ ಪರಿಕ್ಷಾರ್ಥ ಪರಿಶೀಲಿಸಿದಾಗ ಯಾವುದೇ ಗುರುತರ ನ್ಯೂನತೆಗಳು ಕಂಡು ಬಂದಿರುವುದಿಲ್ಲ. |
| 13 | **ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ/ತಪ್ಪು ಇರುವ ಬಗ್ಗೆ ಉಲ್ಲೇಖಿಸುವುದು:**<br>2025-26ನೇ ಸಾಲಿಗೆ ಸಂಬಂಧಿಸಿದಂತೆ ಸಾಲಗಳ ಮೇಲಿನ ಬಡ್ಡಿ ಲೆಕ್ಕಾಚಾರವನ್ನು ಪರೀಕ್ಷಾರ್ಥಕವಾಗಿ ಪರಿಶೀಲಿಸಿದ್ದು ಕ್ರಮಬದ್ಧವಾಗಿರುವುದು ಕಂಡುಬಂದಿರುತ್ತದೆ. |
| 14 | **ಒಟ್ಟು ಸದಸ್ಯರ ಸಂಖ್ಯೆಗೆ ಬ್ಯಾಂಕಿನ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡಾವಾರು ಲೆಕ್ಕಾಚಾರ ಹಾಕಿ ವಿಮರ್ಶಿಸುವುದು:**<br>ದಿನಾಂಕ 31-03-2026ಕ್ಕೆ ಬ್ಯಾಂಕಿನಲ್ಲಿ ಸಾಮಾನ್ಯ ಸದಸ್ಯರು 12831 ಹಾಗು ಸಹ–ಸದಸ್ಯರು 7226 ಒಟ್ಟು 20057 ಸದಸ್ಯರಿದ್ದು, ಈ ಪೈಕಿ 4466 ಸದಸ್ಯರು ಸಾಲ ಪಡೆದಿದ್ದು ಇದು ಒಟ್ಟು ಸದಸ್ಯರ ಶೇ. 22.27 ರಷ್ಟಿದ್ದು ಎಲ್ಲಾ ಸದಸ್ಯರು ಬ್ಯಾಂಕಿನ ವ್ಯವಹಾರದಲ್ಲಿ ಪಾಲ್ಗೊಳ್ಳುವಂತೆ ಮನವೊಲಿಸುವುದು ಸೂಕ್ತವಾಗಿದೆ. |

| | |
|---|---|
| 15 | **ರೂ. 20000/- ಕ್ಕಿಂತ ಹೆಚ್ಚಿನ ಸಾಲದ ಮೊತ್ತಗಳನ್ನು ನಗದು ಪಾವತಿಸಿದ್ದಲ್ಲಿ ಉದಾಹರಣೆಯೊಂದಿಗೆ ವಿವರಿಸುವುದು:**<br>ಎಲ್ಲಾ ರೀತಿಯ ಸಾಲಗಳನ್ನು ಅವರ ಖಾತೆಗಳಿಗೆ ವರ್ಗಾಯಿಸಿ ಪಾವತಿಸುವ ಪದ್ಧತಿ ಇಟ್ಟಿರುತ್ತಾರೆ. |
| 16 | **ಬ್ಯಾಂಕಿನಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ರಿಜಿಸ್ಟರ್ ಇಡಲಾಗಿದೆಯೇ? ವರದಿ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯರ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಮನಿಸಿ ವಿಶ್ಲೇಶಿಸುವುದು:**<br>ಬ್ಯಾಂಕಿನ ಶಾಖೆಗಳಲ್ಲಿ ಸಾಲದ ಅರ್ಜಿ ರಿಜಿಸ್ಟರ್ ಇಟ್ಟಿರುತ್ತಾರೆ. ವಿವರ ಈ ಕೆಳಕಂಡಂತಿರುತ್ತದೆ :– |

| ವಿವರ | ಅರ್ಜಿಗಳ ಸಂಖ್ಯೆ |
|---|---|
| ಪ್ರಸಕ್ತ ಸಾಲಿನಲ್ಲಿ ಬಂದ ಅರ್ಜಿಗಳು | 713 |
| ವರದಿ ಸಾಲಿನಲ್ಲಿ ವಿಲೇವಾರಿ ಆದ ಅರ್ಜಿಗಳು | 707 |
| ತಿರಸ್ಕೃತಗೊಂಡ ಅರ್ಜಿಗಳು | 5 |
| ಉಳಿಕೆ | 1 |

ತಿರಸ್ಕೃತಗೊಂಡ ಅರ್ಜಿಗಳ ಬಾಬ್ತು ಹೆಚ್ಚಿನ ಮಾಹಿತಿ ಕೋರಿ ವಾಪಸ್ಸು ಮಾಡಿದವುಗಳಾಗಿರುತ್ತದೆ.

| | |
|---|---|
| 17 | **ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಬಗ್ಗೆ ವಿವರಿಸುವುದು:**<br>ವರದಿ ಸಾಲಿನಲ್ಲಿ ಬ್ಯಾಂಕು ಯಾವುದೇ ಕರುಡು ಸಾಲಗಳನ್ನು ಮುಳುಗುವ ಸಾಲವೆಂದು ಗುರುತಿಸಿಕೊಂಡಿರುವುದಿಲ್ಲ.<br><br>**ವಸೂಲಿಗಾಗಿ ಬಾಕಿ ಇರುವ ಮುಂಗಡಗಳ ಖಾತೆ:** ಆರ್ ಬಿ ಐ ಸುತ್ತೋಲೆ ಸಂಖ್ಯೆ: DOR.STR.REC.20/ 21.04.048/2023-2420/21.04.048/2023-24 ದಿನಾಂಕ 08-06-2023ರಲ್ಲಿ ನೀಡಿರುವ ನಿರ್ದೇಶನದಂತೆ, Compromise Settlement ಮತ್ತು Technical write-off ಗಳಿಗೆ ಮಾದರಿ ನೀತಿಯನ್ನು ತಯಾರಿಸಿ ಕಾರ್ಯಕಾರಿ ಸಮಿತಿ ಸಭೆಗೆ ಮಂಡಿಸಿ, ಅನುಮೋದನೆ ಪಡೆದು, 2023-24ನೇ ಸಾಲಿನಲ್ಲಿ 8 ಶಾಖೆಗಳ ಒಟ್ಟು 35 ಎನ್ ಪಿ ಎ ಖಾತೆಗಳಿಂದ ರೂ. 3,37,58,714.00 ಗಳನ್ನು Technical write-off ಮಾಡಿ ಕರಡು ಸಾಲದ ನಿಧಿ ಹಾಗೂ ಸಂಬಂಧಪಟ್ಟ ಸಾಲಗಾರರ ಷೇರು ಖಾತೆಗೆ ಖರ್ಚು ಹಾಕಿ ಖಾತೆಗಳನ್ನು ಖೈದುಗೊಳಿಸಿ, ಸಾಲಗಳ ವಸೂಲಾತಿಗಾಗಿ ಕಾನೂನು ಕ್ರಮ ಜಾರಿಯಲ್ಲಿಟ್ಟಿರುತ್ತಾರೆ. ಸದರಿ ಮೊತ್ತವನ್ನು ಶಾಖೆಗಳ ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಕಾಂಟ್ರಾ ತೋರಿಸಿರುತ್ತಾರೆ. ಈ ಖಾತೆಗಳ ನಿರ್ವಹಣೆ ಪ್ರತ್ಯೇಕ ರಿಜಿಸ್ಟರ್‌ನಲ್ಲಿ ಮಾಡುತ್ತಿದ್ದು, ವಸೂಲಾತಿಯ ಲೆಕ್ಕವಿಡುವುದು ಕಷ್ಟಕರ/ಪ್ರಯಾಸವಾಗಬಹುದಾಗಿದ್ದು ಈ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಸಲಹೆ ನೀಡಲಾಗಿದೆ.<br><br>ಕಳೆದ ಸಾಲಿನ ವರ್ಷಾಂತ್ಯಕ್ಕೆ ಟೆಕ್ನಿಕಲ್ ರೈಟ್ ಆಫ್ ಆದ ಖಾತೆಗಳ ಬಾಬ್ತು ರೂ. 3,32,21,686.00 ಗಳಿದ್ದು, ವರದಿ ಸಾಲಿನಲ್ಲಿ ಎಸ್. ಎಸ್. ಪುರಂ ಶಾಖೆಯಿಂದ Technical Write-off ಆಗಿದ್ದ ಒಂದು ಖಾತೆಯಿಂದ ರೂ. 3,62,889.00ಗಳು ವಸೂಲಾಗಿದ್ದು, ಹೊಸದಾಗಿ ಯಾವುದೇ ಸಂಶಯಾತ್ಮಕ ಮತ್ತು ಮುಳುಗುವ ಸಾಲಗಳನ್ನು ಟೆಕ್ನಿಕಲ್ ರೈಟ್ ಆಫ್ ಮಾಡಿರುವುದಿಲ್ಲ. ವರ್ಷಾಂತ್ಯಕ್ಕೆ ಟೆಕ್ನಿಕಲ್ ರೈಟ್ ಆಫ್ ಆದ ಖಾತೆಗಳ ಬಾಬ್ತು ರೂ. 3,28,58,797.00ಗಳಿರುತ್ತದೆ. |

| | | |
|---|---|---|
| 18 | **ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಮೊತ್ತದ ಅನುಗುಣವಾಗಿ ಸಂಶಯಾತ್ಮಕ ಮತ್ತು ಮುಳುಗುವ ಸಾಲದ ನಿಧಿ ಇರುವುದೇ?**<br>ಬ್ಯಾಂಕು ಒಟ್ಟು ರೂ. 19553.28 ಲಕ್ಷಗಳ ಕರಡು ಮತ್ತು ಸಂಶಯಾತ್ಮಕ ಸಾಲದ ನಿಧಿಯನ್ನು ಹೊಂದಿರುತ್ತದೆ. | |
| 19 | **ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘ ಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಲಾತಿಗಳಲ್ಲಿರುವ ನ್ಯೂನತೆಗಳ ಬಗ್ಗೆ ವಿವರವಾಗಿ ವಿಮರ್ಶಿಸುವುದು :**<br>ಸಾಲದ ಅರ್ಜಿಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದು ಯಾವುದೇ ನ್ಯೂನತೆಗಳು ಕಂಡುಬಂದಿರುವುದಿಲ್ಲ. | |
| 20 | **ಲೆಕ್ಕ ಪರಿಶೋಧನಾ ಸೂಚನೆ (Audit Instruction No 1) ಸಂಖ್ಯೆ ಸಿಎಡಿ/ಎಎಫ್ಆರ್–1/ಎ.181-82 ದಿನಾಂಕ 04-07-1981ರನ್ವಯ ಆಯ್ದ ಪ್ರಕರಣಗಳಲ್ಲಿ ಲೆಕ್ಕ ಪರಿಶೋಧನಾ ಕಾಲಕ್ಕೆ ಸಾಲಗಾರರ ಸಾಲದ ಖಾತೆಯಲ್ಲಿರುವ ಬಾಕಿಯನ್ನು ಸಾಲಗಾರರಿಂದ ಖಚಿತಪಡಿಸಿಕೊಂಡಿರುವುದರ ಬಗ್ಗೆ ವಿಮರ್ಶಿಸಿ ಅದರ ಪಟ್ಟಿಯನ್ನು ವರದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು:**<br>ಲೆಕ್ಕಪರಿಶೋಧನಾ ವೇಳೆಯಲ್ಲಿ ಸಾಲಗಾರರ ವೈಯಕ್ತಿಕ ಪರಿಶೀಲನೆಯನ್ನು ನೆಡೆಸಿದ್ದು, ಸಾಲಗಾರರು ಶಾಖೆಗಳಿಗೆ ಹಾಜರಾಗಿ ತಮ್ಮ ಸಾಲದ ಬಾಕಿಯನ್ನು ಒಪ್ಪಿಕೊಂಡಿರುವ ಬಗ್ಗೆ ದೃಢೀಕರಣ ನೀಡಿದ್ದು, ಆ ಪಟ್ಟಿಗಳನ್ನು ಲೆಕ್ಕಪರಿಶೋಧನಾ ವರದಿಗೆ ಪ್ರತ್ಯೇಕವಾಗಿ ಲಗತ್ತಿಸಿದೆ. | |
| 25 | | **ಸುಸ್ತಿ ಸಾಲಗಳ ವಿವರ:** |
| | **1.** | **ಸುಸ್ತಿ ಸಾಲದ ಮೊತ್ತ:**<br>ದಿನಾಂಕ 31-03-2026ಕ್ಕೆ ಒಟ್ಟು ಸಾಲ ರೂ. 117338.26 ಲಕ್ಷ ಸಾಲಗಳು ಹೊರೆಬಾಕಿ ಇರುತ್ತದೆ. ಈ ಬಾಬ್ತು ರೂ. 18412.24 ಲಕ್ಷ ಸಾಲಗಳು ಸುಸ್ತಿಯಲ್ಲಿದ್ದು ಸುಸ್ತಿ ಸಾಲದ ಪ್ರಮಾಣ ಒಟ್ಟು ಸಾಲಕ್ಕೆ ಶೇ. 15.69 ರಷ್ಟಿರುತ್ತದೆ. |
| | **2.** | **ಡಿ.ಸಿ.ಬಿ. ರಿಜಿಸ್ಟರ್ ಇಟ್ಟ ಬಗ್ಗೆ ಒಟ್ಟು ಸಾಲಕ್ಕೆ ಸುಸ್ತಿ ಸಾಲದ ಶೇಕಡ:**<br>28 ಶಾಖೆಗಳಿಂದ ಗಣಕಯಂತ್ರದಲ್ಲಿ ತಯಾರಿಸಿದ ಮಾಹಿತಿ ತರಿಸಿಕೊಂಡು ಕೇಂದ್ರ ಕಚೇರಿಯಲ್ಲಿ ಕ್ರೋಢೀಕರಿಸಿ ಮಾಹಿತಿ ಇಟ್ಟುಕೊಂಡಿರುತ್ತಾರೆ. ಶಾಖೆಗಳಲ್ಲಿ ಮಾಹಿತಿ ಲಭ್ಯವಿರುತ್ತದೆ ಹಾಗೂ ಒಟ್ಟು 236 ಸುಸ್ತಿದಾರರಿರುತ್ತಾರೆ. ಶಿರಾ, ಇಂದಿರಾನಗರ, ಕುವೆಂಪುನಗರ ಮತ್ತು ರಾಜರಾಜೇಶ್ವರಿನಗರ ಶಾಖೆಗಳಲ್ಲಿ ಸುಸ್ತಿ ಸಾಲ ಶೂನ್ಯವಿರುತ್ತದೆ. 2025-26ನೇ ಸಾಲಿಗೆ ಒಟ್ಟು ತಗಾದೆ ರೂ. 51230.13 ಲಕ್ಷ ಇದ್ದು ವರದಿ ಸಾಲಿನಲ್ಲಿ ರೂ. 32817.89 ಲಕ್ಷ ವಸೂಲಿ ಆಗಿದ್ದು ವರ್ಷಾಂತ್ಯಕ್ಕೆ ರೂ. 18412.24 ಲಕ್ಷ ಬಾಕಿ ಉಳಿದಿರುತ್ತದೆ ಅಂದರೆ ಶೇ. 64.06 ರಷ್ಟು ಮಾತ್ರ ವಸೂಲಿಯಾಗಿದ್ದು ಒಟ್ಟು ತಗಾದೆಗೆ ಶೇ. 35.94 ರಷ್ಟು ಬಾಕಿ ಉಳಿದಿರುತ್ತದೆ. |

**3. ವರ್ಷಾವಾರು ಸಾಲಾವಾರು ಸುಸ್ತಿ ಸಾಲದ ವಿವರ** : (ರೂ. ಲಕ್ಷಗಳಲ್ಲಿ)

| ಕ್ರ ಸಂ | ವಿವರ | ಒಂದು ವರ್ಷದೊಳಗೆ | 1 ರಿಂದ 2 ವರ್ಷದೊಳಗೆ | 2 ರಿಂದ 3 ವರ್ಷದೊಳಗೆ | 3 ರಿಂದ 4 ವರ್ಷದೊಳಗೆ | 4 ರಿಂದ 5 ವರ್ಷದೊಳಗೆ | 5 ರಿಂದ 6 ವರ್ಷದೊಳಗೆ | 6 ವರ್ಷ ಮೇಲ್ಪಟ್ಟ | ಒಟ್ಟು |
|---|---|---|---|---|---|---|---|---|---|
| 1 | ಜಂಟಿ ಸಾಲ | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 2 | ಕಂತು ಜಂಟಿ ಸಾಲ | 0.00 | 0.00 | 0.00 | 0.00 | 0.00 | 0.00 | 0.00 | 0.00 |
| 3 | ಆಸ್ತಿ ಅಡಮಾನ ಸಾಲ | 643.30 | 132.39 | 1655.98 | 558.70 | 1023.23 | 156.60 | 11569.98 | 15740.18 |
| 4 | ಯಂತ್ರೋಪಕರಣ ಸಾಲ | 0.00 | 0.00 | 0.00 | 0.00 | 177.24 | 0.00 | 51.64 | 228.88 |
| 5 | ಚಿನ್ನಾಭರಣ ಸಾಲ | 1.44 | 9.36 | 0.00 | 0.00 | 0.00 | 0.00 | 0.00 | 10.80 |
| 6 | ಸರಕು ಅಡಮಾನ ಸಾಲ | 105.49 | 0.00 | 0.00 | 0.00 | 0.00 | 0.00 | 0.00 | 105.49 |
| 7 | ಗೃಹ ಸಾಲ | 12.08 | 0.00 | 0.00 | 0.00 | 0.00 | 0.00 | 4.54 | 16.62 |
| 8 | ಮೀರೆಳೆತ ಸಾಲ | 0.00 | 211.58 | 199.09 | 350.00 | 5.09 | 0.00 | 32.25 | 798.01 |
| 9 | ವಾಹನ ಸಾಲ | 1.96 | 1.49 | 0.00 | 0.00 | 0.00 | 0.00 | 1270.56 | 1274.01 |
| 10 | ಸಣ್ಣ ವ್ಯಾಪಾರಾಭಿವೃದ್ಧಿ ಸಾಲ | 2.18 | 4.53 | 6.00 | 3.62 | 0.21 | 1.33 | 2.01 | 19.88 |
| 11 | ಎಫ್ ಐ ಟಿ ಎಲ್ ಸಾಲ | 0.00 | 0.00 | 0.00 | 20.28 | 0.00 | 0.00 | 7.92 | 28.20 |
| 12 | ಆರ್ ಎಫ್ ಟಿ ಎಲ್ ಸಾಲ | 0.00 | 0.00 | 102.85 | 87.32 | 0.00 | 0.00 | 0.00 | 190.17 |
| | ಒಟ್ಟು | 766.45 | 359.35 | 1963.92 | 1019.92 | 1205.77 | 157.93 | 12938.90 | 18412.24 |

**4 ಸುಸ್ತಿ ಸಾಲದ ಪೈಕಿ ದಾವಾಕ್ಕೆ ಹಾಕಿದ ಪ್ರಕರಣಗಳ ಸಂಖ್ಯೆ ಮತ್ತು ಸುಸ್ತಿ ಮೊತ್ತ:**

| ಕ್ರ ಸಂ | ವಿವರ | ಪ್ರಕರಣಗಳ ಸಂಖ್ಯೆ | ಸುಸ್ತಿಯ ಮೊತ್ತ ರೂ.ಗಳಲ್ಲಿ |
|---|---|---|---|
| 1 | ದಾವಾ ಕ್ರಮ | 4 | 22,17,70,331.00 |
| 2 | ಡಿಕ್ರಿ | 12 | 8,04,46,070.00 |
| 3 | ಇ ಪಿ | 9 | 9,17,37,653.00 |
| | **ಒಟ್ಟು** | **25** | **39,39,54,054.00** |

4 ಪ್ರಕರಣಗಳ ಮೇಲೆ ದಾವಾ ಕ್ರಮ ಜರುಗಿಸಿದ್ದು ಈ ಬಾಬ್ತಿನ ಪೈಕಿ ರೂ. 22.18 ಕೋಟಿ ಸುಸ್ತಿಯಾಗಿರುತ್ತದೆ. ಒಟ್ಟಾರೆ ಸುಸ್ತಿಯ ಮೇಲೆ ದಾವಾ ಕ್ರಮ ಜರುಗಿಸಿದ ಶೇಕಡವಾರು ಪ್ರಮಾಣ 12.04 ಇರುತ್ತದೆ.

**5 ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ)ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ?**

ಮೇಲ್ಕಂಡ ಕಂಡಿಕೆಯಲ್ಲಿ ವಿವರಿಸಿದಂತೆ ಆಡಳಿತ ಮಂಡಳಿ ಸದಸ್ಯರ ಸಾಲಗಳು ಸುಸ್ತಿಯಾಗದೇ ಇರುವುದರಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

**6 ಅಮಲ್ಜಾರಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ವಿಮರ್ಶಿಸುವುದು:**

ವರದಿ ಸಾಲಿನಲ್ಲಿ ಬ್ಯಾಂಕು ಯಾವುದೇ ಆಸ್ತಿಯನ್ನು ಖರೀದಿಸಿರುವುದಿಲ್ಲ.

| | | |
|---|---|---|
| **7** | **(1)** | **ಎನ್.ಪಿ.ಎ ಬಗ್ಗೆ ವಿಮರ್ಶೆ (ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತಃಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು) :**<br>ಬ್ಯಾಂಕು ವಿವಿಧ ಶಿರೋನಾಮೆಯಡಿಯಲ್ಲಿ ನೀಡಿರುವ ಸಾಲಗಳ ಪೈಕಿ ವರ್ಷಾಂತ್ಯಕ್ಕೆ ರೂ. 117338.26 ಲಕ್ಷಗಳಿದ್ದು, ಈ ಪೈಕಿ ರೂ. 20143.59 ಲಕ್ಷ ಅನುತ್ಪಾದಕ ಸಾಲವಾಗಿದ್ದು, ಒಟ್ಟಾರೆ ಬ್ಯಾಂಕಿನಲ್ಲಿ ಶೇ. 17.17 ರಷ್ಟು ಅನುತ್ಪಾದಕ ಸಾಲವಿರುತ್ತದೆ. ವರ್ಷಾಂತ್ಯಕ್ಕೆ ರೂ. 19553.28 ಲಕ್ಷಗಳ ಅವಕಾಶ ಕಲ್ಪಿಸಿಕೊಂಡಿದ್ದು, ವರ್ಷಾಂತ್ಯಕ್ಕೆ ನಿವ್ವಳ ಅನುತ್ಪಾದಕ ಸಾಲದ ಪ್ರಮಾಣ ಶೇ. 0.60 ರಷ್ಟಿರುತ್ತದೆ.<br><br>ಕಳೆದ ಸಾಲಿನ ಒಟ್ಟು ಅನುತ್ಪಾದಕ ಸಾಲ(Gross NPA) ರೂ. 21631.48 ಲಕ್ಷಗಳಿದ್ದು, ವರದಿ ಸಾಲಿನ ಒಟ್ಟು ಅನುತ್ಪಾದಕ ಸಾಲ ರೂ. 20143.59 ಲಕ್ಷಗಳಿಗೆ ಹೋಲಿಸಿದಲ್ಲಿ ರೂ. 1487.89 ಲಕ್ಷ ಸಾಲ ಕಡಿಮೆಯಾಗಿರುತ್ತದೆ.<br><br>ಕಳೆದ ಸಾಲಿನ ನಿವ್ವಳ ಅನುತ್ಪಾದಕ ಸಾಲ( Net NPA) ರೂ. 2578.20 ಲಕ್ಷಗಳಿದ್ದು, ವರದಿ ಸಾಲಿನ ನಿವ್ವಳ ಅನುತ್ಪಾದಕ ಸಾಲ ರೂ. 590.31 ಲಕ್ಷಗಳಿಗೆ ಹೋಲಿಸಿದಲ್ಲಿ ರೂ. 1987.89 ಲಕ್ಷ ಕಡಿಮೆಯಾಗಿರುತ್ತದೆ.<br><br>ಆರ್.ಬಿ.ಐ ನಿರ್ದೇಶನದ ಪ್ರಕಾರ ಅನುತ್ಪಾದಕ ಆಸ್ತಿಗಳ ಮೇಲೆ ಶಾಸನ ಬದ್ಧವಾಗಿ ಮಾಡಬೇಕಾಗಿದ್ದ ಅವಕಾಶವನ್ನು ಈ ಶೀರ್ಷಿಕೆಯಡಿ ನಿರ್ವಹಿಸಿ, ಅನುತ್ಪಾದಕ ಆಸ್ತಿಗಳಿಗೆ ಸಂಬಂಧಿಸಿದಂತೆ ತಃಖ್ತೆಗಳನ್ನು ತಯಾರಿಸಿ ಪರಿಶೀಲನೆಗೆ ಹಾಜರುಪಡಿಸಿರುತ್ತಾರೆ. ಕರಡು ಮತ್ತು ಅನುಮಾನಾಸ್ಪದ ಸಾಲಗಳಿಗೆ ಕಾಯ್ದಿರಿಸಬೇಕಾದ ಪ್ರಮಾಣದಲ್ಲಿ ಅವಕಾಶವನ್ನು ಕಾಯ್ದಿರಿಸಿರುತ್ತಾರೆ.<br><br>ಬ್ಯಾಂಕಿನ ಅನುತ್ಪಾದಕ ಆಸ್ತಿಯು ಆರ್.ಬಿ.ಐ ನಿಗದಿಗೊಳಿಸಿದ ಮಿತಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿದ್ದ ಕಾರಣ ಬ್ಯಾಂಕನ್ನು, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಕಲಂ 36(1) ರಂತೆ RBI SAF ಮೇಲುಸ್ತುವಾರಿ ನಿರ್ಬಂಧನೆಗಳನ್ನು ಜೂನ್ 2021 ರಿಂದ ವಿಧಿಸಿದ್ದು, ಕಳೆದೆರೆಡು ಸಾಲುಗಳಲ್ಲಿ ಬ್ಯಾಂಕಿನ ಎನ್.ಪಿ.ಎ ಪ್ರಮಾಣ ಇಳಿಕೆಯಾದ್ದರಿಂದ ವರದಿ ವರ್ಷದಲ್ಲಿ ಆರ್.ಬಿ.ಐಯು ಬ್ಯಾಂಕನ್ನು 25-02-2026ರ ನಂತರ SAF ನಿರ್ಭಂದದಿಂದ ತೆರೆವುಗೊಳಿಸಿರುತ್ತದೆ. |
| | **(2)** | **ದಿನಾಂಕ 31-03-2026ಕ್ಕೆ ಇರುವ ಎಲ್ಲಾ ಸಾಲಗಳನ್ನು ರಿಜ಼ರ್ವ್ ಬ್ಯಾಂಕಿನ (IRAC) ಸುತ್ತೋಲೆಯಂತೆ ವರ್ಗೀಕರಿಸಲಾಗಿದೆಯೇ ?**<br>ಹೌದು, ದಿನಾಂಕ 31-03-2026ಕ್ಕೆ ಇರುವ ಎಲ್ಲಾ ಸಾಲಗಳ ರಿಜ಼ರ್ವ್ ಬ್ಯಾಂಕಿನ (IRAC) ಸುತ್ತೋಲೆಯಂತೆ ವರ್ಗೀಕರಿಸಲಾಗಿದೆ. |
| | **(3)** | **ಈ ಮೇಲಿನಂತೆ ವರ್ಗೀಕರಿಸಲಾಗಿರುವ ಅನುತ್ಪಾದಕ ಆಸ್ತಿಗಳಿಗೆ ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಅವಶ್ಯವಿರುವ ಅವಕಾಶವನ್ನು ಶತಪ್ರತಿಶತರಷ್ಟು ಕಲ್ಪಿಸಲಾಗಿದೆಯೇ ?**<br>ಈ ಮೇಲಿನಂತೆ ವರ್ಗೀಕರಿಸಲಾಗಿರುವ ಅನುತ್ಪಾದಕ ಆಸ್ತಿಗಳಿಗೆ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಅನುತ್ಪಾದಕ ಆಸ್ತಿಗಳ ಮೇಲೆ ಶಾಸನ ಬದ್ಧವಾಗಿ ಮಾಡಬೇಕಾಗಿದ್ದ ಅವಕಾಶವನ್ನು ಬ್ಯಾಂಕಿನಲ್ಲಿ ಶತಪ್ರತಿಶತರಷ್ಟು ಕಲ್ಪಿಸಲಾಗಿದೆ. |

| | |
|---|---|
| | **(4) ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಅವಶ್ಯವಿರುವ ಅವಕಾಶವನ್ನು ಕಲ್ಪಿಸುವಲ್ಲಿ ಏನಾದರು ಕೊರತೆ ಇದೆಯೇ? ಇದ್ದಲ್ಲಿ ರಕ್ಕಮುಗಳನ್ನು ಕಡ್ಡಾಯವಾಗಿ ನಮೂದಿಸುವುದು.**<br>ಕಲ್ಪಿಸಿರುವ ಅವಕಾಶಗಳಲ್ಲಿ ಯಾವುದೇ ಕೊರತೆಯಿರುವುದಿಲ್ಲ.<br><br>**(5) ಕೊರತೆ ಇರುವ ರಕ್ಕಮಿನ ಅವಕಾಶ ಕಲ್ಪಿಸಲು ಬ್ಯಾಂಕಿನ ಆಡಳಿತ ಮಂಡಳಿಯವರು ನಿರಾಕರಿಸಿದಲ್ಲಿ ಈ ಕುರಿತು ವರದಿ ಪುಟ (4) ರಲ್ಲಿ ಸೂಚಿಸಿದಂತೆ ಅರ್ಹತಾತ್ಮಕ ಅಭಿಪ್ರಾಯ ನೀಡಲಾಗಿದೆಯೇ?**<br>ಅನ್ವಯಿಸುವುದಿಲ್ಲ.<br><br>**(6) ಕಡಿಮೆ ಅವಕಾಶ ಕಲ್ಪಿಸಿರುವದರಿಂದ ಬ್ಯಾಂಕಿನ ಪ್ರಸಕ್ತ ಸಾಲಿನ ನಿವ್ವಳ ಲಾಭದ ಮೇಲೆ ಬೀರುವ ಪರಿಣಾಮ ಹಾಗೂ ಸದರಿ ನಿವ್ವಳ ಲಾಭ ಕ.ಸ.ಸಂಘಗಳ ನಿಯಮ (22) ರ ವ್ಯತಿರಿಕ್ತವಾಗಿದ್ದರಿಂದ ಪ್ರಮಾಣೀಕರಿಸದೇ ಈ ಕುರಿತು ವಿವರವಾಗಿ ವಿಮರ್ಷಿಸುವುದು :**<br>ನಮ್ಮ ಸ್ವತಂತ್ರ ಲೆಕ್ಕಪರಿಶೋಧಕರ ವರದಿಯನ್ನು ಗಮನಿಸುವುದು. |
| **8** | **ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಸುಸ್ತಿ ಇದ್ದಲ್ಲಿ ಕೆಳಕಂಡಂತೆ ವಿವರಗಳನ್ನು ನೀಡುವುದು:**<br>ಚುನಾವಣೆಗೂ ಮುನ್ನ ಒಬ್ಬರು ನಿರ್ದೇಶಕರು, ಒಬ್ಬ ನಿರ್ದೇಶಕರ ಸಂಬಂಧಿ ಮತ್ತು ಇನೊಬ್ಬ ನಿರ್ದೇಶಕರ ಆಸಕ್ತ ಸಂಸ್ಥೆಯು ಚುನಾವಣೆಗೂ ಮುನ್ನ ಸಾಲ ಪಡೆದಿರುವುದು ಕಂಡು ಬಂದಿರುತ್ತದೆ. ಸದರಿ ಯಾವುದೇ ಸಾಲಗಳು ಸುಸ್ತಿಯಾಗಿರುವುದಿಲ್ಲ. |
| **9** | **ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣದ ಬಗ್ಗೆ ವಿವರಣೆ:**<br>ಬ್ಯಾಂಕು 31-03-2026ಕ್ಕೆ ನೀಡಿರುವ ಒಟ್ಟು ಸಾಲ ರೂ. 117338.26 ಲಕ್ಷ ಸಾಲಗಳಿದ್ದು, ಅದರಲ್ಲಿ 1231 ಪ್ರಕರಣಗಳಿಂದ ರೂ. 69162.06 ಲಕ್ಷಗಳನ್ನು ಆದ್ಯತಾ ವಲಯದ ಸಾಲವೆಂದು ವರ್ಗೀಕರಿಸಿರುತ್ತಾರೆ.<br><br>ಆರ್.ಬಿ.ಐ ಸುತ್ತೋಲೆ ಸಂಖ್ಯೆ RBI/FIDD/2024-25/128 Master Directions FIDD.CO.PSD.BC. 13/04.09.001/2024-25 ದಿನಾಂಕ March 24, 2025 ರಂತೆ ಆದ್ಯತಾ ವಲಯ, ದುರ್ಬಲ ವರ್ಗ ಹಾಗೂ ಮೈಕ್ರೋ ಎಂಟರ್‌ಪ್ರೈಸಸ್‌ರವರಿಗೆ ಬ್ಯಾಂಕಿನ ಹಿಂದಿನ ವರ್ಷದ ಸಾಲದ ANBC ಮೊಬಲಗಿನ ಮೇಲೆ ಕ್ರಮವಾಗಿ ಶೇ.60, ಶೇ.12 ಹಾಗೂ ಶೇ.7.5 ರಷ್ಟು ಸಾಲ ನೀಡಬೇಕಿರುತ್ತದೆ.<br><br>ಬ್ಯಾಂಕು ವರದಿ ಸಾಲಿನ ಮೊದಲ ಮೂರು ತ್ರೈಮಾಸಿಕಗಳಲ್ಲಿ ಒಟ್ಟಾರೆ ಆದ್ಯತಾ ವಲಯದ ಗುರಿ ಸಾಧಿಸಿರುವುದಿಲ್ಲ. ನಾಲ್ಕನೇ ತ್ರೈಮಾಸಿಕದ ಅಂತ್ಯಕ್ಕೆ ಹೊಂದಾಣಿಕೆ ಮಾಡಿದ ನಿವ್ವಳ ಬ್ಯಾಂಕ್ ಸಾಲ (ANBC) ರೂ. 109588.27 ಲಕ್ಷಗಳಿದ್ದು ಆದ್ಯತಾ ವಲಯಕ್ಕೆ ಬ್ಯಾಂಕು ರೂ. 69162.06 ಲಕ್ಷ ಸಾಲ ನೀಡಿದ್ದು ಅದರಂತೆ ಶೇ. 63.11 ರಷ್ಟು ಸಾಲ ಆದ್ಯತಾ ವಲಯಕ್ಕೆ ನೀಡಿದಂತೆ ಆಗುತ್ತದೆ. ಒಟ್ಟಾರೆ ಆದ್ಯತಾ ವಲಯದ ಗುರಿ ಸಾಧನೆಗೆ, ನಾಲ್ಕು ತ್ರೈಮಾಸಿಕದ ಸರಾಸರಿಯನ್ನು ಪರಿಗಣಿಸಿ ಈ ಕೊರತೆಯನ್ನು ಸರಿದೂಗಿಸಲು ಆರ್.ಬಿ.ಐ ಸುತ್ತೋಲೆಯಂತೆ ರೂ. 200.00 ಕೋಟಿಗಳಿಗೆ PSL-General Bond ಖರೀದಿಸುವ ಮೂಲಕ ಆದ್ಯತಾ ವಲಯದ ಗುರಿ ಸಾಧಿಸಿರುತ್ತಾರೆ. |

| | |
|---|---|
| | ದಿನಾಂಕ 31-03-2026 ಕ್ಕೆ ಸಾಲಿನ ದುರ್ಬಲ ವರ್ಗದವರಿಗೆ ರೂ. 13567.05 ಲಕ್ಷ ಸಾಲ ಹಾಗು ಮೈಕ್ರೋ ಎಂಟರ್ ಪ್ರೈಸಸ್‌ಗೆ ರೂ. 28058.78 ಲಕ್ಷ ಸಾಲ ನೀಡಿದ್ದು, ಹಿಂದಿನ ವರ್ಷದ ANBCಗೆ ಹೊಲಿಸಿದರೆ ಕ್ರಮವಾಗಿ ಶೇ. 12.38, ಶೇ. 25.60 ರಷ್ಟಿದ್ದು ಆರ್.ಬಿ.ಐ ನಿಗಧಿಪಡಿಸಿದ ಗುರಿ ಸಾಧಿಸಿರುತ್ತಾರೆ. |
| **10** | **ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳಲ್ಲಿ ಸಾಲಾಖೈರಿಗೆ ಬರಬೇಕಾದ ಬಾಕಿ ಮೊತ್ತದ ಪ್ರಮಾಣದ ಬಗ್ಗೆ:** ವರ್ಷಾಂತ್ಯಕ್ಕೆ ಬ್ಯಾಂಕು ನೀಡಿದ ಅಂಕಿ ಅಂಶಗಳ ಆಧಾರದಲ್ಲಿ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲವು ರೂ. 13567.05 ಲಕ್ಷಗಳಿರುತ್ತದೆ. ಸದರಿ ಬಾಬ್ತು 327 ಪ್ರಕರಣಗಳಿಂದ ಕೂಡಿರುತ್ತದೆ. |
| **11** | **ಸಾಲಾಖೈರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣ:** ವರ್ಷಾಂತ್ಯಕ್ಕೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲದ ಶೇಕಡಾ ಪ್ರಮಾಣವು ಶೇ. 19.62 ಇರುತ್ತದೆ ಹಾಗೂ ಒಟ್ಟು ಹಿಂದಿನ ವರ್ಷದ ANBCಗೆ ಹೋಲಿಸಿದಲ್ಲಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲ ಪ್ರಮಾಣ ಶೇ. 12.38 ರಷ್ಟಿದ್ದು ಆರ್.ಬಿ.ಐ ನಿಗದಿಪಡಿಸಿರುವ ಮಿತಿ ಶೇ. 12.00ಕ್ಕಿಂತ ಹೆಚ್ಚಾಗಿರುತ್ತದೆ. |

**<u>ಸಾಲಗಳಲ್ಲಿ ಗಮನಿಸಲಾದ ನ್ಯೂನತೆಗಳು:</u>**

**ಸಾಲ ನೀಡಿಕೆಯಲ್ಲಿ ಗಮನಿಸಲಾದ ನ್ಯೂನತೆ ಉಪನಿಯಮಕ್ಕೆ ವಿರುದ್ಧವಾಗಿ ನೀಡಲಾಗಿರುವ ಸಾಲ ಜೋಡಣೆ ಷೇರು ಪಡೆಯದೇ ಇರುವ ಬಗ್ಗೆ ಬಡ್ಡಿ ಆಕರಣೆ ಸರಿ ಇಲ್ಲದ ಬಗ್ಗೆ ಪೂರ್ಣ ವಿಮರ್ಶೆ ನೀಡುವುದು:**

ಪರೀಕ್ಷಾರ್ಥವಾಗಿ ಸಾಲಗಳ ಕಡತಗಳನ್ನು ಪರಿಶೀಲಿಸಲಾಗಿ ಉಪವಿಧಿಗೆ ವಿರುದ್ಧವಾಗಿ ಸಾಲ ನೀಡಿರುವುದಿಲ್ಲ. ಎಲ್ಲಾ ಸಾಲಗಳಿಗೆ ಜೋಡಣೆ ಷೇರು ಪಡೆದಿರುತ್ತಾರೆ. ಬಡ್ಡಿ ಆಕರಣೆಯನ್ನು ಪರಿಶೀಲಿಸಲಾಗಿದೆ ಹಾಗೂ ಆಕರಣೆ ಸರಿ ಇರುತ್ತದೆ.

**(26) ಬ್ಯಾಂಕಿನ ಸ್ಥಿರಾಸ್ತಿ-ಚರಾಸ್ತಿಗಳ ಪರಿಶೀಲನೆ :**

**ಎ ಸ್ಥಿರಾಸ್ತಿ:**

**<u>ಬ್ಯಾಂಕು ಹೊಂದಿರುವ ಸ್ಥಿರಾಸ್ತಿಯ ವಿವರಗಳು :</u>**

| ಕ್ರ ಸಂ | ನಿವೇಶನ ಮತ್ತು ಕಟ್ಟಡ | ವಿವರ | ವಿಸ್ತೀರ್ಣ (ಚದುರ ಅಡಿ) | ಮೊತ್ತ ರೂ.ಗಳಲ್ಲಿ |
|---|---|---|---|---|
| 1 | ಕೇಂದ್ರ ಕಚೇರಿ ತುಮಕೂರು. | ನಿವೇಶನ ವಿಸ್ತೀರ್ಣ<br>ಕಟ್ಟಡದ ವಿಸ್ತೀರ್ಣ (ಎಲ್ಲಾ ಮಹಡಿಗಳು ಸೇರಿ) | 11022<br>25920 | 23,41,29,196.00 |
| 2 | ಎ.ಪಿ.ಎಂ.ಸಿ ಯಾರ್ಡ್ ಶಾಖೆ ತುಮಕೂರು. | ನಿವೇಶನ ವಿಸ್ತೀರ್ಣ<br>ಕಟ್ಟಡದ ವಿಸ್ತೀರ್ಣ (ಎಲ್ಲಾ ಮಹಡಿಗಳು ಸೇರಿ) | 1307<br>2804 | 60,70,971.00 |
| 3 | ರಾಘವೇಂದ್ರ ನಗರ ಶಾಖೆ ತುಮಕೂರು. | ನಿವೇಶನ ವಿಸ್ತೀರ್ಣ<br>ಕಟ್ಟಡದ ವಿಸ್ತೀರ್ಣ (ಎಲ್ಲಾ ಮಹಡಿಗಳು ಸೇರಿ) | 2400<br>2107 | 1,80,35,614.00 |

| | | | | |
|---|---|---|---|---|
| 4 | ಜೆ.ಸಿ.ರಸ್ತೆ ಶಾಖೆ ತುಮಕೂರು. | ನಿವೇಶನ ವಿಸ್ತೀರ್ಣ ಕಟ್ಟಡದ ವಿಸ್ತೀರ್ಣ (ಎಲ್ಲಾ ಮಹಡಿಗಳು ಸೇರಿ) | 11238<br>9296 | 5,72,72,573.00 |
| | **ಒಟ್ಟು** | | | **31,55,08,354.00** |

1. **ಲೆಕ್ಕ ಪರಿಶೋಧನಾ ಕಾಲಕ್ಕೆ ಇವುಗಳ ದಾಖಲಾತಿಗಳು ಹಾಗೂ 'ಕ''ಡ' ಉತಾರೆ ಪರಿಶೀಲಿಸಿದ ಬಗ್ಗೆ ವಿಮರ್ಶೆ:**

ನಿವೇಶನ ಮತ್ತು ಕಟ್ಟಡಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಪ್ರತ್ಯೇಕ ಕಡತದಲ್ಲಿ ನಿರ್ವಹಿಸಿರುತ್ತಾರೆ. 'ಕ''ಡ' ಅನ್ವಯಿಸುವುದಿಲ್ಲ.

ಬ್ಯಾಂಕು ತುಮಕೂರಿನ ಬಿ.ಎಚ್. ರಸ್ತೆ ಎ.ಪಿ.ಎಂ.ಸಿ ಯಾರ್ಡ್ ರಾಘವೇಂದ್ರನಗರ ಹಾಗೂ ವಿನಾಯಕ ನಗರ ಹೀಗೇ ಒಟ್ಟು 4 ಸ್ವಂತ ಕಟ್ಟಡಗಳನ್ನು ಹೊಂದಿದ್ದು ಸದರಿ ಕಟ್ಟಡಗಳಲ್ಲಿ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತಿರುತ್ತದೆ.

**ಭದ್ರತಾ ಕೊಠಡಿ :** ಸಾಲು ಪ್ರಾರಂಭಿಕ ಭದ್ರತಾ ಕೊಠಡಿ ಮೌಲ್ಯ ರೂ. 16,94,402.00 ಗಳಿದ್ದು ವರದಿ ಸಾಲಿನಲ್ಲಿ ಜಯನಗರ ಶಾಖೆಯನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸಿದ್ದು, ನೂತನ ಕಟ್ಟಡಕ್ಕೆ ರೂ. 10,09,357.00ಗಳ ಭದ್ರತಾ ಕೊಠಡಿ ಖರೀದಿಸಿದ್ದು, ಹಳೆಯ ಕಟ್ಟಡದಲ್ಲಿದ್ದ ರೂ. 2,51,159.00 ಮೌಲ್ಯದ ಭದ್ರತಾ ಕೊಠಡಿಯನ್ನು write off ಮಾಡಲಾಗಿದ್ದು ಹಾಗೂ ಶೇ. 10 ರಂತೆ ರೂ. 1,99,260.00ಗಳ ಸವಕಳಿ ವಜಾ ಮಾಡಿದ್ದು ದಿನಾಂಕ 31-03-2026 ಕ್ಕೆ ಇದರ ಮೌಲ್ಯ ರೂ. 22,53,340.00 ಗಳಿರುತ್ತದೆ.

ಮೇಲ್ಕಂಡ ಬಾಬ್ತು 9 ಶಾಖೆಗಳಿಗೆ ಸಂಬಂಧಿಸಿದ ಬಾಬ್ತಾಗಿರುತ್ತದೆ. ಈ ಶಾಖೆಗಳ ಆರ್ಥಿಕ ತಃಖ್ತೆಗಳಲ್ಲಿ Strong Room ಎಂದು ಘೋಷಿಸಿಕೊಂಡಿದ್ದರಿಂದ ವಿವರಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗಿದೆ, ಉಳಿದ ಶಾಖೆಗಳು ಭದ್ರತಾ ಕೊಠಡಿ ಬಾಬ್ತುಗಳನ್ನು ಪೀಠೋಪಕರಣ ಖಾತೆಯಲ್ಲಿ ತೋರಿಸಿಕೊಂಡಿರುತ್ತಾರೆ.

2 **ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ?**

ಸ್ಥಿರಾಸ್ತಿ ರಿಜಿಸ್ಟರನ್ನು ಪ್ರತ್ಯೇಕ ವಹಿಯಲ್ಲಿ ನಿರ್ವಹಿಸಿರುತ್ತಾರೆ.

3 **ಎಲ್ಲಾ ಸ್ಥಿರಾಸ್ತಿಗಳು ಬ್ಯಾಂಕಿನ ಹೆಸರಿನಲ್ಲಿವೆಯೇ?**

ಬ್ಯಾಂಕಿನ ಎಲ್ಲಾ ಸ್ಥಿರಾಸ್ತಿಗಳು ಬ್ಯಾಂಕಿನ ಹೆಸರಿನಲ್ಲಿರುತ್ತದೆ.

4 **ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ?**

ವರದಿ ವರ್ಷದಲ್ಲಿ ಕೇಂದ್ರ ಕಚೇರಿ ಕಟ್ಟಡದ ಮೇಲೆ ರೂ. 10,00,00,000.00 ಮತ್ತು ಎ.ಪಿ.ಎಂ.ಸಿ ಯಾರ್ಡ್ ಶಾಖೆಯ ಕಟ್ಟಡದ ಮೇಲೆ ರೂ. 63,00,000.00 ಮತ್ತು ರಾಘವೇಂದ್ರ ನಗರ ಶಾಖೆಯ ಕಟ್ಟಡದ ಮೇಲೆ ರೂ. 43,00,000.00 ಗಳಿಗೆ ವಿಮೆ ಮಾಡಿಸಿದ್ದು ಸದರಿ ಬಾಬ್ತಿಗೆ ವರದಿ ವರ್ಷದಲ್ಲಿ ರೂ. 80,953.00ಗಳ ಪ್ರೀಮಿಯಂ ಪಾವತಿಸಿದ್ದು ವಿಮೆಯು ದಿನಾಂಕ 08-12-2026 ರವರೆಗೆ ಚಾಲ್ತಿಯಲ್ಲಿರುತ್ತದೆ.

ಜೆ. ಸಿ. ರಸ್ತೆ ಶಾಖೆಯ ಕಟ್ಟಡದ ಮೇಲೆ ಪ್ರಸಕ್ತ ಸಾಲಿನಲ್ಲಿ ರೂ. 3,14,00,000.00ಗಳಿಗೆ ವಿಮೆ ಮಾಡಿಸಿದ್ದು ವಿಮೆ ಬಾಬ್ತು ರೂ. 12,147.00 ಭರಿಸಿದ್ದು ವಿಮೆಯು ದಿನಾಂಕ 28-09-2026 ರವರೆಗೆ ಚಾಲ್ತಿಯಲ್ಲಿರುತ್ತದೆ.

5 **ಸ್ಥಿರಾಸ್ತಿಗಳ ಮೇಲೆ ನಿಬಂಧಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಶೆ:**

ವರದಿ ವರ್ಷದಲ್ಲಿ ಆದಾಯ ತೆರಿಗೆ ಕಾಯ್ದೆಯನ್ವಯ ಶೇ. 10ರಂತೆ ಸವಕಳಿ ರೂ. 21,94,130.00ಗಳನ್ನು ತೆಗೆದಿರುತ್ತಾರೆ. ಬ್ಯಾಂಕು ಮರು ಮೌಲ್ಯಮಾಪನ ನಿಧಿಯನ್ನು(ಕಟ್ಟಡ & ನಿವೇಶನ) ಹೊಂದಿದ್ದು AS 10 ರ ಪ್ರಕಾರ ಮರು ಮೌಲ್ಯಮಾಪನ ನಿಧಿಯನ್ನು ಮತ್ತು ಕಟ್ಟಡದ ಮೌಲ್ಯವನ್ನು Amortize ಮಾಡಿರುವುದಿಲ್ಲ.

**ಸಮಾಧಾನ :– ಪ್ರಸಕ್ತ ಸಾಲಿನಲ್ಲಿ ಕ್ರಮವಿಡಲಾಗುವುದು.**

6 **ಗೋದಾಮುಗಳಿದ್ದಲ್ಲಿ ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ:**

ಗೋದಾಮು ಯಾವುದೂ ಇರುವುದಿಲ್ಲ.

7 **ಕಟ್ಟಡಗಳನ್ನು ಬಾಡಿಗೆ ನೀಡಿದ್ದಲ್ಲಿ ಅವುಗಳ ಮೇಲೆ ಸರಿಯಾಗಿ ಬಾಡಿಗೆ ಸ್ವೀಕೃತಿ ಯಾಗುತ್ತಿದೆಯೇ? ಕಾಲಕಾಲಕ್ಕೆ ಬಾಡಿಗೆ ಪರಿಷ್ಕರಣೆ ಮಾಡಲಾಗುತ್ತಿದೆಯೇ?**

ಯಾವುದೇ ಕಟ್ಟಡವನ್ನು ಬಾಡಿಗೆಗೆ ನೀಡಿರುವುದಿಲ್ಲ.

8 **ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ ಅದು ನಿಯಮಾನುಸಾರ ಮಾಡಲಾಗಿದೆಯೇ? ಉಲ್ಲಂಘನೆಗಳಿದ್ದಲ್ಲಿ ವಿವರಿಸುವುದು:**

ವರದಿ ಸಾಲಿನಲ್ಲಿ ನೂತನವಾಗಿ ಯಾವುದೇ ಕಟ್ಟಡ ನಿರ್ಮಾಣ ಮಾಡಿರುವುದಿಲ್ಲ.

9 **ವರದಿ ಸಾಲಿನಲ್ಲಿ ವಿಲೇವಾರಿ ಮಾಡಿರುವ ಸ್ಥಿರಾಸ್ತಿಗಳ ಕುರಿತು ವಿಮರ್ಶೆ:**

ಯಾವುದೇ ಸ್ಥಿರಾಸ್ತಿಗಳನ್ನು ವಿಲೇವಾರಿ ಮಾಡಿರುವುದಿಲ್ಲ.

10 **ಸ್ಥಿರಾಸ್ತಿಯ ತೆರಿಗೆಯನ್ನು ತಹಲದವರೆಗೂ ಪಾವತಿಸಲಾಗಿದೆಯೇ?**

ಹೌದು ತೆರಿಗೆಯನ್ನು ಪಾವತಿಸಲಾಗಿದೆ. ವರದಿ ವರ್ಷದಲ್ಲಿ ತೆರಿಗೆ ಪಾವತಿಸಿರುವುದರ ವಿವರ ಈ ಕೆಳಕಂಡಂತಿರುತ್ತದೆ:– **(ಮೊತ್ತ ರೂ. ಗಳಲ್ಲಿ)**

| ಕ್ರ.ಸಂ | ವಿವರ | ಆಸ್ತಿ ತೆರಿಗೆ | ನೀರು & ಯು.ಜಿ.ಡಿ ತೆರಿಗೆ |
|---|---|---|---|
| 1 | ಕೇಂದ್ರ ಕಚೇರಿ ಕಟ್ಟಡದ ಬಾಬ್ತು | 5,08,043.00 | 13,080.00 |
| 2 | ರಾಘವೇಂದ್ರನಗರ ಶಾಖೆ ಕಟ್ಟಡದ ಬಾಬ್ತು | 32,694.00 | 12,240.00 |
| 3 | ಎ.ಪಿ.ಎಂ.ಸಿ ಯಾರ್ಡ್ ಶಾಖೆ ಕಟ್ಟಡದ ಬಾಬ್ತು | 40,800.00 | 0.00 |
| 4 | ಜೆ. ಸಿ. ರಸ್ತೆ ಶಾಖೆ ಕಟ್ಟಡದ ಬಾಬ್ತು | 1,57,305.00 | 2,400.00 |
| | **ಒಟ್ಟು** | **7,38,842.00** | **27,720.00** |

**ಬಿ ಚರಾಸ್ತಿ**

**1 ಬ್ಯಾಂಕು ಹೊಂದಿರುವ ಚರಾಸ್ತಿ ವಿವರಗಳು:**

| ಕ್ರ.ಸಂ | ವಿವರ | ಮೊತ್ತ ರೂ.ಗಳಲ್ಲಿ |
|---|---|---|
| 1 | ಪೀಠೋಪಕರಣಗಳು | 2,03,15,629.00 |
| 2 | ಗಣಕಯಂತ್ರ ಎ.ಟಿ.ಎಂ ಮತ್ತು ಇತರೆ ಸಲಕರಣೆಗಳು | 20,52,113.00 |
| 3 | ಕಚೇರಿ ಉಪಕರಣಗಳು | 24,15,380.00 |
| 4 | ವಾಹನಗಳು | 65,48,584.00 |
| 5 | ಸೋಲಾರ್ ಗ್ರಿಡ್ ಪವರ್ ಪ್ಲಾಂಟ್ | 2,37,037.00 |
| | **ಒಟ್ಟು** | **3,15,68,743.00** |

**2 ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ?**

ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆ. ವರ್ಷಾಂತ್ಯಕ್ಕೆ ಕೇಂದ್ರ ಕಚೇರಿಯ ಅಧಿಕಾರಿಗಳು ಪರಿಶೀಲಿಸಿರುತ್ತಾರೆ.

**3 ಎಲ್ಲಾ ಚರಾಸ್ತಿಗಳು ಬ್ಯಾಂಕಿನ ಹೆಸರಿನಲ್ಲಿವೆಯೇ?**

ಹೌದು ಎಲ್ಲಾ ಚರಾಸ್ತಿಗಳು ಬ್ಯಾಂಕಿನ ಹೆಸರಿನಲ್ಲಿರುತ್ತದೆ. ಕಚೇರಿ ಹೊಂದಿರುವ ಪಿಠೋಪಕರಣಗಳ ಮೇಲೆ ಬ್ಯಾಂಕಿನ ಹೆಸರು ಹಾಗೂ ಕ್ರಮಾಂಕಗಳನ್ನು ನಮೂದಿಸಿರುತ್ತಾರೆ.

**4 ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ?**

ಕೇಂದ್ರ ಕಚೇರಿಯಲ್ಲಿ ಎಲ್ಲಾ ಶಾಖೆಗಳನ್ನು ಒಳಗೊಂಡಂತೆ ಚರಾಸ್ತಿಗಳ ಮೇಲೆ ರೂ. 11,00,00,000.00 ಗಳಿಗೆ ವಿಮೆ ಮಾಡಿಸಿದ್ದು ವಿಮೆ ದಿನಾಂಕ 04-04-2027 ರವರೆಗೆ ಚಾಲ್ತಿಯಲ್ಲಿರುತ್ತದೆ. ವಾಹನಗಳ ಹಾಗೂ ಸೋಲಾರ್ ಗ್ರಿಡ್ ಪವರ್ ಪ್ಲಾಂಟ್ ಮೇಲೆ ಪ್ರತ್ಯೇಕವಾಗಿ ವಿಮೆ ಮಾಡಿಸಲಾಗಿದೆ.

**5 ಚರಾಸ್ತಿಗಳ ಮೇಲೆ ನಿಬಂಧಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಶೆ:**

ಆದಾಯ ತೆರಿಗೆ ಕಾಯ್ದೆಯಂತೆ ಸವಕಳಿ ತೆಗೆದಿರಿಸುವ ಪದ್ಧತಿ ಅನುಸರಿಸುತ್ತಿದ್ದು ವರದಿ ವರ್ಷದಲ್ಲಿ ರೂ. 46,23,720.00ಗಳ ಸವಕಳಿ ತೆಗೆದಿರುತ್ತಾರೆ.

**(ಮೊಬಲಗು ರೂ. ಗಳಲ್ಲಿ)**

| ಕ್ರ ಸಂ | ವಿವರಗಳು | 01-04-2025 ರಲ್ಲಿದ್ದಂತೆ | ಪ್ರಸಕ್ತ ಸಾಲಿನಲ್ಲಿ ಖರೀದಿ | ಪ್ರಸಕ್ತ ಸಾಲಿನಲ್ಲಿ ಮಾರಾಟ/ವಜಾ/ ವರ್ಗಾವಣೆ | ಸವಕಳಿ ಶೇ. | ಸವಕಳಿ ಮೊತ್ತ | 31-03-2026 ರಲ್ಲಿದ್ದಂತೆ |
|---|---|---|---|---|---|---|---|
| 1 | ಗಣಕಯಂತ್ರ ಎ.ಟಿ.ಎಂ ಮತ್ತು ಇತರೆ ಸಲಕರಣೆಗಳು | 22,52,376.00 | 6,94,244.00 | 7,284.00 | 40 | 8,87,223.00 | 20,52,113.00 |
| 2 | ವಾಹನಗಳು | 46,47,841.00 | 39,52,262.00 | 10,11,297.00 | 15 | 10,40,222.00 | 65,48,584.00 |
| 3 | ಪೀಠೋಪಕರಣ ಗಳು | 2,14,35,529.00 | 20,86,199.00 | 10,60,509.00 | 10 | 21,45,590.00 | 2,03,15,629.00 |
| 4 | ಕಚೇರಿ ಉಪಕರಣಗಳು | 24,03,521.00 | 4,04,520.00 | 0.00 | 15 | 3,92,661.00 | 24,15,380.00 |
| 5 | ಸೋಲಾರ್ ಗ್ರಿಡ್ ಪವರ್ ಪ್ಲಾಂಟ್ | 3,95,061.00 | 0.00 | 0.00 | 40 | 1,58,024.00 | 2,37,037.00 |
| | ಒಟ್ಟು | 3,11,34,328.00 | 71,37,225.00 | 20,79,090.00 | | 46,23,720.00 | 3,15,68,743.00 |

ಬ್ಯಾಂಕಿನ ಕೇಂದ್ರ ಕಚೇರಿ ಹಾಗೂ ಶಾಖೆಗಳಲ್ಲಿರುವ ಚರಾಸ್ತಿಗಳನ್ನು ಆಗಿಂದಾಗ್ಗೆ ಅವುಗಳ ಪ್ರತ್ಯಕ್ಷತೆ ಹಾಗೂ ಉಪಯುಕ್ತತೆ ಬಗ್ಗೆ ಬ್ಯಾಂಕಿನ ಅಧಿಕಾರಿಗಳಿಂದ ವರದಿ ಪಡೆದು ನಂತರ ಅದರಂತೆ ಕ್ರಮವಿಡತಕ್ಕದ್ದು.

| | | |
|---|---|---|
| | | **ವರದಿ ಸಾಲಿನಲ್ಲಿ ವಿಲೇವಾರಿ ಮಾಡಿರುವ ಚರಾಸ್ತಿಗಳ ಕುರಿತು ವಿಮರ್ಶೆ:**<br>ವರದಿ ಸಾಲಿನಲ್ಲಿ ಈ ಕೆಳಕಂಡ ಶಾಖೆಗಳ ಚರಾಸ್ತಿಗಳನ್ನು ವಿಲೇವಾರಿ ಮಾಡಲಾಗಿರುತ್ತದೆ :<br>1. ವರದಿ ಸಾಲಿನಲ್ಲಿ ಸದಾಶಿವನಗರ ಶಾಖೆಗೆ ವಿನಿಮಯ ಆಯ್ಕೆಯಲ್ಲಿ (Buyback Option) ಹೊಸ ಬ್ಯಾಟರಿಗಳನ್ನು ಖರೀದಿಸಿದ್ದು, ರೂ. 35,498.00 ಗಳ ಲಾಭ ಬಂದಿರುತ್ತದೆ.<br>2. ವರದಿ ಸಾಲಿನಲ್ಲಿ ಇಂದಿರಾನಗರ ಶಾಖೆಗೆ ವಿನಿಮಯ ಆಯ್ಕೆಯಲ್ಲಿ (Buyback Option) ಹೊಸ ಬ್ಯಾಟರಿಗಳನ್ನು ಖರೀದಿಸಿದ್ದು, ರೂ. 33,403.00ಗಳ ಲಾಭ ಬಂದಿರುತ್ತದೆ.<br>3. ವರದಿ ಸಾಲಿನಲ್ಲಿ ಹೆಚ್.ಎಸ್.ಆರ್ ಲೇಔಟ್ ಶಾಖೆಗೆ ವಿನಿಮಯ ಆಯ್ಕೆಯಲ್ಲಿ (Buyback Option) ಹೊಸ ಬ್ಯಾಟರಿಗಳನ್ನು ಖರೀದಿಸಿದ್ದು ರೂ. 32,315.00 ಗಳ ಲಾಭ ಬಂದಿರುತ್ತದೆ ಹಾಗೂ ರೂ. 100.00ರ ಮೌಲ್ಯದ UPS ಅನ್ನು write off ಮಾಡಿರುತ್ತಾರೆ.<br>4. ವರದಿ ಸಾಲಿನಲ್ಲಿ ಸದಾಶಿವನಗರ ಶಾಖೆಯ ಹಳೆಯ ನಾಮಫಲಕವನ್ನು(Glow Sign Board) ರೂ. 1,550.00ಗಳಿಗೆ ಮಾರಾಟ ಮಾಡಿದ್ದು, ಇದರಿಂದ ರೂ. 2,064.00 ಗಳ ನಷ್ಟ ಉಂಟಾಗಿರುತ್ತದೆ.<br>5. ವರದಿ ಸಾಲಿನಲ್ಲಿ ಜಯನಗರ ಶಾಖೆಯನ್ನು ನೂತನ ಕಟ್ಟಡಕ್ಕೆ ಸ್ಥಳಾಂತರಿಸಿದ್ದು, ಹಳೆಯ ಶಾಖೆಯ ಕಟ್ಟಡದಲ್ಲಿದ್ದ ರೂ. 3,19,485.00 ಮೌಲ್ಯದ ಪೀಠೋಪಕರಣಗಳನ್ನು write off ಮಾಡಿ, ಉಳಿದ ರೂ. 22,578.00 ಮೌಲ್ಯದ ಪೀಠೋಪಕರಣಗಳನ್ನು ವಿವಿಧ ಶಾಖೆಗಳಿಗೆ ವರ್ಗಾಯಿಸಿರುತ್ತಾರೆ.<br>6. ದಿನಾಂಕ 01-04-2025 ರಿಂದ ಬಿ ವಿ ಕೆ ಐಯ್ಯಂಗಾರ್ ಶಾಖೆಯ ಬ್ಯಾಂಕಿಂಗ್ ವ್ಯವಹಾರವನ್ನು ಸ್ಥಗಿತಗೊಳಿಸಿದ್ದು, ಶಾಖೆಯಲ್ಲಿನ ರೂ. 6,48,053.00 ಮೌಲ್ಯದ ಪೀಠೋಪಕರಣಗಳನ್ನು write off ಮಾಡಿ, ಉಳಿದ ರೂ. 1,45,544.00 ಮೌಲ್ಯದ ಪೀಠೋಪಕರಣಗಳನ್ನು ವಿವಿಧ ಶಾಖೆಗಳಿಗೆ ವರ್ಗಾಯಿಸಿರುತ್ತಾರೆ.<br>**ಅನುಪಯುಕ್ತ ಚರಾಸ್ತಿಗಳ ಬಗ್ಗೆ ಬ್ಯಾಂಕು ಕೈಗೊಂಡಿರುವ ಕ್ರಮಗಳ ಕುರಿತು ವಿಮರ್ಶೆ :**<br>ಅನುಪಯುಕ್ತ ಚರಾಸ್ತಿಗಳ ಬಗ್ಗೆ ಕ್ರಮವಿಡಲಾಗಿದೆ. |
| | 6 | **ಬ್ಯಾಂಕು ವಾಹನ ಹೊಂದಿದ್ದಲ್ಲಿ ಅದರ ಸಂಪೂರ್ಣ ವಿವರ ಹಾಗೂ ವರದಿ ಸಾಲಿನಲ್ಲಿ ಇವುಗಳ ಕುರಿತು ಆಗಿರುವ ವೆಚ್ಚದ ಕುರಿತು ವಿಮರ್ಶೆ. ಅದರ ಬಳಕೆಯ ಕುರಿತು ಲಾಗ್ ಪುಸ್ತಕ ಬರೆಯಲಾಗಿದೆಯೇ? ವಾಹನವು ಪ್ರತಿ ಲೀಟರ್ ಇಂಧನಕ್ಕೆ ಕ್ರಮಿಸಿರುವ ಸರಾಸರಿ ದೂರ?**<br>ಬ್ಯಾಂಕು 4 ನಾಲ್ಕು ಚಕ್ರದ ವಾಹನ ಹಾಗೂ 32 ದ್ವಿಚಕ್ರ ವಾಹನ ಹೊಂದಿದ್ದು ವಿವರ ಈ ಕೆಳಕಂಡಂತಿರುತ್ತದೆ :– |

| ಕ್ರಮ ಸಂಖ್ಯೆ | ಶಾಖೆಯ ಹೆಸರು | ವಿವರಗಳು |
|---|---|---|
| 1 | ಕೇಂದ್ರ ಕಚೇರಿ | ಹೋಂಡಾ ಆಕ್ಟೀವಾ – ಕೆ ಎ 06 ಇ ಎಕ್ಸ್ 3855 |
| 2 | ಕೇಂದ್ರ ಕಚೇರಿ | ಮಾರುತಿ ಸಿಯಾಜ್. – ಕೆ ಎ 06 ಪಿ 5372 |
| 3 | ಕೇಂದ್ರ ಕಚೇರಿ | ಟಯೋಟಾ ಇನ್ನೋವಾ ಹೈಕ್ರಾಸ್ ಕೆ ಎ 02 ಎಂ ಡಬ್ಲ್ಯು 5547 |
| 4 | ಕೇಂದ್ರ ಕಚೇರಿ | ಮಹೇಂದ್ರ ಬೊಲೆರೋ ಕೆ ಎ 02 ಎಂ ಡಬ್ಲ್ಯು 8977 |
| 5 | ಕೇಂದ್ರ ಕಚೇರಿ | ಟಾಟಾ ಪಂಚ್ ಈವಿ(EV) ಕೆ ಎ 06 ಎಂ ಸಿ 1549 |
| 6 | ಕೇಂದ್ರ ಕಚೇರಿ | ಟಿ ವಿ ಎಸ್ ಐ ಕ್ಯೂಬ್ (EV) ಕೆ ಎ 06 ಎಚ್ ವೈ 3864 |
| 7 | ಕೇಂದ್ರ ಕಚೇರಿ | ಟಿ ವಿ ಎಸ್ ಐ ಕ್ಯೂಬ್ (EV) ಕೆ ಎ 06 ಎಚ್ ವೈ 6597 |
| 8 | ಎಸ್ ಎಸ್ ಪುರಂ ಶಾಖೆ | ಟಿ ವಿ ಎಸ್ ಐ ಕ್ಯೂಬ್ (EV) ಕೆ ಎ 06 ಎಚ್ ವೈ 3866 |
| 9 | ಜೆ ಸಿ ರಸ್ತೆ ಶಾಖೆ | ಟಿ ವಿ ಎಸ್ ಐ ಕ್ಯೂಬ್ (EV) ಕೆ ಎ 06 ಎಚ್ ವೈ 3868 |
| 10 | ರಾಘವೇಂದ್ರ ನಗರ ಶಾಖೆ | ಟಿ ವಿ ಎಸ್ ಐ ಕ್ಯೂಬ್ (EV) ಕೆ ಎ 06 ಎಚ್ ವೈ 3867 |

| | | |
|---|---|---|
| 11 | ಸದಾಶಿವ ನಗರ ಶಾಖೆ | ಟಿ ವಿ ಎಸ್ ಐ ಕ್ಯೂಬ್ (EV) ಕೆ ಎ 06 ಎಚ್ ವೈ 3865 |
| 12 | ತಿಪಟೂರು ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಪಿ 6511 |
| 13 | ಶಿರಾ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಜೆ 4566 |
| 14 | ಎಪಿಎಂಸಿ ಯಾರ್ಡ್ ಶಾಖೆ | ಟಿ ವಿ ಎಸ್ ಐ ಕ್ಯೂಬ್ (EV) ಕೆ ಎ 06 ಎಚ್ ವೈ 6601 |
| 15 | ರಾಜಾಜಿನಗರ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಎಲ್ 2866 |
| 16 | ರಾಜಾಜಿನಗರ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಹೆಚ್ ಡಿ 2460 |
| 17 | ಕೆ ಆರ್ ಮೊಹಲ್ಲಾ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಜೆ 4659 |
| 18 | ಕೆ ಆರ್ ಮೊಹಲ್ಲಾ ಶಾಖೆ | ಟಿ ವಿ ಎಸ್ ಐ ಕ್ಯೂಬ್ (EV) ಕೆ ಎ 06 ಎಚ್ ವೈ 6604 |
| 19 | ಬಸವೇಶ್ವರನಗರ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಜೆ 4494 |
| 20 | ಜಯನಗರ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಹೆಚ್ಎಫ್ 2704 |
| 21 | ಇಂದಿರಾನಗರ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಝೆಡ್ 4475 |
| 22 | ಆರ್ ಟಿ ನಗರ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 02 ಹೆಚ್ ಜಿ 5143 |
| 23 | ಚಿತ್ರದುರ್ಗ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಎಕ್ಸ್ 3854 |
| 24 | ಕುವೆಂಪು ನಗರ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಜೆ 4757 |
| 25 | ಹಾಸನ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಜೆ 4495 |
| 26 | ಹೆಚ್ಎಸ್ಆರ್ ಲೇಔಟ್ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಹೆಚ್ ಡಿ 2455 |
| 27 | ಮಾರತಹಳ್ಳಿ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ವೈ 0952 |
| 28 | ಜೆ ಪಿ ನಗರ ಶಾಖೆ | ಟಿ ವಿ ಎಸ್ ಐ ಕ್ಯೂಬ್ (EV) ಕೆ ಎ 06 ಎಚ್ ವೈ 6598 |
| 29 | ಯಲಹಂಕ ಶಾಖೆ | ಟಿ ವಿ ಎಸ್ ಐ ಕ್ಯೂಬ್ (EV) ಕೆ ಎ 06 ಎಚ್ ವೈ 6603 |
| 30 | ಹೆಸರಘಟ್ಟ ಮುಖ್ಯರಸ್ತೆ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಆರ್ 9891 |
| 31 | ವಿಜಯನಗರ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಆರ್ 9923 |
| 32 | ಮಂಡ್ಯ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಯು 6609 |
| 33 | ಮತ್ತೀಕೆರೆ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಯು 6607 |
| 34 | ಸಹಕಾರನಗರ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಯು 6608 |
| 35 | ರಾಜರಾಜೇಶ್ವರಿ ನಗರ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಎಕ್ಸ್ 3857 |
| 36 | ಶಿವಮೊಗ್ಗ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಇ ಎಕ್ಸ್ 3853 |
| 37 | ಹೆಚ್ಆರ್ಬಿಆರ್ ಲೇಔಟ್ ಶಾಖೆ | ಹೋಂಡಾ ಆಕ್ಟೀವಾ – ಕೆ ಎ 06 ಹೆಚ್ ಡಿ 2454 |

ವರದಿ ವರ್ಷದಲ್ಲಿ ಆಡಳಿತ ಕಚೇರಿಗೆ ಹೊಸ ಮಹೇಂದ್ರ ಬೊಲೆರೋ ಮತ್ತು ಟಾಟಾ ಪಂಚ್ ಈವಿ(EV) ಎರಡು 4 ಚಕ್ರದ ವಾಹನಗಳನ್ನು ಮತ್ತು ಆಡಳಿತ ಕಚೇರಿಗೆ & ವಿವಿಧ ಶಾಖೆಗಳಿಗೆ ಒಟ್ಟು 10 ಟಿ.ವಿ.ಎಸ್ ಐ ಕ್ಯೂಬ್ (EV) ದ್ವಿಚಕ್ರ ವಾಹನಗಳನ್ನು ಖರೀದಿಸಿರುತ್ತಾರೆ.

ವರದಿ ವರ್ಷದಲ್ಲಿ ರೂ. 7,24,899.00ಗಳ ವಾಹನ ಇಂಧನ ವೆಚ್ಚ ಭರಿಸಿರುತ್ತಾರೆ. ಲಾಗ್ ಪುಸ್ತಕ ಬರೆಯಲಾಗಿದೆ. 4 ಚಕ್ರದ ವಾಹನಗಳು ಪ್ರತಿ ಲೀಟರ್‌ಗೆ ಸರಾಸರಿ 10 ರಿಂದ 18 ಕಿ.ಮೀ ಮತ್ತು ದ್ವಿಚಕ್ರ ವಾಹನಗಳು ಸರಾಸರಿ 35 ರಿಂದ 40 ಕಿ.ಮೀ ಮೈಲೇಜ್ ನೀಡುತ್ತಿವೆ. ಲಾಗ್ ಪುಸ್ತಕ ಪರಿಶೀಲನೆಗೆ ಹಾಜರು ಪಡಿಸಿರುತ್ತಾರೆ.

| | | |
|---|---|---|
| | 7 | **ವರದಿ ಸಾಲಿನಲ್ಲಿ ವಿಲೇ ಮಾಡಿರುವ ವಾಹನದ ಕುರಿತು ವಿಮರ್ಶೆ :**<br>ವರದಿ ವರ್ಷದಲ್ಲಿ ಈ ಕೆಳಕಂಡ ಕೇಂದ್ರ ಕಚೇರಿಯಲ್ಲಿನ 4 ಚಕ್ರದ ವಾಹನಗಳನ್ನು ಮಾರಾಟ ಮಾಡಲಾಗಿರುತ್ತದೆ, ವಿವರ ಈ ಕೆಳಕಂಡತಿರುತ್ತದೆ :- **ರೂ. ಗಳಲ್ಲಿ** |

| ವಾಹನದ ವಿವರ | ಪುಸ್ತಕದ ಬೆಲೆ | ಮಾರಾಟದ ಮೊತ್ತ | ಜಿ ಎಸ್ ಟಿ ಪಾವತಿಸಿದ ಮೊತ್ತ | ವಾಹನ ಮಾರಾಟದಿಂದ ಬಂದ ಲಾಭ |
|---|---|---|---|---|
| ಮಾರುತಿ ಓಮ್ನಿ (KA 06 P 4063) | 78,271.00 | 2,84,000.00 | 43,322.00 | 1,62,407.00 |
| ಮಾರುತಿ ಓಮ್ನಿ (KA 06 P 4064) | 78,271.00 | 2,70,000.00 | 41,186.00 | 1,50,543.00 |
| ಟಯೋಟ ಇನ್ನೋವಾ ಕ್ರಿಸ್ಟಾ (KA 06 P 2747) | 5,98,978.00 | 14,05,000.00 | 1,22,953.00 | 6,83,069.00 |
| ಮಾರುತಿ ಸ್ವಿಫ್ಟ್ ಡಿಸೈರ್ (KA 06 P 0080) | 1,66,776.00 | 4,21,000.00 | 38,780.00 | 2,15,444.00 |
| **ಒಟ್ಟು ಮೊತ್ತ** | **9,22,296.00** | **23,80,000.00** | **2,46,241.00** | **12,11,463.00** |

ವರದಿ ವರ್ಷದಲ್ಲಿ ಈ ಕೆಳಕಂಡ 4 ಹೋಂಡಾ ಆಕ್ಟೀವಾಗಳನ್ನು ಮಾರಾಟ ಮಾಡಲಾಗಿದ್ದು. ವಿವರ ಕೆಳಕಂಡತಿರುತ್ತದೆ :- **ರೂ. ಗಳಲ್ಲಿ**

| ವಿವರಗಳು | ಪುಸ್ತಕದ ಬೆಲೆ | ಮಾರಾಟದ ಮೊತ್ತ | ಜಿ ಎಸ್ ಟಿ ಪಾವತಿಸಿದ ಮೊತ್ತ | ವಾಹನ ಮಾರಾಟದಿಂದ ಬಂದ ಲಾಭ |
|---|---|---|---|---|
| ಕೇಂದ್ರ ಕಚೇರಿ (KA 06 EP 6509) | 9,557.00 | 18,000.00 | 1,288.00 | 7,155.00 |
| ಎಸ್ ಎಸ್ ಪುರಂ (KA 06 ER 9924) | 10,897.00 | 19,000.00 | 1,236.00 | 6,867.00 |
| ಜೆ ಪಿ ನಗರ (KA 06 EP 6510) | 9,558.00 | 21,500.00 | 1,822.00 | 10,120.00 |
| ಯಲಹಂಕ (KA 06 EP 6508) | 9,558.00 | 21,000.00 | 1,745.00 | . 9,697.00 |
| **ಒಟ್ಟು ಮೊತ್ತ** | **39,570.00** | **79,500.00** | **6,091.00** | **33,839.00** |

| | | |
|---|---|---|
| | 8 | **<u>ಬ್ಯಾಂಕೇತರ ಆಸ್ತಿಗಳು: (Non Banking Assets) :</u>**<br>**ನಿವೇಶನ ಮತ್ತು ಕಟ್ಟಡ ಸ್ವಾಧೀನಪಡಿಸಿಕೊಂಡಿದ್ದು (ಜಯನಗರ ಶಾಖೆ) :**<br>ದಿನಾಂಕ 31-03-2026ಕ್ಕೆ ಬ್ಯಾಂಕು ರೂ. 7,30,40,860.00ಗಳ ಬ್ಯಾಂಕೇತರ ಆಸ್ತಿಯನ್ನು ಹೊಂದಿರುತ್ತದೆ. ಹಿಂದಿನ ಸಾಲಿನ ವರದಿಗಳಲ್ಲಿ ವಿವರಿಸಿದಂತೆ ಜಯನಗರ ಶಾಖೆಯ 4 ವಿವಿಧ ಸಾಲಗಳು ವಸೂಲಾಗದ್ದರಿಂದ ವಸೂಲಾತಿ ವಿಧಾನಗಳನ್ನು ಅನುಸರಿಸಿ ಅಂತಿಮವಾಗಿ ಬಹಿರಂಗ ಹರಾಜು ಮಾಡಲು ಕ್ರಮ ಕೈಗೊಂಡಿದ್ದು ಹರಾಜಿನಲ್ಲಿ ಯಾರೊಬ್ಬರೂ ಷೆಡ್ಯೂಲ್ ಸ್ಥಿರಾಸ್ತಿಯನ್ನು ಖರೀದಿಸಿಲ್ಲದ ಪ್ರಯುಕ್ತ ಬ್ಯಾಂಕಿನ ಹೆಸರಿಗೆ ಆಸ್ತಿಯನ್ನು ನೋಂದಾಯಿಸಿಕೊಳ್ಳಲಾಗಿತ್ತು ನಂತರ ಬ್ಯಾಂಕಿಗೆ ಬರಬೇಕಿದ್ದ ಅಸಲು |

ಬಡ್ಡಿ ನೊಂದಣಿ ಹಾಗೂ ಇತರೆ ವೆಚ್ಚ ಸೇರಿಸಿ ರೂ. 7,30,40,860.00 ಗಳನ್ನು 2018-19ನೇ ಸಾಲಿನ ಆಸ್ತಿ ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುತ್ತಾರೆ. ಸದರಿ ಮೊತ್ತ ವರದಿ ವರ್ಷದಲ್ಲೂ ಮುಂದುವರೆದಿರುತ್ತದೆ.

ಬ್ಯಾಂಕ್ ಸದರಿ ಬ್ಯಾಂಕೇತರ ಆಸ್ತಿಯನ್ನು ಏಳು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಹೊಂದಿದ್ದು, ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಅನ್ವಯ ಸದರಿ ಆಸ್ತಿಯನ್ನು ಇನ್ನೂ ಎರಡು ವರ್ಷಗಳ ಅವಧಿಗೆ ಉಳಿಸಿಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಅನುಮತಿ ಪಡೆದಿರುವುದು ಗಮನಕ್ಕೆ ಬಂದಿದೆ ಹಾಗೂ ವಿಸ್ತರಿತ ಅವಧಿಯೊಳಗೆ ಸದರಿ ಬ್ಯಾಂಕೇತರ ಆಸ್ತಿಯನ್ನು ವಿಲೇವಾರಿ ಮಾಡಲು ಸೂಕ್ತ ಕ್ರಮ ಕೈಗೊಳ್ಳವಂತೆ ಸೂಚಿಸಲಾಗಿದೆ.

ಬ್ಯಾಂಕು ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ಪಾವತಿಸಲಾಗಿದೆ ಹಾಗು ವಿಮೆ ಕೂಡ ಮಾಡಿಸಲಾಗಿದೆ. ನಾನ್ ಬ್ಯಾಂಕಿಂಗ್ ಆಸ್ತಿಗೆ ಸಂಬಂಧಿಸಿದಂತೆ ಮಾಡಿರುವ ಎಲ್ಲಾ ವೆಚ್ಚಗಳನ್ನು ಪ್ರತ್ಯೇಕ ರಿಜಿಸ್ಟರಿನಲ್ಲಿ ನಮೂದಿಸಲಾಗಿದೆ. ಸದರಿ ಆಸ್ತಿಗೆ ಪೂರ್ಣ ಮೊತ್ತದ ಅವಕಾಶ ಕಲ್ಪಿಸಿಕೊಂಡಿರುತ್ತಾರೆ.

**(27) ಇತರೆ ಬರತಕ್ಕವುಗಳು :**

**(ಇತರೆ ಬರತಕ್ಕವುಗಳ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬ್ತುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಶಿಸುವುದು):**

| **ಕ್ರ.ಸಂ** | **ವಿವರಗಳು** | **ಮೊತ್ತ (ರೂ.ಗಳಲ್ಲಿ)** |
|---|---|---|
| 1 | ಶಾಖೆಗಳ ಬಾಡಿಗೆ ಮುಂಗಡ | 2,07,62,522.00 |
| 2 | ಬೀಗಗಳು | 1,91,378.00 |
| 3 | ಮುದ್ರಣ ಮತ್ತು ಸಲಕರಣೆ | 47,99,012.57 |
| 4 | ದೂರವಾಣಿ ಮುಂಗಡ | 18,525.00 |
| 5 | ಬೆಸ್ಕಾಂ ಠೇವಣಿ | 4,98,795.00 |
| 6 | ಪೂರ್ವಭಾವಿ ವೆಚ್ಚ | 3,56,511.00 |
| 7 | ಇ–ಸ್ಟ್ಯಾಂಪ್ ಠೇವಣಿ | 12,00,000.00 |
| 8 | ತೆರಿಗೆ ಮುಂಗಡ ಮತ್ತು ಟಿ ಡಿ ಎಸ್ | |
| | (ಅ) ಆಕರಣೆ ವರ್ಷ 2025-26 (ತೆರಿಗೆ ವಾಪಸ್ಸಾತಿ) | 3,60,07,460.00 |
| | (ಆ) ಆಕರಣೆ ವರ್ಷ 2026-27 (ಮುಂಗಡ ತೆರಿಗೆ) | 5,00,23,016.00 |
| 9 | ಎ ಟಿ ಎಂ ಕಾರ್ಡ್ ದಾಸ್ತಾನು | 3,36,726.40 |
| 10 | ಸಿ ಸಿ ಐ ಎಲ್ ಮಾರ್ಜಿನ್ ಠೇವಣಿ | 3,11,00,000.00 |
| 11 | ಐ ಜಿ ಎಸ್ ಟಿ ಇನ್ಪುಟ್ | 14,38,322.00 |
| 12 | ಸಿ ಜಿ ಎಸ್ ಟಿ ಇನ್ಪುಟ್ | 3,15,218.83 |
| 13 | ಎಸ್ ಜಿ ಎಸ್ ಟಿ ಇನ್ಪುಟ್ | 3,15,217.83 |
| 14 | ನ್ಯಾಚ್ ಠೇವಣಿ ಖಾತೆ | 5,00,000.00 |
| 15 | ಇತರೆ ಠೇವಣಿ | 2,57,125.00 |
| 16 | ಅನುತ್ಪಾದಕ ಆಸ್ತಿಗಳ ಮೇಲೆ ಬರಬೇಕಾದ ಬಡ್ಡಿ (ಕಾಂಟ್ರಾ) | 242,91,26,045.00 |
| 17 | ಹೂಡಿಕೆಗಳಿಂದ ಬರಬೇಕಾದ ಬಡ್ಡಿ | 15,16,07,724.00 |
| | **ಒಟ್ಟು** | **272,88,53,598.63** |

1. **ಶಾಖೆಗಳ ಬಾಡಿಗೆ ಮುಂಗಡ :** ದಿನಾಂಕ 31-03-2026ಕ್ಕೆ ರೂ. 2,07,62,522.00 ಗಳಿದ್ದು ಇದು 25 ಶಾಖೆಗಳ ಮುಂಗಡವಾಗಿದ್ದು ಬಾಡಿಗೆ ಕರಾರು ಮಾಡಿಕೊಂಡಿರುತ್ತಾರೆ. ಶಾಖೆಗಳ ಬಾಡಿಗೆ ಮುಂಗಡಗಳ ಕರಾರು ಪತ್ರಗಳು ಆಯಾ ಶಾಖೆಗಳ ವ್ಯವಸ್ಥಾಪಕರ ಸುಪರ್ದಿಯಲ್ಲಿರುತ್ತದೆ ಹಾಗೂ ಕರಾರು ಅವಧಿ ಮೀರಿಲ್ಲದಿರುವುದನ್ನು ಗಮನಿಸಲಾಗಿದೆ. ಶಾಖೆಗಳ ಬಾಡಿಗೆ ಮುಂಗಡಗಳ ಪೈಕಿ ವ್ಯವಹಾರ ರದ್ದುಗೊಳಿಸಿರುವ ಹೊಸಕೋಟೆ ಶಾಖೆಯ ಮುಂಗಡ ರೂ. 12,75,000.00ಗಳನ್ನು ವಾಪಸ್ಸು ಪಡೆಯಲು ಕ್ರಮವಿಡುವುದು.

   **ಸಮಾಧಾನ :- ಕ್ರಮವಿಡಲಾಗಿದೆ.**

2. **ಬೀಗಗಳು:** ದಿನಾಂಕ 31-03-2026ಕ್ಕೆ ರೂ. 1,91,378.00 ಗಳಿದ್ದು ಶಾಖಾವಾರು ವಿವರವಿದ್ದು ತಾಳೆ ಇರುತ್ತದೆ.

3. **ಮುದ್ರಣ ಮತ್ತು ಸಲಕರಣೆ:** ದಿನಾಂಕ 31-03-2026 ಕ್ಕೆ ರೂ. 47,99,012.57ಗಳಿದ್ದು ಶಾಖಾವಾರು ಮತ್ತು ಕೇಂದ್ರ ಕಚೇರಿಗೆ ಸಂಬಂಧಿಸಿದ್ದು ಕುಳುವಾರು ಇದ್ದು ತಾಳೆ ಇರುತ್ತದೆ.

4. **ದೂರವಾಣಿ ಮುಂಗಡ** : ದಿನಾಂಕ 31-03-2026 ಕ್ಕೆ 10 ಪ್ರಕರಣಗಳಿಂದ ರೂ. 18,525.00ಗಳಿದ್ದು ದೂರವಾಣಿ ಠೇವಣಿ ಮುಂಗಡದ ಬಾಬ್ತು ಎಂದು ಆಸ್ತಿ ಜವಾಬ್ದಾರಿ ತ:ಖ್ತೆಯ ಆಸ್ತಿಯ ಕಡೆ ತೋರಿಸಿರುತ್ತಾರೆ.

5. **ಬೆಸ್ಕಾಂ ಠೇವಣಿ:** ಸಾಲಾ ಖೈರಿಗೆ ರೂ. 4,98,795.00 ಗಳಿದ್ದು ಕೇಂದ್ರ ಕಚೇರಿ ಮತ್ತು ಈ ಕೆಳಕಂಡ ಶಾಖೆಗಳಿಗೆ ಸಂಬಂಧಿಸಿದ್ದು ದೃಢೀಕರಣ ಪತ್ರ ಹಾಜರುಪಡಿಸಿರುತ್ತಾರೆ.

| ಕ್ರ.ಸಂ | ವಿವರಗಳು | ಮೊಬಲಗು (ರೂ. ಗಳಲ್ಲಿ) |
|---|---|---|
| 1 | ಕೇಂದ್ರ ಕಚೇರಿ | 3,97,965.00 |
| 2 | ಎ.ಪಿ.ಎಂ.ಸಿ. ಯಾರ್ಡ್ ಶಾಖೆ | 11,880.00 |
| 3 | ಜೆ. ಸಿ. ರಸ್ತೆ ಶಾಖೆ | 68,220.00 |
| 4 | ರಾಘವೇಂದ್ರನಗರ ಶಾಖೆ | 20,730.00 |
| | **ಒಟ್ಟು** | **4,98,795.00** |

6. **ಪೂರ್ವಭಾವಿ ವೆಚ್ಚಗಳು:** ದಿನಾಂಕ 31-03-2026 ಕ್ಕೆ ರೂ. 3,56,511.00ಗಳಿದ್ದು ಇದು ವಾರ್ಷಿಕ ನಿರ್ವಹಣಾ ವೆಚ್ಚಗಳು ಮತ್ತು ವಿಮೆಯ ಕಂತುಗಳ ಭಾಗಶಃ ವೆಚ್ಚಗಳು ಮುಂದಿನ ವರ್ಷಕ್ಕೆ ಸಂಬಂಧಿಸಿದ್ದು ಮುಂಗಡವಾಗಿ ಪಾವತಿ ಆಗಿರುತ್ತದೆ.

7. **ಇ-ಸ್ಟಾಂಪ್ ಠೇವಣಿ:** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಸಹಯೋಗದೊಂದಿಗೆ ರೂ. 12,00,000.00 ಠೇವಣಿ ಹಣವಾಗಿ ಹೂಡಿಕೆ ಮಾಡಲಾಗಿದ್ದು ಈ ಪೈಕಿ ರೂ. 4,00,000.00 ಗಳನ್ನು ಭದ್ರತಾ ಠೇವಣಿ ಹಣವಾಗಿ ಹಾಗೂ 8 ಶಾಖೆಗಳ ವ್ಯವಹಾರದ ಬಾಬ್ತಾಗಿ ರೂ. 8,00,000.00ಗಳನ್ನು ಇಡಲಾಗಿದೆ.

8. **ಮುಂಗಡ ತೆರಿಗೆ ಹಾಗೂ ಟಿ.ಡಿ.ಎಸ್:**

   ಅ. ದಿನಾಂಕ 31-03-2026ನೇ ಸಾಲಿನ ಹೆಚ್ಚುವರಿ ತೆರಿಗೆ ಬಾಬ್ತು ಒಟ್ಟು ರೂ. 3,60,07,460.00 ಗಳು ಬರಲು ಬಾಕಿ ಇದ್ದು, ಸದರಿ ಮೊತ್ತವು ಆದಾಯ ತೆರಿಗೆ ಇಲಾಖೆಯಿಂದ ದಿನಾಂಕ 02-04-2026 ರಂದು ಬ್ಯಾಂಕಿಗೆ ಜಮಾ ಬಂದಿರುತ್ತದೆ.

ಆ. ಬ್ಯಾಂಕು A.Y 2026-27ನೇ ಸಾಲಿಗೆ ಮುಂಗಡ ಆದಾಯ ತೆರಿಗೆ ಮತ್ತು ಟಿ.ಡಿ.ಎಸ್ ಬಾಬ್ತು ರೂ. 5,00,23,016.00 ಗಳನ್ನು ಪಾವತಿಸಿದ್ದು ಇದು ಆದಾಯ ತೆರಿಗೆ ಇಲಾಖೆಗೆ ರಿಟರ್ನ್ಸ್ ಸಲ್ಲಿಸಿದ ನಂತರ ಹೊಂದಾಣಿಕೆಗೆ ಬಾಕಿ ಇರುತ್ತದೆ.

**9. ಎ ಟಿ ಎಂ ಕಾರ್ಡ್ ದಾಸ್ತಾನು:** ದಿನಾಂಕ 31-03-2026ಕ್ಕೆ ರೂ. 3,36,726.40ಗಳ ದಾಸ್ತಾನು ಇದ್ದು ವಿವರ ಈ ಕೆಳಕಂಡಂತಿರುತ್ತದೆ :–

| **ಕ್ರಮ ಸಂಖ್ಯೆ** | **ಶಾಖೆಗಳು** | **ಮೊಬಲಗು ರೂ. ಗಳಲ್ಲಿ** |
|---|---|---|
| 1 | ಕೇಂದ್ರ ಕಚೇರಿ | 92,650.00 |
| 2 | ಎಸ್. ಎಸ್. ಪುರಂ ಶಾಖೆ | 42,989.60 |
| 3 | ರಾಘವೇಂದ್ರನಗರ ಶಾಖೆ | 15,935.80 |
| 4 | ಸದಾಶಿವನಗರ ಶಾಖೆ | 2,964.80 |
| 5 | ತಿಪಟೂರು ಶಾಖೆ | 4,337.30 |
| 6 | ಎ.ಪಿ.ಎಂ.ಸಿ ಯಾರ್ಡ್ ಶಾಖೆ | 13,897.50 |
| 7 | ರಾಜಾಜಿನಗರ ಶಾಖೆ | 18,530.00 |
| 8 | ಕೆ. ಆರ್. ಮೊಹಲ್ಲಾ ಶಾಖೆ | 4,632.50 |
| 9 | ಬಸವೇಶ್ವರನಗರ ಶಾಖೆ | 9,265.00 |
| 10 | ಜಯನಗರ ಶಾಖೆ | 18,530.00 |
| 11 | ಇಂದಿರಾನಗರ ಶಾಖೆ | 4,632.50 |
| 12 | ಆರ್. ಟಿ. ನಗರ ಶಾಖೆ | 4,632.50 |
| 13 | ಚಿತ್ರದುರ್ಗ ಶಾಖೆ | 9,265.00 |
| 14 | ಕುವೆಂಪುನಗರ ಶಾಖೆ | 3,891.30 |
| 15 | ಹೆಚ್. ಎಸ್. ಆರ್ ಲೇಔಟ್ ಶಾಖೆ | 30,247.50 |
| 16 | ಯಲಹಂಕ ಶಾಖೆ | 23,162.50 |
| 17 | ಹೆಸರಘಟ್ಟಶಾಖೆ | 13,897.50 |
| 18 | ವಿಜಯನಗರ ಶಾಖೆ | 5,373.70 |
| 19 | ಮಂಡ್ಯ ಶಾಖೆ | 8,894.40 |
| 20 | ಮತ್ತೀಕೆರೆ ಶಾಖೆ | 4,446.25 |
| 21 | ಸಹಕಾರನಗರ ಶಾಖೆ | 2,779.50 |
| 22 | ಶಿವಮೊಗ್ಗ ಶಾಖೆ | 1,771.25 |
| | **ಒಟ್ಟು** | **3,36,726.40** |

**10. ಸಿ.ಸಿ.ಐ.ಎಲ್ ಮಾರ್ಜಿನ್ ಠೇವಣಿ:** ಸಿ.ಸಿ.ಐ.ಎಲ್ ಮಾರ್ಜಿನ್ ಮೊತ್ತ ರೂ 3,11,00,000.00 ಗಳನ್ನು ಠೇವಣಿಸಿದ್ದು ವರದಿ ವರ್ಷದಲ್ಲಿ ರೂ. 46,586.00ಗಳ ಬಡ್ಡಿ ಬಂದಿರುತ್ತದೆ. ಬ್ಯಾಂಕು Government Securities ಟ್ರೇಡಿಂಗ್ ಮಾಡುವ ಸಲುವಾಗಿ Clearing Corporation of India Limited ನಲ್ಲಿ ಈ ಬಾಬ್ತು ತೊಡಗಿಸಿರುತ್ತದೆ. ಸದರಿ ಬಾಬ್ತಿಗೆ ದೃಢೀಕರಣ ಪತ್ರಗಳು ಲಭ್ಯವಿರುತ್ತದೆ.

**11. ಐ ಜಿ ಎಸ್ ಟಿ ಇನ್ಪುಟ್:** ದಿನಾಂಕ 31-03-2026 ಕ್ಕೆ ರೂ. 14,38,322.00ಗಳು ಬಾಕಿಯಿದ್ದು ಇದನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ ಸರಕು ಮತ್ತು ಸೇವಾ ತೆರಿಗೆಯ ಜವಾಬ್ದಾರಿಗೆ ಹೊಂದಾಣಿಕೆ ಮಾಡಲಾಗುತ್ತಿದೆ.

**12. ಸಿ ಜಿ ಎಸ್ ಟಿ ಇನ್ಪಟ್:** ದಿನಾಂಕ 31-03-2026 ಕ್ಕೆ ರೂ. 3,15,218.83ಗಳು ಬಾಕಿಯಿದ್ದು ಇದನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ ಸರಕು ಮತ್ತು ಸೇವಾ ತೆರಿಗೆಯ ಜವಾಬ್ದಾರಿಗೆ ಹೊಂದಾಣಿಕೆ ಮಾಡಲಾಗುತ್ತಿದೆ.

**13. ಎಸ್ ಜಿ ಎಸ್ ಟಿ ಇನ್ಪುಟ್:** ದಿನಾಂಕ 31-03-2026 ಕ್ಕೆ ರೂ. 3,15,217.83ಗಳು ಬಾಕಿಯಿದ್ದು ಇದನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ ಸರಕು ಮತ್ತು ಸೇವಾ ತೆರಿಗೆಯ ಜವಬ್ದಾರಿಗೆ ಹೊಂದಾಣಿಕೆ ಮಾಡಲಾಗುತ್ತಿದೆ.

**14. ನ್ಯಾಚ್ ಠೇವಣಿ ಖಾತೆ: ನ್ಯಾಷನಲ್** ಪೇಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ(NPCI) ರವರ ನಿರ್ದೇಶನದಂತೆ ಪ್ರತಿ ರಾಷ್ಟ್ರೀಯ ಸ್ವಯಂಚಾಲಿತ ಕ್ಲಿಯರಿಂಗ್ ಹೌಸ್ (NACH) ಸದಸ್ಯರು ರೂ. 5,00,000.00ಗಳ ಭದ್ರತಾ ಠೇವಣಿ ಮಾಡಬೇಕಾಗಿದ್ದು ಅದರಂತೆ ಬ್ಯಾಂಕಿನವರು ರೂ. 5,00,000.00 ಠೇವಣಿಯನ್ನು ಮಾಡಿರುತ್ತಾರೆ. ಸದರಿ ಠೇವಣಿಗೆ ದೃಢೀಕರಣ ಪತ್ರವನ್ನು ಪಡೆದಿರುತ್ತಾರೆ.

**15. ಇತರೆ ಠೇವಣಿ** : ಬ್ಯಾಂಕಿನ ಸದಸ್ಯತ್ವದಿಂದ ತೆಗೆದುಹಾಕಿದ ಸದಸ್ಯರೊಬ್ಬರ ವಿರುದ್ಧ ಬ್ಯಾಂಕು ಮಾನನಷ್ಟ ಮೊಕದ್ದಮೆಯನ್ನು ದಾಖಲಿಸಿದ್ದು ಈ ಸಂಬಂಧ ತುಮಕೂರು ನ್ಯಾಯಾಲಯದಲ್ಲಿ ರೂ. 2,57,125.00ಗಳ ಠೇವಣಿಯನ್ನು ಇರಿಸಿರುತ್ತದೆ.

**16. ಅನುತ್ಪಾದಕ ಆಸ್ತಿಗಳ ಮೇಲೆ ಬರಬೇಕಾದ ಬಡ್ಡಿ (ಕಾಂಟ್ರಾ) :** ಆರ್.ಬಿ.ಐನ ಸುತ್ತೋಲೆ ರೀತ್ಯಾ ಅನುತ್ಪಾದಕ ಆಸ್ತಿಗಳ ಮೇಲೆ ಬರಬೇಕಾದ ಬಾಕಿ ಬಡ್ಡಿ ರೂ. 242,91,26,045.00 ಗಳನ್ನು ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಕಾಂಟ್ರಾ ತೋರಿಸಿರುತ್ತಾರೆ.

**17. ಹೂಡಿಕೆಗಳಿಂದ ಬರಬೇಕಾದ ಬಡ್ಡಿ:** ವರ್ಷಾಂತ್ಯಕ್ಕೆ ಹೂಡಿಕೆಗಳ ಬಾಬ್ತು ರೂ. 15,16,07,724.00ಗಳ ಬಡ್ಡಿ ಬರಲು ಬಾಕಿ ಇದ್ದು ಇದನ್ನು ವರದಿಯ ಕಂಡಿಕೆ 23ರಲ್ಲಿ ವಿಮರ್ಶಿಸಿದೆ.

**ಚೆಕ್ಕು / ಬಿಲ್ ಡಿಸ್ಕೌಂಟ್ ವ್ಯವಹಾರ ಕೈಗೊಂಡಿರುವರೋ ವಿವರಿಸಿ :**
ವರದಿ ವರ್ಷದಲ್ಲಿ ಯಾವುದೇ ಬಿಲ್ ಡಿಸ್ಕೌಂಟ್ ವ್ಯವಹಾರ ನೆಡಿಸಿರುವುದಿಲ್ಲ.

**ಬಡ್ಡಿ ಬ್ಯಾಂಕ್ ಚಾರ್ಜಸ್ ಇತ್ಯಾದಿಗಳು:**
ಭಾರತೀಯ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ನಿಗದಿಪಡಿಸಿದ ಮತ್ತು ನೀಡುತ್ತಿರುವ ಆದೇಶಗಳಿಗನುಸಾರವಾಗಿ ಬ್ಯಾಂಕಿನ ಆಡಳಿತ ಮಂಡಳಿಯವರು ಬ್ಯಾಂಕಿನಿಂದ ನೀಡುತ್ತಿರುವ ಸಾಲಗಳ ಮೇಲೆ ಪಡೆಯುತ್ತಿರುವ ಹಾಗೂ ಸಂಗ್ರಹಿಸಿರುವ ಠೇವಣಿಗಳ ಮೇಲೆ ಪಾವತಿಸುತ್ತಿರುವ ಬಡ್ಡಿ ಸದರಿ ಮಿತಿಯಲ್ಲಿರುತ್ತವೆ. **(ರೂ. ಲಕ್ಷಗಳಲ್ಲಿ)**

| ಕ್ರ.ಸಂ. | ಪಡೆದ ಹಾಗೂ ಪಾವತಿಸಿದ ಬಡ್ಡಿ ವಿವರ | 31-03-2025ಕ್ಕೆ | 31-03-2026ಕ್ಕೆ |
|---|---|---|---|
| **I** | **ಆದಾಯ** | | |
| 1 | **ಸಾಲಗಳ ಮತ್ತು ಹೂಡಿಕೆಗಳ ಮೇಲೆ ಬಂದ ಬಡ್ಡಿ** | 14658.86 | 15009.17 |
| 2 | **ದಲ್ಲಾಳಿ** | 17.85 | 19.59 |
| 3 | **ಇತರೆ ಆದಾಯ** | 971.29 | 1503.37 |
| **II** | **ಒಟ್ಟು** | **15648.00** | **16532.13** |
| | **ಠೇವಣಿಗಳ ಮೇಲೆ ಪಾವತಿಸಿದ ಬಡ್ಡಿ** | **8901.71** | **9527.95** |

ಕಳೆದ ಸಾಲಿನಲ್ಲಿ ಸಾಲಗಳು ಮತ್ತು ಹೂಡಿಕೆಗಳ ಬಾಬ್ತು ರೂ. 14658.86 ಲಕ್ಷ ಬಡ್ಡಿ ಬಂದಿದ್ದು ವರದಿ ಸಾಲಿನಲ್ಲಿ ರೂ. 15009.17 ಲಕ್ಷಗಳು ಸಾಲ ಮತ್ತು ಹೂಡಿಕೆಗಳ ಮೇಲೆ ಬಡ್ಡಿ ಜಮಾ ಆಗಿದ್ದು ಕಳೆದ ಸಾಲಿಗೆ ಹೋಲಿಸಿದಲ್ಲಿ ರೂ. 350.31 ಲಕ್ಷ ಹೆಚ್ಚಾಗಿರುತ್ತದೆ.

ಕಳೆದ ಸಾಲಿಗಿಂತ ವರದಿ ಸಾಲಿನಲ್ಲಿ ಠೇವಣಿಗಳ ಮೇಲೆ ರೂ. 626.24 ಲಕ್ಷಗಳ ಬಡ್ಡಿ ಪಾವತಿ ಹೆಚ್ಚಾಗಿರುತ್ತದೆ. ವರದಿ ವರ್ಷದಲ್ಲಿ ಠೇವಣಿಗಳು ಕಳೆದ ಸಾಲಿನ ಠೇವಣಿಗಳಿಗಿಂತ ಹೆಚ್ಚಾಗಿದ್ದರಿಂದ ಬಡ್ಡಿಪಾವತಿ ಕೂಡ ಹೆಚ್ಚಾಗಿರುತ್ತದೆ.

ವರದಿ ಸಾಲಿನಲ್ಲಿ ಸರ್ಕಾರದ ಭದ್ರತೆಗಳ ಮೇಲೆ ಬರಬೇಕಾದ ಬಡ್ಡಿ ರೂ. 720.16 ಲಕ್ಷ ಹಾಗೂ ಇತರೆ ಹೂಡಿಕೆ ಮತ್ತು ಠೇವಣಿಗಳ ಮೇಲೆ ಬರಬೇಕಾದ ಬಡ್ಡಿ ರೂ. 795.92 ಲಕ್ಷಗಳನ್ನು ಆದಾಯವೆಂದು ಪರಿಗಣಿಸಿ ಒಟ್ಟು ರೂ.1516.07 ಲಕ್ಷಗಳನ್ನು ಬರಬೇಕಾದ ಬಡ್ಡಿ ಖಾತೆಯಲ್ಲಿ ತೋರಿಸಿರುತ್ತಾರೆ.

ಪಾವತಿಸಿದ ಬಡ್ಡಿ ಮತ್ತು ವಸೂಲಾಗಿರುವ ಬಡ್ಡಿ ಬಗ್ಗೆ ಪರೀಕ್ಷಾರ್ಥವಾಗಿ ಕೆಲವೊಂದು ಖಾತೆಗಳನ್ನು ಪರಿಶೀಲಿಸಲಾಗಿದ್ದು ವ್ಯತ್ಯಾಸ ಕಂಡುಬಂದಿರುವುದಿಲ್ಲ.

ವರದಿ ಸಾಲಿನಲ್ಲಿ ಠೇವಣಿಗಳ ಮೇಲೆ ರೂ. 9527.95 ಲಕ್ಷ ಬಡ್ಡಿ ಪಾವತಿಸಿದ್ದು ಸಾಲಗಳ ಮೇಲೆ ಬಂದಿರುವ ಬಡ್ಡಿ ರೂ. 9345.00 ಲಕ್ಷಗಳಿದ್ದು ಠೇವಣಿಗಳ ಮೇಲೆ ಪಾವತಿಸಿರುವ ಬಡ್ಡಿಗಿಂತ ಕಡಿಮೆಯಾಗಿದ್ದು ಋಣಾತ್ಮಕವಾಗಿರುತ್ತದೆ.

ವರದಿ ವರ್ಷದಲ್ಲಿ ಸಾಲ ಮತ್ತು ಹೂಡಿಕೆಗಳ ಮೇಲಿನ ಗಳಿಕೆ ರೂ. 15009.17 ಲಕ್ಷಗಳು ಇರುತ್ತದೆ ಆದರೆ ಸರಾಸರಿ ಸಾಲಗಳು ಮತ್ತು ಹೂಡಿಕೆಗಳ ಮೊತ್ತ ರೂ. 181690.31 ಲಕ್ಷಗಳಿಗೆ ಹೋಲಿಸಿದಾಗ ಗಳಿಸಿದ ಆದಾಯ ಶೇ. 8.26 ರಷ್ಟಿರುತ್ತದೆ.

**ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ಅಂಶಗಳಿಗೆ ವಿವರಗಳನ್ನು ಪರಿಶೀಲಿಸಿದ ಬಗ್ಗೆ ಅವುಗಳು ಖಾತೆಗಳ ಶಿಲ್ಕುಗಳಿಗೆ ತಾಳೆ ಹೊಂದುತ್ತವೆಯೇ?**

ದಿನಾಂಕ 31-03-2026ಕ್ಕೆ ಕೇಂದ್ರ ಕಚೇರಿಯ ಲೆಕ್ಕದನ್ವಯ ಶಾಖೆಗಳ ಲೆಕ್ಕದಲ್ಲಿ ಇರುವ ಮೊತ್ತ ಈ ಕೆಳಗೆ ವಿವರಿಸಿದಂತೆ ಇರುತ್ತದೆ.

| ಕ್ರ ಸಂ | ಶಾಖೆಯ ಹೆಸರು | ಮೊಬಲಗು (ರೂ.ಗಳಲ್ಲಿ) | |
|---|---|---|---|
| | | **Credit Balance** | **Debit Balance** |
| 1 | ಜೆ. ಸಿ. ರಸ್ತೆ ಶಾಖೆ | 137,28,26,927.85 | - |
| 2 | ಎಸ್.ಎಸ್. ಪುರಂ ಶಾಖೆ | 106,67,12,284.81 | - |
| 3 | ರಾಘವೇಂದ್ರನಗರ ಶಾಖೆ | 62,18,99,465.11 | - |
| 4 | ಸದಾಶಿವನಗರ ಶಾಖೆ | 14,62,44,032.62 | - |
| 5 | ತಿಪಟೂರು ಶಾಖೆ | 58,98,39,920.01 | - |
| 6 | ಶಿರಾ ಶಾಖೆ | - | 23,39,23,786.37 |
| 7 | ಎ.ಪಿ.ಎಂ.ಸಿ.ಯಾರ್ಡ್ ಶಾಖೆ | 20,87,59,249.29 | - |
| 8 | ರಾಜಾಜಿನಗರ ಶಾಖೆ | - | 82,58,22,367.39 |
| 9 | ಕೆ.ಆರ್. ಮೊಹಲ್ಲಾ ಶಾಖೆ | 26,04,39,320.54 | - |
| 10 | ಬಸವೇಶ್ವರನಗರ ಶಾಖೆ | 33,83,88,775.57 | - |
| 11 | ಜಯನಗರ ಶಾಖೆ | 5,66,32,292.15 | - |

| | | | |
|---|---|---|---|
| 12 | ಇಂದಿರಾನಗರ ಶಾಖೆ | 6,90,01,588.75 | - |
| 13 | ಆರ್.ಟಿ. ನಗರ ಶಾಖೆ | - | 1,65,11,355.00 |
| 14 | ಚಿತ್ರದುರ್ಗ ಶಾಖೆ | - | 56,70,04,877.67 |
| 15 | ಕುವೆಂಪುನಗರ ಶಾಖೆ | 54,28,49,493.00 | - |
| 16 | ಹಾಸನ ಶಾಖೆ | 16,06,48,768.49 | - |
| 17 | ಹೆಚ್.ಎಸ್.ಆರ್. ಲೇಔಟ್ ಶಾಖೆ | 3,36,82,178.82 | - |
| 18 | ಮಾರತಹಳ್ಳಿ ಶಾಖೆ | 6,96,16,086.71 | - |
| 19 | ಜೆ.ಪಿ. ನಗರ ಶಾಖೆ | 13,69,26,906.90 | - |
| 20 | ಯಲಹಂಕ ಶಾಖೆ | - | 4,70,57,599.93 |
| 21 | ಹೆಸರಘಟ್ಟ ಮುಖ್ಯರಸ್ತೆ ಶಾಖೆ | 42,48,85,206.20 | - |
| 22 | ವಿಜಯನಗರ ಶಾಖೆ | 30,50,08,025.83 | - |
| 23 | ಮಂಡ್ಯ ಶಾಖೆ | - | 19,22,66,865.01 |
| 24 | ಮತ್ತೀಕೆರೆ ಶಾಖೆ | - | 19,48,53,864.08 |
| 25 | ಸಹಕಾರನಗರ ಶಾಖೆ | 9,34,19,776.55 | - |
| 26 | ರಾಜರಾಜೇಶ್ವರಿನಗರ ಶಾಖೆ | - | 3,03,81,821.16 |
| 27 | ಶಿವಮೊಗ್ಗ ಶಾಖೆ | - | 6,82,18,312.51 |
| 28 | ಹೆಚ್.ಆರ್.ಬಿ.ಆರ್ ಲೇಔಟ್ ಶಾಖೆ | - | 56,72,02,860.79 |
| 29 | ಕೇಂದ್ರ ಕಚೇರಿ | - | 375,45,36,589.29 |
| | **ಒಟ್ಟು** | **649,77,80,299.20** | **649,77,80,299.20** |

ದಿನಾಂಕ 31-03-2026ಕ್ಕೆ ಕೇಂದ್ರ ಕಚೇರಿಯ ಲೆಕ್ಕಕ್ಕೆ ಶಾಖಾವಾರು ಲೆಕ್ಕಗಳು ಸಮನ್ವಯಗೊಂಡಿರುತ್ತದೆ.

**(28) ಮೋಸ ವಂಚನೆ ಹಣ ದುರುಪಯೋಗದ ವರದಿ :**

**ಹಣ ದುರುಪಯೋಗ ಪತ್ತೆ ಆದ ಕೂಡಲೇ ಸಹಕಾರ ಹಾಗೂ ಲೆಕ್ಕ ಪರಿಶೋಧನಾ ಇಲಾಖಾ ಮೇಲಾಧಿಕಾರಿಗಳಿಗೆ ಅಂತಿಮ ಅಂತಿಮ ವರದಿ ಸಲ್ಲಿಸಲಾಗಿದೆಯೇ?**

ವರದಿ ವರ್ಷದಲ್ಲಿ ಯಾವುದೇ ಮೋಸ ವಂಚನೆ ಹಣ ದುರುಪಯೋಗ ಕಂಡು ಬಂದಿರುವುದಿಲ್ಲ. ಆಂತರಿಕ ಲೆಕ್ಕ ಪರಿಶೋಧನೆಯಲ್ಲೂ ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ.

**ಪ್ರತಿಯೊಂದು ಹಣದುರುಪಯೋಗದ ಅಂಶದ ಸ್ವರೂಪದ ಬಗ್ಗೆ ದಿನಾಂಕವಾರು ಹಣ ದುರುಪಯೋಗ ಮಾಡಿದ ರೀತಿ ಉದ್ದೇಶ ಅದರಿಂದ ಬ್ಯಾಂಕಿನ ಆ ದಿನದ ನಗದು ಶಿಲ್ಕುಗಳ ಮೇಲೆ ಅಥವಾ ಆಸ್ತಿಗಳಲ್ಲಿ ಆಗಿರುವ ಕೊರತೆಯ ಬಗ್ಗೆ ವಿವರವಾಗಿ ವಿಮರ್ಶಿಸಿ ಆಪಾದಿತರಿಗೆ ವಿವರಣೆ ನೀಡಲು ನೋಂದಾಯಿತ ಅಂಚೆಯ ಮೂಲಕ ಜ್ಞಾಪನಾ ಪತ್ರ ನೀಡಲಾಗಿದೆಯೇ?**

ಪ್ರಸಕ್ತ ವರ್ಷದಲ್ಲಿ ಯಾವುದೇ ಹಣ ದುರುಪಯೋಗದ ಪ್ರಕರಣಗಳಿರುವುದಿಲ್ಲವಾದ್ದರಿಂದ ಅನ್ವಯಿಸುವುದಿಲ್ಲ.

**ಹಣ ದುರುಪಯೋಗ ಸಾಬೀತವಾದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿಯನ್ನು ನಿಗದಿಪಡಿಸಿ ಫೌಜದಾರಿ ಮತ್ತು ದಿವಾಣಿ (Criminal & Civil) ಕ್ರಮಕ್ಕೆ ಏಕೆ ಕ್ರಮ ಕೈಗೊಳ್ಳಬಾರದೆಂಬ ಬಗ್ಗೆ ಸಂಬಂಧಪಟ್ಟವರಿಗೆ ಜಾರಿ ಮಾಡಿರುವ ನೋಟೀಸು ಹಾಗೂ ಸಮನ್ಸ್‌ಗಳ ಕುರಿತು ಹಾಗೂ ಅದಕ್ಕೆ ಅವರು ನೀಡಿರುವ ವಿವರಣೆಯನ್ನು ಪರಿಗಣಿಸಿದ ಬಗ್ಗೆ ವಿವರವಾಗಿ ವಿಮರ್ಶಿಸುವುದು:**

ಮೇಲ್ಕಂಡ ಅಂಶಗಳಿಂದಾಗಿ ಈ ಬಗ್ಗೆ ಯಾವುದೇ ವ್ಯಾಖ್ಯಾನ ಇರುವುದಿಲ್ಲ.

| |
|---|
| **ಹಣ ದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಪೂರಕ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಪಡೆದು ವರದಿಗೆ ಲಗತ್ತಿಸಿರುವ ಬಗ್ಗೆ ವಿವರವಾಗಿ ವಿಮರ್ಶಿಸುವುದು.**<br>ಅನ್ವಯಿಸುವುದಿಲ್ಲ. |
| **ಹಣ ದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಬ್ಯಾಂಕಿನ ಆರ್ಥಿಕ ತ:ಖ್ತೆಗಳಲ್ಲಿ ಜವಾಬ್ದಾರಿ ಗೊತ್ತುಪಡಿಸಿ ಸದರಿ ರಕ್ಕಮುಗಳಿಗೆ ಸೂಕ್ತ ಅವಕಾಶ ಕಲ್ಪಿಸಿರುವ ಬಗ್ಗೆ ಹಾಗೂ ಹಣ ದುರುಪಯೋಗದ ರಕ್ಕಮನ್ನು ವಸೂಲಿಸುವ ಕುರಿತು ಕೈಗೊಳ್ಳಬಹುದಾದ ಕ್ರಮಗಳ ಕುರಿತು ವಿವರವಾಗಿ ವಿಮರ್ಶಿಸುವುದು:**<br>ವರದಿ ವರ್ಷದಲ್ಲಿ ಹಣ ದುರುಪಯೋಗದ ಪ್ರಕರಣಗಳಿಲ್ಲದಿರುವುದರಿಂದ ಅನ್ವಯಿಸುವುದಿಲ್ಲ. |
| **ಹಣ ದುರುಪಯೋಗದ ರಕ್ಕಮನ್ನು ವಸೂಲಿಸಲು ಬ್ಯಾಂಕು ತೆಗೆದುಕೊಂಡಿರುವ ಕ್ರಮಗಳ ಕುರಿತು ವಿಮರ್ಶಿಸುವುದು:**<br>ಅನ್ವಯಿಸುವುದಿಲ್ಲ. |
| **ಕೇಂದ್ರ ಕಚೇರಿ ಸುತ್ತೋಲೆ ಸಂಖ್ಯೆ.ಲೆಪಶಾ–1/ಇತರೆ/ಲೆಪನೆ/16/2016-17 ದಿನಾಂಕ 23.02.2017ರ ಹಾಗೂ ನಿರ್ದೇಶನಗಳಂತೆ ಹಣ ದುರುಪಯೋಗವುಳ್ಳ ವರದಿಗಳನ್ನು ಲೆಕ್ಕ ಪರಿಶೋಧನಾ ಇಲಾಖೆಯ ಮೇಲಾಧಿಕಾರಿಗಳಿಂದ ಮೇಲ್ವಿಚಾರಣೆ ಕೈಗೊಂಡು ಅವರು ಸೂಚಿಸಿರುವ ಎಲ್ಲಾ ಅಂಶಗಳನ್ನು ಹಾಗೂ ಸೂಚನೆಗಳನ್ನು ವರದಿಯಲ್ಲಿ ಅಳವಡಿಸಿಕೊಂಡಿರುವ ಬಗ್ಗೆ ವಿವರವಾಗಿ ವಿಮರ್ಶಿಸುವುದು:**<br>ವರದಿ ವರ್ಷದಲ್ಲಿ ಹಣ ದುರುಪಯೋಗದ ಪ್ರಕರಣಗಳಿಲ್ಲದಿರುವುದರಿಂದ ಅನ್ವಯಿಸುವುದಿಲ್ಲ. |
| **(29) ನಿಬಂಧಕರ ಆದೇಶಗಳ ಅನುಪಾಲನೆ :** |
| **ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಬ್ಯಾಂಕಿನ ಮೇಲೆ ಕಲಂ 64ರ ಅನ್ವಯ ಯಾವುದಾದರೂ ವಿಚಾರಣೆ ನಡೆದಿದೆಯೇ?**<br>ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರ ವಿಚಾರಣಾ ಸಂಬಂಧವಾಗಿ ಕಳೆದ ಸಾಲಿನಲ್ಲಿ ದಿನಾಂಕ 27-03-2025ರಂದು ಕಲಂ 64(4) ರ ಅಡಿಯಲ್ಲಿ ಅನುಪಾಲನಾ ವರದಿ ಸಲ್ಲಿಸುವಂತೆ ನಿಬಂಧಕರು ಸೂಚಿಸಿರುತ್ತಾರೆ. ಅದರಂತೆ ಬ್ಯಾಂಕಿನವರು ದಿನಾಂಕ 14-05-2025 ರಂದು ಸೂಕ್ತ ಸಮಜಾಹಿಷಿಗಳನ್ನು ನಿಬಂಧಕರ ಕಚೇರಿಗೆ ಸಲ್ಲಿಸಿರುತ್ತಾರೆ. ಮುಂದುವರೆದು, ಸಹಕಾರ ಸಂಘಗಳ ನಿಬಂಧಕರ ನಿರ್ದೇಶನದ ಮೇರೆಗೆ ಸಹಕಾರ ಸಂಘಗಳ ಜಂಟಿ ನಿಬಂಧಕರು ಅವರ ಪತ್ರ ಸಂಖ್ಯೆ ಆರ್‌ಸಿಎಸ್/ಯುಬಿಸಿ–1/200/ಕಲಂ.68/2022-23 ದಿನಾಂಕ 02-02-2026 ರಂತೆ ಬ್ಯಾಂಕಿಗೆ ಕಲಂ 64ರ ವಿಚಾರಣಾ ವರದಿಯ ಆರೋಪಗಳ ನ್ಯೂನತೆಗಳನ್ನು ಸರಿಪಡಿಸಿಕೊಂಡು 30 ದಿನಗಳ ಒಳಗಾಗಿ ಕಲಂ 68 ರಡಿಯಲ್ಲಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಸೂಚಿಸಿರುತ್ತಾರೆ.<br><br>ಕಲಂ 64ರ ವಿಚಾರಣಾ ವರದಿಯನ್ನು ಪ್ರಶ್ನಿಸಿ WP13087/2026 ರಡಿಯಲ್ಲಿ ಬ್ಯಾಂಕು ಗೌ॥ ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ದಿನಾಂಕ 30-04-2026 ರಂದು ಘನ ನ್ಯಾಯಾಲಯವು ಕಲಂ 64 ರಡಿಯ ಎಲ್ಲ ಪ್ರಕ್ರಿಯೆಗಳಿಗೂ ತಡಯಾಜ್ಞೆಯನ್ನು ನೀಡಿರುತ್ತದೆ. |
| **ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಬ್ಯಾಂಕಿನ ಮೇಲೆ ಕಲಂ 65ರ ಅನ್ವಯ ಯಾವುದಾದರೂ ಪರಿವೀಕ್ಷಣೆ ನಡೆದಿದೆಯೇ?**<br>ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ 65 ರನ್ವಯ ಯಾವುದೇ ಪರಿವೀಕ್ಷಣೆ ನೆಡೆದಿರುವುದಿಲ್ಲ. |
| **ಮೇಲ್ಕಂಡ ಸಂದರ್ಭಗಳಲ್ಲಿ ಕಂಡು ಬಂದ ನ್ಯೂನತೆಗಳನ್ನು ನಿವಾರಿಸಲು ನಿಬಂಧಕರಿಂದ ಕಲಂ 68ರ ಅಡಿ ಆದೇಶ ಜಾರಿಯಾಗಿದೆಯೇ?**<br>ವರದಿ ಸಾಲಿನಲ್ಲಿ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 68ರಡಿ ಯಾವುದೇ ಆದೇಶವಾಗಿರುವುದಿಲ್ಲ. |
| **ಲೆಕ್ಕ ಪರಿಶೋಧಕರು ತಮ್ಮ ವರದಿಯಲ್ಲಿ ಮತ್ತು ಆರ್ಥಿಕ ತಃಖ್ತೆಗಳಲ್ಲಿ ನಿಬಂಧಕರ ಕಲಂ 68ರ ಅಡಿ ಆಗಿರುವ ಆದೇಶವನ್ನು ಪರಿಗಣಿಸಿ ಸೂಕ್ತವಾಗಿ ಅಳವಡಿಕೆ ಮಾಡಿಕೊಂಡಿದ್ದಾರೆಯೇ?**<br>ಸಹಕಾರ ಸಂಘಗಳ ಕಾಯಿದೆ 1959ರ ಕಲಂ 68ರಡಿ ಯಾವುದೇ ಆದೇಶವಾಗಿರುವುದಿಲ್ಲ. |

| **ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ವಿವರಗಳು (ಶೆಡ್ಯೂಲ್ "ಇ"ನಲ್ಲಿರುವ ವಿವರಗಳ ಬಗ್ಗೆ ಟಿಪ್ಪಣಿ)** | |
|---|---|
| **ಬ್ಯಾಂಕಿನ ಉಪನಿಯಮದ ಪ್ರಕಾರ ನಿರ್ದೇಶಕರ ಸಂಖ್ಯೆ** | ಬ್ಯಾಂಕಿನ ಉಪನಿಯಮದ ಪ್ರಕಾರ ನಿರ್ದೇಶಕರ ಸಂಖ್ಯೆ–21 |
| **ಮೀಸಲಾತಿ ಮತ್ತು ಅವುಗಳ ಭರ್ತಿ ಬಗ್ಗೆ ವಿವರ** | ಬ್ಯಾಂಕಿನ ಬೈಲಾ 46.1ರನ್ವಯ ಆಡಳಿತ ಮಂಡಳಿಯಲ್ಲಿ ಇಬ್ಬರು ಮಹಿಳಾ ಸದಸ್ಯರಿಗೆ ಒಬ್ಬರು ಪರಿಶಿಷ್ಟ ಜಾತಿ ಮತ್ತು ಒಬ್ಬರು ಪರಿಶಿಷ್ಟ ಪಂಗಡದ ಸದಸ್ಯರಿಗೆ ಹಾಗೂ ಇಬ್ಬರು ಹಿಂದುಳಿದ ವರ್ಗದ ಸದಸ್ಯರಿಗೆ ಅವಕಾಶ ಕಲ್ಪಿಸಲಾಗಿದೆ. |
| **ಪ್ರಸಕ್ತ ಮಂಡಳಿಯು ಅಧಿಕಾರ ವಹಿಸಿಕೊಂಡ ದಿನಾಂಕ** | ಪ್ರಸಕ್ತ ಆಡಳಿತ ಮಂಡಳಿಗೆ ದಿನಾಂಕ 12-01-2025ರಂದು ಚುನಾವಣೆ ನಡೆದಿದ್ದು ದಿನಾಂಕ 04-02-2025ರಂದು ಮತ ಎಣಿಕೆ ನಡೆದು ಮಂಡಳಿಯು ದಿನಾಂಕ 14-02-2025 ರಿಂದ ಅಧಿಕಾರ ವಹಿಸಿಕೊಂಡಿರುತ್ತದೆ. |
| **ಮಂಡಳಿಯ ಅವಧಿ** | ಚುನಾವಣೆ ನಡೆದ ದಿನಾಂಕದಿಂದ 5 ವರ್ಷಗಳು |
| **ಖಾಲಿ ಇರುವ ಹುದ್ದೆಗಳ ಸಂಖ್ಯೆ ಮತ್ತು ಅವಧಿ** | ಯಾವುದೇ ಹುದ್ದೆಗಳು ಖಾಲಿ ಇರುವುದಿಲ್ಲ. |
| **ಪ್ರಸಕ್ತ ಸಾಲಿನಲ್ಲಿ ನಡೆದ ಮಂಡಳಿಯ ಸಭೆಗಳ ಸಂಖ್ಯೆ** | ವರದಿ ವರ್ಷದಲ್ಲಿ 20 ಆಡಳಿತ ಮಂಡಳಿಯ ಸಭೆಗಳು ನಡೆದಿರುತ್ತವೆ. |
| **ಮಂಡಳಿಯ ಸಭೆಗಳಿಗಾಗಿ ಆದ ವೆಚ್ಚ** | ರೂ. 2,89,612.00ಗಳ ವೆಚ್ಚ ಭರಿಸಿರುತ್ತಾರೆ. |

**ನಿರ್ದೇಶಕರ ತರಬೇತಿ ಕಾರ್ಯಕ್ರಮಗಳ ವಿವರ :** ವರದಿ ವರ್ಷದಲ್ಲಿ ತರಬೇತಿ ಪಡೆದ ನಿರ್ದೇಶಕರುಗಳ ವಿವರ ಈ ಕೆಳಕಂಡಂತಿರುತ್ತದೆ :–

| Sl No. | Details of Conducting the Training Programme | Training Details | Date of Training | Directors attended the Training Programme |
|---|---|---|---|---|
| **1** | The Karnataka State Co-Operative Urban Bank's Federation LTD., Bangalore | 1.UCB's Board of Directors Responsibilities and Duties<br>2.UCB's Professional Directors & BOM members Duties and Responsibilities<br>3.Latest RBI circulars | 23/07/2025 | 1.Sri.N R Akshay<br>2.Sri.Santha Tukaram<br>3.Sri.D V Umesh<br>4.Sri.T S Revanth |
| **2** | National Federation of Urban Cooperative Banks & Credit societies Ltd., (NAFCUB), National Institute of Rural Banking (NIRB), RICM Campus, Banglore. | Leadership Development Programme for Chairpersons/Directors of UCB's | 01/12/2025 To 03/12/2025 | 1.Sri.Manjunathaiah K T |
| **3** | The Karnataka State Cooperative Urban Bank's Federation LTD., Bangalore | Building the future of Co-operative Banking | 05/12/2025 | 1.Sri. Divyananda Murthy H M<br>2. Sri. Nataraj C R |

| **ನಿರ್ದೇಶಕರ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ** | ಯಾವುದೇ ವೆಚ್ಚವನ್ನು ಭರಿಸಿರುವುದಿಲ್ಲ. |
|---|---|

**ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ಸಭೆಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ವಿವರ:**
ವರದಿ ವರ್ಷದಲ್ಲಿ ಠೇವಣಿಗಳ ಪ್ರಗತಿ, ಸಾಲ ನೀಡುವಿಕೆ, ಸಾಲ ವಸೂಲಿ, ಅನುತ್ಪಾದಕ ಸಾಲಗಳ ಪರಿಶೀಲನೆ, ಹೂಡಿಕೆಗಳ ಬಗ್ಗೆ, ಷೇರು ನೀಡುವಿಕೆ, ಆಡಿಟ್ ವರದಿಗಳ ಬಗ್ಗೆ, ಆರ್.ಬಿ.ಐನ ತನಿಖಾ ವರದಿ ಬಗ್ಗೆ, ಆರ್.ಬಿ.ಐ ಸುತ್ತೋಲೆಗಳ ಬಗ್ಗೆ ಹಾಗೂ ಆಡಳಿತಾತ್ಮಕ ವಿಚಾರಗಳ ಬಗ್ಗೆ ಚರ್ಚಿಸಿ ತೀರ್ಮಾನಗಳನ್ನು ಕೈಗೊಂಡಿರುತ್ತಾರೆ. ಆಡಳಿತ ಮಂಡಳಿಯ ಗಮನಕ್ಕೆ ತರದೆ ಹೆಚ್ಚಿನ ಅಂಶಗಳಲ್ಲಿ ಯಾವುದೇ ವ್ಯವಹಾರಗಳು ನಡೆದಿರುವುದಿಲ್ಲ.

**(30) ಬ್ಯಾಂಕಿನ ಆಡಳಿತ :** ವರದಿ ಸಾಲಿನಲ್ಲಿ ನಡೆದ ಸಭೆಗಳ ವಿವರ ಈ ಕೆಳಕಂಡಂತಿರುತ್ತದೆ :-

| ಕ್ರ.ಸಂ | ವಿವರ | ಸಂಖ್ಯೆ |
|---|---|---|
| 1 | ಕಾರ್ಯಕಾರಿ ಮಂಡಳಿ | 20 |
| 2 | ಆಸ್ತಿ ಅಡಮಾನ ಸಾಲ ಉಪಸಮಿತಿ | 35 |
| 3 | ನಿರ್ವಹಣಾ ಮಂಡಳಿ | 18 |
| 4 | ಜಂಟಿ ಸಾಲ ವಾಹನ ಸಾಲ & ಸರಕು ಅಡಮಾನ ಸಾಲ ಉಪಸಮಿತಿ | 42 |
| 5 | ಲೆಕ್ಕ ಪರಿಶೋಧನ ಉಪಸಮಿತಿ | 8 |
| 6 | ಹೆಚ್ಚಿನ ಮೊತ್ತದ ಮೋಸ/ವಂಚನೆಗಳ ಪರಿವೀಕ್ಷಣಾ ಸಮಿತಿ | 4 |
| 7 | ಸಿಬ್ಬಂದಿ ನೇಮಕಾತಿ ಉಪಸಮಿತಿ | 0 |
| 8 | ಹೂಡಿಕೆಗಳ ಉಪಸಮಿತಿ | 12 |
| 9 | ALCO ಉಪಸಮಿತಿ | 10 |
| 10 | ಸಣ್ಣ ವ್ಯಾಪಾರಾಭಿವೃದ್ಧಿ ಮತ್ತು ಕನ್ಸೂಮರ್ ಸಾಲದ ಉಪಸಮಿತಿ | 0 |
| 11 | ಶಾಖಾ ಪರಿವೀಕ್ಷಣಾ ಉಪಸಮಿತಿ | 0 |
| 12 | ಸಾಲ ವಸೂಲಾತಿ ಉಪಸಮಿತಿ | 5 |
| 13 | ಸಿಬ್ಬಂದಿ ವಿಚಾರಣಾ ಉಪಸಮಿತಿ | 0 |
| 14 | ಶಾಖೆಗಳ ಕಾರ್ಯಕ್ಷಮತೆಯ ಪರಿಶೀಲನಾ ಉಪಸಮಿತಿ | 0 |
| 15 | ರಾಜಿ ಪರಿಹಾರ ಉಪಸಮಿತಿ | 7 |
| 16 | ಉದ್ದೇಶಪೂರ್ವಕವಾಗಿ ಸುಸ್ತಿಯಾಗುವ ಸಾಲಗಾರರನ್ನು ಗುರುತಿಸುವ ಉಪಸಮಿತಿ | 5 |
| 17 | ಗ್ರಾಹಕರ ಕುಂದು ಕೊರತೆ ಪರಿಹಾರ ಉಪಸಮಿತಿ/ಗ್ರಾಹಕರ ಸೇವಾ ಉಪಸಮಿತಿ | 3 |
| 18 | ಅಪಾಯ ನಿರ್ವಹಣಾ ಉಪಸಮಿತಿ | 1 |
| 19 | ವಂಚನೆ ಪ್ರಕರಣಗಳ ಮೇಲ್ವಿಚಾರಣೆಯ ವಿಶೇಷ ಉಪಸಮಿತಿ | 2 |
| 20 | ಉದ್ದೇಶಪೂರ್ವಕವಾಗಿ ಸುಸ್ತಿಯಾಗುವ ಸಾಲಗಾರರ ಪರಿಶೀಲನಾ ಉಪಸಮಿತಿ | 3 |
| | **ಒಟ್ಟು** | **175** |

**ವರದಿ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರ ಸಭಾ ಹಾಜರಾತಿ:** (ದಿನಾಂಕ 01-04-2025 ರಿಂದ 31-03-2026)

| ಕ್ರ ಸಂ | ನಿರ್ದೇಶಕರ ಹೆಸರು ಶ್ರೀ/ಶ್ರೀಮತಿ | ಹುದ್ದೆ | ನಡೆದ ಸಭೆಗಳ ಸಂಖ್ಯೆ | ಹಾಜರಾದ ಸಭೆಗಳ ಸಂಖ್ಯೆ | ಸಂಭಾವನೆ |
|---|---|---|---|---|---|
| 1 | ಹೆಚ್ ಎಂ ದಿವ್ಯಾನಂದ ಮೂರ್ತಿ | ಅಧ್ಯಕ್ಷರು | 20 | 20 | - |

| | | | | | |
|---|---|---|---|---|---|
| 2 | ಸಿ ಆರ್ ನಟರಾಜ್ | ಉಪಾಧ್ಯಕ್ಷರು | 20 | 20 | - |
| 3 | ಎಂ ಪಿ ಮಹೇಶ್ | ನಿರ್ದೇಶಕರು | 20 | 14 | - |
| 4 | ಎಸ್ ಬಿ ಪ್ರಭು | ನಿರ್ದೇಶಕರು | 20 | 17 | - |
| 5 | ಆರ್ ಎ ಸುರೇಶ್ ಕುಮಾರ್ | ನಿರ್ದೇಶಕರು | 20 | 18 | - |
| 6 | ಎಂ ದೀಪಕ್ | ನಿರ್ದೇಶಕರು | 20 | 18 | - |
| 7 | ಬಲರಾಮ ಶೆಟ್ಟಿ | ನಿರ್ದೇಶಕರು | 20 | 16 | - |
| 8 | ರಶ್ಮಿಕಿರಣ್ | ನಿರ್ದೇಶಕರು | 20 | 11 | - |
| 9 | ಎಂ ನಯನ | ನಿರ್ದೇಶಕರು | 20 | 11 | - |
| 10 | ಕೆ ರಾಮಯ್ಯ<br>(ದಿ 13/09/2025 ರವರೆಗೆ) | ನಿರ್ದೇಶಕರು | 20 | 2 | - |
| 11 | ಎನ್ ಆರ್ ಅಕ್ಷಯ್ | ನಿರ್ದೇಶಕರು | 20 | 15 | - |
| 12 | ಟಿ ಎಲ್ ನಟರಾಜ | ನಿರ್ದೇಶಕರು | 20 | 9 | - |
| 13 | ಟಿ ಡಿ ಬಾಹುಬಲಿ ಬಾಬು | ನಿರ್ದೇಶಕರು | 20 | 16 | - |
| 14 | ಡಿ ವಿ ಉಮೇಶ್ | ನಿರ್ದೇಶಕರು | 20 | 20 | - |
| 15 | ಹೆಚ್ ಜೆ ಪಾಯೇಶ್ ಕುಮಾರ್ | ನಿರ್ದೇಶಕರು | 20 | 19 | - |
| 16 | ಜಿ ಎಸ್ ರಮೇಶ್ | ನಿರ್ದೇಶಕರು | 20 | 20 | - |
| 17 | ಟಿ ಎಸ್ ರೇವಂತ್ | ನಿರ್ದೇಶಕರು | 20 | 17 | - |
| 18 | ಟಿ ಆರ್ ಸುರೇಶ್ | ನಿರ್ದೇಶಕರು | 20 | 18 | - |
| 19 | ಸಂತ ತುಕಾರಾಂ | ನಿರ್ದೇಶಕರು | 20 | 16 | - |
| 20 | ಶಿವಕುಮಾರ ಟಿ ಜಿ | ನಿರ್ದೇಶಕರು | 7 | 7 | - |
| 21 | ಎಸ್ ವಿಶ್ವನಾಥ್ | ವೃತ್ತಿಪರ ನಿರ್ದೇಶಕರು | 20 | 10 | - |
| 22 | ಕೆ ಟಿ ಮಂಜುನಾಥಯ್ಯ | ವೃತ್ತಿಪರ ನಿರ್ದೇಶಕರು | 20 | 13 | - |

ಬ್ಯಾಂಕಿನ ನಿರ್ದೇಶಕರಾದ ಶ್ರೀ ಕೆ ರಾಮಯ್ಯರವರು ದಿನಾಂಕ 14-09-2025ರಂದು ದೈವಾಧೀನರಾಗಿದ್ದು, ಕರ್ನಾಟಕ ಸಹಕಾರ ಅಧಿನಿಯಮ–1959, ಕಾಯ್ದೆ ಕಲಂ 29–ಇ ರಂತೆ ದಿನಾಂಕ 28-11-2025ರ ಕಾರ್ಯಕಾರಿ ಮಂಡಳಿಯಲ್ಲಿ ಖಾಲಿಯಾಗಿರುವ ನಿರ್ದೇಶಕರ ಸ್ಥಾನಕ್ಕೆ ಅದೇ ವರ್ಗದ ಸದಸ್ಯರ ಪೈಕಿ ಶ್ರೀ ಟಿ ಜಿ ಶಿವಕುಮಾರರವರನ್ನು ನಾಮನಿರ್ದೇಶನ ಮಾಡಿಕೊಂಡಿರುತ್ತಾರೆ.

**ಬ್ಯಾಂಕಿನ ನಿರ್ವಹಣಾ ಮಂಡಳಿ :–** RBI Circular RBI/2019-20/128 DoR (PCB).BPD.Cir.No.8/ 12.05.002/ 2019-20 dated 31st December 2019, ರಂತೆ ಬ್ಯಾಂಕಿನಲ್ಲಿ ನಿರ್ವಹಣಾ ಮಂಡಳಿ (Board of Management) ರಚಿಸಿಕೊಂಡಿದ್ದು, ವರದಿ ವರ್ಷದಲ್ಲಿ 18 ನಿರ್ವಹಣಾ ಮಂಡಳಿಯ ಸಭೆಗಳು ನೆಡೆದಿರುತ್ತವೆ ಹಾಗೂ ಎಲ್ಲಾ ಸಭೆಗಳಲ್ಲಿಯೂ ಕೋರಂ ಇರುತ್ತದೆ. ಬ್ಯಾಂಕಿನಲ್ಲಿ ಮಂಜೂರಾಗುವ ಎಲ್ಲಾ ಸಾಲದ ಕಡತಗಳನ್ನು ನಿರ್ವಹಣಾ ಮಂಡಳಿಯಲ್ಲಿ ಮಂಡಿಸಿದ್ದು, ಇದಲ್ಲದೇ ಬ್ಯಾಂಕಿನ NPA, ALCO Committee, Audit Committee ನಡಾವಳಿಗಳು, ಹೂಡಿಕೆ, ATM ನಿರ್ವಹಣೆ, KYC norms, ಠೇವಣಿ ಮತ್ತು ಸಾಲಗಳ ಬಗ್ಗೆ ಪರಾಮರ್ಶೆ ಮುಂತಾದ ಪ್ರಮುಖ ವಿಷಯಗಳ ಬಗ್ಗೆ ಚರ್ಚೆ ನೆಡೆಸಿರುತ್ತಾರೆ.

ದಿನಾಂಕ 31-03-2026ರ ಅಂತ್ಯಕ್ಕೆ ಬ್ಯಾಂಕಿನ ನಿರ್ವಹಣಾ ಮಂಡಳಿಯ ಸದಸ್ಯರ ವಿವರಗಳು ಈ ಕೆಳಕಂಡಂತಿರುತ್ತದೆ :–

| ಕ್ರ.ಸಂ | ನಿರ್ದೇಶಕರ ಹೆಸರು | ಹುದ್ದೆ |
|---|---|---|
| 1 | ಶ್ರೀ ಕೆ ನಾಗರಾಜಯ್ಯ | ಅಧ್ಯಕ್ಷರು |
| 2 | ಶ್ರೀ ಎಂ ಆರ್ ಸತ್ಯನಾರಾಯಣ | ಸದಸ್ಯರು |
| 3 | ಶ್ರೀ ಹೆಚ್ ಎನ್ ಚಂದ್ರಶೇಖರ್ | ಸದಸ್ಯರು |
| 4 | ಶ್ರೀ ಕೆ ಎನ್ ಪ್ರವೀಣ್ ಕುಮಾರ್ | ಸದಸ್ಯರು |
| 5 | ಶ್ರೀ ಹೆಚ್ ಎಂ ದಿವ್ಯಾನಂದಮೂರ್ತಿ | ಸದಸ್ಯರು |
| 6 | ಶ್ರೀ ಸಿ ಆರ್ ನಟರಾಜ್ | ಸದಸ್ಯರು |
| 7 | ಶ್ರೀ ಎಂ ಪಿ ಮಹೇಶ್ | ಸದಸ್ಯರು |

ವರದಿ ಸಾಲಿನಲ್ಲಿ ಆಡಳಿತ ಮಂಡಳಿ ಸದಸ್ಯರನ್ನು ಹೊರತುಪಡಿಸಿ ನಿರ್ವಹಣಾ ಮಂಡಳಿಯ ಸದಸ್ಯರಿಗೆ ತಲಾ ರೂ. 3,000.00 ದಂತೆ ಆಸೀನ ಭತ್ಯೆಯನ್ನು ನೀಡಿದ್ದು, ವರದಿ ಸಾಲಿನಲ್ಲಿ ಒಟ್ಟು 18 ನಿರ್ವಹಣಾ ಮಂಡಳಿ ಸಭೆಗಳು ನೆಡೆದಿದ್ದು, ವರದಿ ಸಾಲಿನಲ್ಲಿ ನಿರ್ವಹಣಾ ಮಂಡಳಿಯ ಸದಸ್ಯರಿಗೆ ಒಟ್ಟು ರೂ. 2,04,000 ಗಳ ಆಸೀನ ಭತ್ಯೆಯನ್ನು ಭರಿಸಲಾಗಿದೆ.

**ಮಂಡಳಿ ಸಮಿತಿಗಳು ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ :**

| |
|---|
| **ಮಂಡಳಿಯ/ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನೆಡೆಸುತ್ತಿದ್ದಾರೆಯೇ?** |
| ಉಪನಿಯಮ 51 ರಂತೆ ಬ್ಯಾಂಕಿನ ವ್ಯವಹಾರಗಳನ್ನು ನಿರ್ವಹಿಸಲು ಮಂಡಳಿಯು ಕನಿಷ್ಟ ಪಕ್ಷ ತಿಂಗಳಿಗೊಂದಾದರೂ ಸಭೆ ನೆಡೆಸಬೇಕಾಗಿದ್ದು ವರದಿ ಸಾಲಿನಲ್ಲಿ 20 ಸಭೆಗಳು ನೆಡೆದಿರುತ್ತದೆ ಹೀಗಾಗಿ ಉಪನಿಯಮದ ಉಲ್ಲಂಘನೆಯಾಗಿರುವುದಿಲ್ಲ. |
| **ಬ್ಯಾಂಕಿನ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆಯೇ?** |
| ಹೌದು ಮಂಡಳಿ/ಸಮಿತಿ ಸಭೆಗಳು ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆ. |
| **ಮಂಡಳಿಯ/ಸಮಿತಿಗಳ ಸಭೆಗಳ ನಡಾವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ:** |
| ಕಾರ್ಯಕಾರಿ ಮಂಡಳಿಯವರು ಎಲ್ಲಾ ನಿರ್ಧಾರಗಳನ್ನು ಉಪ–ಸಮಿತಿ ಮತ್ತು ಕಾರ್ಯಕಾರಿ ಮಂಡಳಿಯಲ್ಲಿ ಚರ್ಚಿಸಿ ಸಾಲಗಳ ಮಂಜೂರಾತಿ, ಷೇರು ನೀಡುವಿಕೆ, ಹೂಡಿಕೆಗಳ ಖರೀದಿ ಹಾಗೂ ಮಾರಾಟದ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಂಡಿದ್ದು ಇವು ಬ್ಯಾಂಕಿನ ಬೈಲಾ ನಿಯಮಗಳಿಗೆ ಅನುಸಾರವಾಗಿರುತ್ತದೆ. |

**ನಿರ್ದೇಶಕರ ಅವರ ಕುಟುಂಬ ವರ್ಗದವರ ಅವರ ಆಸಕ್ತ ಸಂಸ್ಥೆಗಳ ಸಾಲಗಳ ಬಗ್ಗೆ ಟಿಪ್ಪಣಿ:**

| |
|---|
| **ನಿರ್ದೇಶಕರಿಗೆ ನೀಡಿರುವ ಸಾಲಗಳು ಬೈಲಾ ಮತ್ತು ಇಲಾಖೆಯು ನೀಡಿದ ಮಾರ್ಗಸೂಚಿಗಳಿಗೆ ಅನ್ವಯವಾಗಿದೆಯೆ?** |
| ಬ್ಯಾಂಕಿನ ಚುನಾವಣೆಗೂ ಮುನ್ನ ಒಬ್ಬರು ನಿರ್ದೇಶಕರು ಸಾಲ ಪಡೆದಿರುವುದನ್ನು ಗಮನಿಸಿದ್ದು ಹಾಗೂ ಒಬ್ಬ ನಿರ್ದೇಶಕರ ಸಂಬಂಧಿ ಮತ್ತು ಇನೊಬ್ಬ ನಿರ್ದೇಶಕರ ಆಸಕ್ತ ಸಂಸ್ಥೆಯೂ ಚುನಾವಣೆಗೂ ಮುನ್ನ ಸಾಲ ಪಡೆದಿರುವುದು ಕಂಡು ಬಂದಿರುತ್ತದೆ. ಕಂಡಿಕೆ 24 (ಜಿ)(4) ರಲ್ಲಿ ವಿವರ ನೀಡಲಾಗಿದೆ. |

| |
|---|
| **ಎಲ್ಲಾ ನಿರ್ದೇಶಕರು ಬೈಲಾದನ್ವಯ ಕನಿಷ್ಠ ವ್ಯವಹಾರ ನೆಡೆಸಿದ್ದಾರೆಯೆ?**<br>ಎಲ್ಲಾ ನಿರ್ದೇಶಕರು ಬೈಲಾದನ್ವಯ ಕನಿಷ್ಟ ವ್ಯವಹಾರ ನೆಡೆಸಿರುತ್ತಾರೆ. |
| **ನಿರ್ದೇಶಕರು ಅಥವಾ ಅವರ ಕುಟುಂಬದವರು ಸಾಲ ಪಡೆದಿದ್ದರೆ ಅವುಗಳ ವಿವರ:**<br>ಈ ಬಗ್ಗೆ ಹಿಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ. |
| **ನಿರ್ದೇಶಕರು ಅಥವಾ ಅವರ ಕುಟುಂಬದವರು ಜಾಮೀನು ನೀಡಿದ್ದರೆ ಅವುಗಳ ವಿವರ:**<br>ನಮ್ಮ ಪರೀಕ್ಷಾರ್ಥ ಪರಿಶೀಲನೆಯಲ್ಲಿ ನಿರ್ದೇಶಕರು ಅಥವಾ ಅವರ ಕುಟುಂಬದವರು ಜಾಮೀನು ನೀಡಿರುವ ಪ್ರಸಂಗಗಳು ಕಂಡು ಬಂದಿರುವುದಿಲ್ಲ. |
| **ಒಂದು ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಹಾಗೂ ಮುದ್ದತ್ತು ಮೀರಿರುವ ನಿರ್ದೇಶಕರು ಅಥವಾ ಅವರ ಕುಟುಂಬದವರು ಪಡೆದಿರುವ ಸಾಲ:**<br>ಯಾವುದೂ ಇರುವುದಿಲ್ಲ. |

**(31) ವಾರ್ಷಿಕ ಸಾಮಾನ್ಯ ಸಭೆ:**

ಬ್ಯಾಂಕಿನ 62ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 13-09-2025 ರಂದು ಆರ್.ಟಿ.ಪಿ ಕನ್ವೆನ್ಷನ್ ಹಾಲ್, ತುಮಕೂರಿನಲ್ಲಿ ನೆಡೆದಿರುತ್ತದೆ.

| | |
|---|---|
| **ಹಿಂದಿನ ಸಾಲಿನ ವಾರ್ಷಿಕ ಸಭೆ ನಡೆದ ದಿನಾಂಕ** | 13-09-2025 |
| **ಬ್ಯಾಂಕಿನ ಉಪ ನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕೋರಂ** | ಬ್ಯಾಂಕಿನ ಉಪನಿಯಮ 41 ರಂತೆ ಮತ ನೀಡಲು ಅರ್ಹತೆ ಇರುವ ಒಟ್ಟು ಸದಸ್ಯರ ಪೈಕಿ ಶೇಕಡ ಹತ್ತರಷ್ಟು ಅಥವಾ ಕನಿಷ್ಟ ಒಂದು ಸಾವಿರ ಮಂದಿ ಯಾವುದು ಕಡಿಮೆಯೋ ಅದು ಸಾಮಾನ್ಯ ಸಭೆಯ ಸಭಾವಶ್ಯಕ ಕೋರಂ ಆಗಿರುತ್ತದೆ. |
| **ಹಾಜರಾತಿ ಪುಸ್ತಕದ ಪ್ರಕಾರ ಹಾಜರಿದ್ದ ಸದಸ್ಯರ ಸಂಖ್ಯೆ** | ಬ್ಯಾಂಕಿನಲ್ಲಿ 12842 ಸದಸ್ಯರಿದ್ದು, ಈ ಪೈಕಿ ಸರ್ವಸದಸ್ಯರ ಸಭೆಗೆ 4466 ಸದಸ್ಯರು ಹಾಜರಾಗಿರುತ್ತಾರೆ. |
| **ಸಭಾ ನಡಾವಳಿಗಳ ಪರಿಶೀಲನೆ ಬಗ್ಗೆ ಟಿಪ್ಪಣಿ :**<br>ವಾರ್ಷಿಕ ಮಹಾಸಭೆಯ ನಡಾವಳಿಕೆ ಪರಿಶೀಲಿಸಲಾಗಿದೆ. ನಡಾವಳಿಕೆಯಲ್ಲಿ 2024-25 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಅಂಗೀಕರಿಸುವುದು, 2025-26ನೇ ಸಾಲಿಗೆ ಬಜೆಟ್ ಮಂಜೂರಾತಿ, ಉಪವಿಧಿಗಳ ತಿದ್ದುಪಡಿ, ಸದಸ್ಯರ ಸದಸ್ಯತ್ವವನ್ನು ಸಮಾಪನೆಗೊಳಿಸದ ಹಾಗೂ ಸದಸ್ಯತ್ವ ಅಂಗೀಕರಿಸುವ ಬಗ್ಗೆ, ಬ್ಯಾಂಕಿನ ಸದಸ್ಯರಿಂದ ಬಂದಿರುವ ಪತ್ರಗಳ ಮೇಲಿನ ಚರ್ಚೆ ಇನ್ನು ಮುಂತಾದ ಮುಖ್ಯ ವಿಷಯಗಳ ಬಗ್ಗೆ ಚರ್ಚಿಸಿ ಅಂಗೀಕರಿಸಿರುತ್ತಾರೆ. ಇಲಾಖೆಗೆ ಅನುಪಾಲನಾ ವರದಿಯನ್ನು ಸರ್ವಸದಸ್ಯರ ಸಭೆಯು ನಡೆದ ಒಂದು ತಿಂಗಳೊಳಗೆ ಸಲ್ಲಿಸಬೇಕಾಗಿದ್ದು ದಿನಾಂಕ 13-10-2025 ರಂದು ಸಲ್ಲಿಸಿರುತ್ತಾರೆ. | |
| **ಸದರಿ ಸಭೆಯಲ್ಲಿ ಕಳೆದ ವರ್ಷದ ಅಂದಾಜು ಆಯವ್ಯಯ ಪತ್ರದ ಮಿತಿಗಿಂತ ಹೆಚ್ಚಿಗೆ ಆಗಿರುವ ವೆಚ್ಚಗಳ ಬಗ್ಗೆ ಅನುಮೋದನೆ ಪಡೆಯಲಾಗಿದೆಯೇ? ವಿವರಿಸಿ :**<br>2024-25ನೇ ಸಾಲಿನಲ್ಲಿ ಮಂಜೂರಾಗಿದ್ದ ಮೊಬಲಗಿಗಿಂತಲೂ ಯಾವುದೇ ವೆಚ್ಚಗಳು ಹೆಚ್ಚಾಗಿ ಖರ್ಚಾಗಿರುವುದಿಲ್ಲ. | |

**ಸದರಿ ಸಭೆಯಲ್ಲಿ ಮುಂದಿನ ವರ್ಷದ ಅಂದಾಜು ಆಯವ್ಯಯ ಪತ್ರ ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ?**

ಹೌದು. ಮುಂದಿನ ವರ್ಷದ ಅಂದಾಜು ಆಯವ್ಯಯ ಪತ್ರ ಮಂಡಿಸಿದ್ದು ದಿನಾಂಕ 13-09-2025 ರಂದು ನೆಡೆದ ಸರ್ವಸದಸ್ಯರ ಸಭಾ ನಡಾವಳಿ ಸಂಖ್ಯೆ 8 ರಂತೆ ಅನುಮೋದನೆ ಪಡೆಯಲಾಗಿರುತ್ತದೆ.

**ಸದರಿ ಸಭೆಯಲ್ಲಿ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ?**

ಹೌದು. ದಿನಾಂಕ 13-09-2025 ರಂದು ನೆಡೆದ ಸರ್ವಸದಸ್ಯರ ಸಭಾ ನಡಾವಳಿ ಸಂಖ್ಯೆ 7 ರಂತೆ ಪರಿಶೋಧಿತ ಲೆಕ್ಕ ಪತ್ರಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಗಿದೆ.

**ಸದರಿ ಸಭೆಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧನೆಯ ಕುರಿತು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಲಾಗಿದೆಯೇ? ನೇಮಕ ಮಾಡಿದಲ್ಲಿ ಲೆಕ್ಕ ಪರಿಶೋಧಕರ ಹೆಸರು/ಪದನಾಮ ಹಾಗೂ ಠರಾವಿನ ಕ್ರಮಾಂಕ ಹಾಗೂ ವಾರ್ಷಿಕ ಮಹಾಸಭೆಯ ದಿನಾಂಕ ಹಾಗೂ ಜಿಲ್ಲಾ ಉಪ ನಿರ್ದೇಶಕರಿಗೆ ವರದಿಸಿದ ದಿನಾಂಕ:**

ಆರ್ ಬಿ ಐ ಸುತ್ತೋಲೆ Ref. no. BLR.DOS.ARG.No.S-595/11.01.111/2025-26 dated July 28, 2025 ರಂತೆ ಆರ್ ಬಿ ಐ ಅನುಮತಿ ಪಡೆದು ರಮೇಶ ಎಂ.ವೈ. & ಕೋ., ಮೈಸೂರು, ಇವರನ್ನು ಬ್ಯಾಂಕಿನ 2025-26ನೇ ಸಾಲಿನ ಶಾಸನಬದ್ದ ಲೆಕ್ಕ ಪರಿಶೋಧಕರಾಗಿ ನೇಮಕಾತಿ ಮಾಡಿಕೊಂಡಿರುತ್ತಾರೆ. ಲೆಕ್ಕ ಪರಿಶೋಧನ ಶುಲ್ಕವಾಗಿ GST ಸೇರಿ ರೂ. 6,91,480.00 ಗಳು ನಿಗಧಿಪಡಿಸಲಾಗಿರುತ್ತದೆ. ಸದರಿ ಮಾಹಿತಿಯನ್ನು ದಿನಾಂಕ 02-09-2025ರಂದು ಜಿಲ್ಲಾ ಉಪ ನಿರ್ದೇಶಕರಿಗೆ ವರದಿಸಿರುತ್ತಾರೆ.

**ವಾರ್ಷಿಕ ಸಭೆಯ ನಡಾವಳಿಗಳ ಬಗ್ಗೆ ಲೆಕ್ಕ ಪರಿಶೋಧಕರ ಟಿಪ್ಪಣಿ:**

ದಿನಾಂಕ 13-09-2025 ರಂದು ವಾರ್ಷಿಕ ಸಭೆ ನೆಡೆದಿದ್ದು ಇದರ ಬಗ್ಗೆ ಕಂಡಿಕೆ 31ರಲ್ಲಿ ವಿವರಿಸಲಾಗಿದೆ.

**32 1 ಸಿಬ್ಬಂದಿ ವರ್ಗ :**

**ಬ್ಯಾಂಕಿನಲ್ಲಿ ಮಂಜೂರಾದ ಕಾರ್ಯ ನಿರ್ವಯಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ:**

ಬ್ಯಾಂಕಿನಲ್ಲಿ ಒಟ್ಟು 419 ವೃಂದ ಬಲ ಮಂಜೂರಾಗಿದ್ದು, ಪ್ರಸ್ತುತ 178 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, 241 ಹುದ್ದೆಗಳು ಖಾಲಿ ಇರುತ್ತದೆ. ವಿವರವಾದ ತಃಖ್ತೆ ವರದಿಯೊಂದಿಗೆ ಲಗತ್ತಿಸಿದೆ.

| ಕ್ರ ಸಂ | ಸರ್ಕಾರಿ ಆದೇಶದ ವಿವರ | ಮಂಜೂರಾದ ಹುದ್ದೆಗಳು |
|---|---|---|
| 1 | CMW/245/CCB.2002 Dt.14-10-2003 | 123 |
| 2 | CMW/307/CCB 2003 Dt.28-02-2004 | 41 |
| 3 | ಸರ್ಕಾರದ ನೋಟಿಫಿಕೇಷನ್ ಸಂಖ್ಯೆ Co:238: CLM:2007 ದಿನಾಂಕ 13.02.2008ರಲ್ಲಿ ಆದ ನಿಯಮಗಳ ತಿದ್ದುಪಡಿಯನ್ವಯ ಆಡಳಿತ ಮಂಡಳಿಯ ದಿನಾಂಕ 04-07-2011ರ ನಡಾವಳಿ ಸಂಖ್ಯೆ (3)ರಂತೆ ಮಂಜೂರಾಗಿರುವ ಹುದ್ದೆಗಳು. | 56 |
| 4 | ಸರ್ಕಾರದ ನೋಟಿಫಿಕೇಷನ್ ಸಂಖ್ಯೆ Co:238: CLM: 2007 ದಿನಾಂಕ 13.02.2008ರಲ್ಲಿ ಆದ ನಿಯಮಗಳ ತಿದ್ದುಪಡಿಯನ್ವಯ ಆಡಳಿತ ಮಂಡಳಿಯ ದಿನಾಂಕ 11-04-2014ರ ನಡಾವಳಿ ಸಂಖ್ಯೆ (29)ರಂತೆ ಮಂಜೂರಾಗಿರುವ ಹುದ್ದೆಗಳು. | 90 |

| | | | |
|---|---|---|---|
| | 5 | ಸರ್ಕಾರದ ನೋಟಿಫಿಕೇಷನ್ ಸಂಖ್ಯೆ Co:238:CLM:2007 ದಿನಾಂಕ 13.02.2008ರಲ್ಲಿ ಆದ ನಿಯಮಗಳ ತಿದ್ದು ಪಡಿಯನ್ವಯ ಆಡಳಿತ ಮಂಡಳಿಯ ದಿನಾಂಕ 06-08-2014ರ ನಡಾವಳಿ ಸಂಖ್ಯೆ (16)ರಂತೆ ಮಂಜೂರಾಗಿರುವ ಹುದ್ದೆಗಳು. | 108 |
| | 6 | ಸರ್ಕಾರದ ನೋಟಿಫಿಕೇಷನ್ ಸಂಖ್ಯೆ Co:238:CLM:2007 ದಿನಾಂಕ 13.02.2008ರಲ್ಲಿ ಆದ ನಿಯಮಗಳ ತಿದ್ದು ಪಡಿಯನ್ವಯ ಆಡಳಿತ ಮಂಡಳಿಯ ದಿನಾಂಕ 25-06-2024ರ ನಡಾವಳಿ ಸಂಖ್ಯೆ 4ಬಿ(10)ರಂತೆ ಮಂಜೂರಾಗಿರುವ ಹುದ್ದೆಗಳು. | 01 |
| | | **ಒಟ್ಟು** | **419** |

**ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ:–**

| **ಕ್ರ. ಸಂ** | **ಹುದ್ದೆಗಳ ವಿವರ** | **ಸಂಖ್ಯೆಗಳಲ್ಲಿ** |
|---|---|---|
| 1 | ಮಂಜೂರಾದ ಹುದ್ದೆಗಳು | 419 |
| 2 | ಭರ್ತಿಯಾಗಿರುವ ಹುದ್ದೆಗಳು | 178 |
| 3 | ಖಾಲಿ ಹುದ್ದೆಗಳು | 241 |

ಖಾಲಿ ಇರುವ 241 ಹುದ್ದೆಗಳನ್ನು ಪದೋನ್ನತಿ ಮತ್ತು ನೇರ ನೇಮಕಾತಿ ರೀತ್ಯಾ ಭರ್ತಿ ಮಾಡಬಹುದಾಗಿದ್ದು ಅಗತ್ಯತೆಗೆ ಅನುಸಾರವಾಗಿ ಈ ಬಗ್ಗೆ ಕ್ರಮವಿಡಬಹುದಾಗಿದೆ. 2025-26ನೇ ಸಾಲಿನಲ್ಲಿ ಯಾವುದೇ ಹುದ್ದೆಗೆ ನೇಮಕ ಮಾಡಿಕೊಂಡಿರುವುದಿಲ್ಲ, ಇದೇ ಸಾಲಿನಲ್ಲಿ ಬ್ಯಾಂಕಿನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಿಬ್ಬಂದಿಗಳ ಪೈಕಿ ಒಟ್ಟು 4 ಮಂದಿ ಕರ್ತವ್ಯದಿಂದ ಬಿಡುಗಡೆ ಹೊಂದಿರುತ್ತಾರೆ, ಈ ಪೈಕಿ ಇಬ್ಬರು ವಯೋನಿವೃತ್ತಿ ಹೊಂದಿದ್ದು, ಒಬ್ಬರು ಮರಣ ಹೊಂದಿದ್ದು ಹಾಗೂ ಮತ್ತೊಬ್ಬರು ರಾಜೀನಾಮೆ ನೀಡಿ ಕರ್ತವ್ಯದಿಂದ ಬಿಡುಗಡೆ ಹೊಂದಿರುತ್ತಾರೆ.

| | | |
|---|---|---|
| | **2** | **ಸಿಬ್ಬಂದಿ ವೇತನ ಶ್ರೇಣಿ ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಯಿಸಿರುವ ಬಗ್ಗೆ:**<br>ವಾರ್ಷಿಕ ಸಭೆಯಲ್ಲಿ ಅನುಮೋದನೆಗೊಂಡಿರುವ ಸಿಬ್ಬಂದಿ ಸೇವಾ ನಿಯಮ ಮತ್ತು ಸೇವಾ ಪುಸ್ತಕಗಳನ್ನು ನಿರ್ವಹಿಸಿರುತ್ತಾರೆ. |
| | **3** | **ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಲಭ್ಯವಿರುವ ಬಗ್ಗೆ:**<br>ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಲಭ್ಯವಿರುತ್ತದೆ. |
| | **4** | **ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಹುದ್ದೆ ಜನ್ಮ ದಿನಾಂಕ ಸೇವೆಗೆ ಸೇರಿದ ದಿನಾಂಕ ವೇತನ ಶ್ರೇಣಿ ಮೂಲ ವೇತನ ವಿದ್ಯಾರ್ಹತೆ ಇತ್ಯಾದಿ ವಿವರಗಳೊಂದಿಗೆ ನೀಡುವುದು:**<br>ಸಿಬ್ಬಂದಿಗಳ ವಿವರಗಳನ್ನು ನಿಗದಿತ ನಮೂನೆಯಲ್ಲಿ ತಯಾರಿಸಿದ್ದು ವರದಿಯೊಂದಿಗೆ ಲಗತ್ತಿಸಿದೆ. |
| | **5** | **ಸಿಬ್ಬಂದಿಯಿಂದ ನಿಬಂಧಕರ ಸುತ್ತೋಲೆಯಂತೆ ಭದ್ರತೆ ಪಡೆದಿರುವ ಬಗ್ಗೆ:**<br>ಸಿಬ್ಬಂದಿಯಿಂದ ಭದ್ರತಾ ಠೇವಣಿ ಪಡೆದಿರುತ್ತಾರೆ. |
| | **6** | **ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು:** |

| | | |
|---|---|---|
| | | ವರದಿ ವರ್ಷದಲ್ಲಿ ಬ್ಯಾಂಕು ರೂ. 22,05,11,025.50ಗಳ ಸಿಬ್ಬಂದಿ ವೇತನ ಹಾಗೂ ಮತ್ತಿತರೆ ಭತ್ಯೆಗಳನ್ನು ಭರಿಸಿರುತ್ತದೆ. |
| | **7** | **ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ ವೆಚ್ಚ:**<br>ಸಿಬ್ಬಂದಿ ವೆಚ್ಚ ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇ. 1.17 ರಷ್ಟಿರುತ್ತದೆ.<br>ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ ನಿಯಮ 17 ರಂತೆ ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಸಿಬ್ಬಂದಿ ವೆಚ್ಚಕ್ಕೆ 2% ಮಿತಿ ವಿಧಿಸಿದ್ದು ಈ ನಿಯಮ ವರದಿ ಸಾಲಿನಲ್ಲಿ ಉಲ್ಲಂಘನೆ ಆಗಿರುವುದಿಲ್ಲ. |
| | **8** | **ವರದಿ ಸಾಲಿನಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿದ್ದಲ್ಲಿ ಅದರ ವಿವರ ಹಾಗೂ ನೇಮಕಾತಿಯಲ್ಲಿ ಏನಾದರೂ ಕಾಯ್ದೆ / ಸುತ್ತೋಲೆ ಉಲ್ಲಂಘನೆ ಇದ್ದಲ್ಲಿ ನಮೂದಿಸುವುದು.**<br>ವರದಿ ಸಾಲಿನಲ್ಲಿ ಯಾವುದೇ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿರುವುದಿಲ್ಲ. |
| | **9** | **ಸಿಬ್ಬಂದಿ ಬೋನಸ್/ಎಕ್ಸ್‌ಗ್ರೇಷಿಯಾ ಪಾವತಿ ಸಹಕಾರ ಕಾಯ್ದೆ ರೀತಿ ಅಥವಾ ಬೋನಸ್ ಕಾಯ್ದೆ ರೀತಿ ಮಾಡಲಾಗಿದೆಯೇ? ಇದು ಸರಿ ಇರುವ ಬಗ್ಗೆ ದೃಢೀಕರಿಸುವುದು :**<br>ಕಳೆದ 6 ವರ್ಷಗಳಿಂದ ಸಿಬ್ಬಂದಿಗಳಿಗೆ ಬೋನಸ್/ಎಕ್ಸ್‌ಗ್ರೇಷಿಯಾ ನೀಡಿರುವುದಿಲ್ಲ, ವರದಿ ಸಾಲಿನಲ್ಲಿ ಬ್ಯಾಂಕಿನ ಲಾಭಾಂಶ ಹೆಚ್ಚಾದ ಕಾರಣ ಎಕ್ಸ್‌ಗ್ರೇಷಿಯಾಕ್ಕಾಗಿ ಅವಕಾಶ ಕಲ್ಪಿಸಲಾಗಿದೆ. |
| | **10** | **ಷೆಡ್ಯೂಲ್ "ಇ" ನಲ್ಲಿರುವ ಸಿಬ್ಬಂದಿ ವಿವರಗಳು ಬ್ಯಾಂಕಿನ ದಾಖಲೆಗಳಿಗೆ ತಾಳೆಯಾಗುತ್ತವೆಯೇ?**<br>ಹೌದು ತಾಳೆ ಇರುತ್ತದೆ. |
